# ಯುಗರಶ್ಮಿ

- ಅತ್ಯಾಶೆಪಡಬಾರದು, ಅದು ನಿಮ್ಮನ್ನು ನಾಶಪಡಿಸುವುದು
- ಇಸ್ಲಾಂ - ಶಾಂತಿಯನ್ನು ಪ್ರತಿಪಾದಿಸುವ ಧರ್ಮ
- ಇಸ್ಲಾಂ ಹಾಗೂ ಜಿಹಾದ್
- ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ ಡಾ। ಅಬ್ದುಸ್ಸಲಾಂ
- ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ
- ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ

ತ್ರೈಮಾಸಿಕ

ಆಗಸ್ಟ್ 2003

ಬೆಲೆ ರೂ. 5.00

"ನಿಮ್ಮ ಪೈಕಿ ಸತ್ಯ ವಿಶ್ವಾಸಿಗಳಾಗಿದ್ದು ಸತ್ಕಾರ್ಯಗಳನ್ನು ಮಾಡುವವರಿಗೆ ಅಲ್ಲಾಹನು, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಪಟ್ಟಿರುವ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರ ಯಾರಾದರೂ ನಿರಾಕರಿಸಿದರೆ ಅವರೇ ಅಧರ್ಮಿಗಳು."

- ಪವಿತ್ರ ಖುರ್‌ಆನ್ (24:56)

# ಯುಗರಶ್ಮಿ

ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ. 5-00 ವಾರ್ಷಿಕ ಚಂದಾ : ರೂ. 20-00 ಅಂಚೆ ಮೂಲಕ : ರೂ. 25-00


ವಿಷಯ ಸೂಚಿಕೆ : ಪುಟ


| | |
|---|---|
| ಖಿಲಾಫತ್ ಅಂತ್ಯ ದಿನದ ತನಕ ನೆಲೆನಿಲ್ಲುವುದು | 1 |
| ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು | 2 |
| ಅಹ್ಮದಿಯಾ ಚತುರ್ಥ ಖಲೀಫ ದಿವಂಗತರಾದರು | 3 |
| ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬ್ ಅಹ್ಮದಿಯಾ ಪಂಚಮ ಖಲೀಫ | 3 |
| ನಮ್ಮ ಪ್ರತಿಜ್ಞೆ- ನಮ್ಮ ಸಾಕ್ಷ್ಯ | 4 |
| ಅತ್ಯಾಶೆಪಡಬಾರದು ; ಅದು ನಿಮ್ಮನ್ನು ನಾಶಪಡಿಸುವುದು | 5 |
| ಇಸ್ಲಾಂ - ಶಾಂತಿಯನ್ನು ಪ್ರತಿಪಾದಿಸುವ ಧರ್ಮ | 9 |
| ಇಸ್ಲಾಂ ಹಾಗೂ ಜಿಹಾದ್ | 15 |
| ನೊಬೆಲ್ ಪ್ರಶಸ್ತಿ ವಿಜೇತ ಖ್ಯಾತ ಮುಸ್ಲಿಂ ವಿಜ್ಞಾನಿ ಡಾ। ಅಬ್ದುಸ್ಸಲಾಂ | 19 |
| ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ - ಬದ್ರ್ ಯುದ್ಧ | 29 |
| ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ - 7 | 31 |
| ಅಹ್ಮದಿಯಾ ವಾರ್ತೆಗಳು | 39 |
| ಸವಿ ನೆನಪು | 41 |



**Statement about ownership and other particulars about the Newspaper Yugarashmi Quantity**

(Form IV See Rule 8)

| | | |
|---|---|---|
| 1. | Place of Publication | : Mangalore |
| 2. | Period of its publication | : Quarterly |
| 3. | Printer's Name | : Muhummed Yusuf |
| | Whether citizen of India? | : Yes |
| | Address | 10-3-1008/1, 1st Floor Ansari Road, Bunder, Mangalore - 575 001 |
| 4. | Publisher's Name | : Muhummad Yusuf |
| | Whether citizen of India | : Yes |
| | Address | : 10-3-1008/1, 1st Floor Ansari Road, Bunder, Mangalore - 575 001 |
| 5. | Editor's Name | : Muhummad Yusuf |
| | Whether citizer of India ? | : Yes |
| | Address | : 10-3-1008/1, 1st Floor Ansari Road, Bunder, Mangalore - 575 001 |
| 6. | Name and address of individuals who own the newspaper and partners or shareholders holding more than one parcent of the capital | Jamath Ahmadiyya 10-23-1008/1, 1st Floor, Ansari Road, Bunder, Mangalore - 575 001 |

I, Muhammed Yusuf hereby declare that the particulars given above are true to the best of my knowledge and belief.

Date : 1-8-2003

Sd/-
Muhummad Yusuf

بِسْمِ اللّٰهِ الرَّحْمٰنِ الرَّحِيْمِ

نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

ಆರಂಭ : 1975 | ಸಂಪುಟ : 21 | ಆಗಸ್ಟ್ 2003 | ಝುಹೂರ್ 1382 | ಸಂಚಿಕೆ : 1 - 2

## ಖಿಲಾಫತ್ ಅಂತ್ಯ ದಿನದ ತನಕ ನೆಲೆನಿಲ್ಲುವುದು

ನೀವು ಸಹ ಎರಡನೆಯ ದಿವ್ಯ ತೇಜಸ್ಸನ್ನು ದರ್ಶಿಸಬೇಕಾದುದು ಅತ್ಯಾವಶ್ಯಕವಾಗಿದೆ. ಅದರ ಆಗಮನ ನಿಮಗೆ ಗುಣಕರವಾಗಿದೆ.......... ಅಲ್ಲಾಹನು ಹೇಳುತ್ತಾನೆ : "ನಿನ್ನನ್ನು ಅನುಸರಿಸುವ ಈ ಜಮಾಅತಿಗೆ ಅನ್ಯರ ಮೇಲೆ ಅಂತ್ಯ ದಿನದ ವರೆಗೆ ನಾನು ವಿಜಯವನ್ನು ನೀಡುವೆನು." ಆದ್ದರಿಂದ ನನ್ನ ಅಗಲಿಕೆಯ ದಿನ ನಿಮ್ಮಲ್ಲಿ ಪ್ರಕಟವಾಗಬೇಕಾದದ್ದೂ ಅನಂತರ ಶಾಶ್ವತ ವಾಗ್ದಾನದ ದಿನ ಪ್ರಕಟಗೊಳ್ಳಬೇಕಾದದ್ದೂ ಅನಿವಾರ್ಯವಾಗಿದೆ. ನಮ್ಮ ದೇವನು ಸತ್ಯಸಂಧನೂ ವಿಶ್ವಸ್ತನೂ ವಾಗ್ದಾನ ಪಾಲಕನೂ ಆಗಿದ್ದಾನೆ. ಅವನು ವಾಗ್ದಾನ ಮಾಡಿದುದನ್ನೆಲ್ಲ ನಿಮಗೆ ಈಡೇರಿಸಿ ತೋರಿಸುವನು. ಈ ದಿವಸ ಲೋಕಾಂತ್ಯದ ದಿನವಾದರೂ ದೊಡ್ಡ ಆಪತ್ತುಗಳು ಎರಗಬೇಕಾದ ಸಮಯವಾದರೂ ಅವನು ಅರುಹಿದ ಕಾರ್ಯಗಳೆಲ್ಲ ನೆರವೇರುವ ವರೆಗೆ ಈ ಲೋಕ ಖಂಡಿತವಾಗಿಯೂ ನೆಲೆ ನಿಲ್ಲುವುದು. (ಅಲ್‌ವಸಿಯ್ಯತ್)



- ಹಝ್ರತ್ ಮಿರ್ಝಾ ಗುಲಾಂ ಅಹ್ಮದ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

- ಹಝ್ರತ್ ಹುದೈಫ (ರಝಿಯಲ್ಲಾಹು ಅನ್‌ಹು) ವರದಿ ಮಾಡುತ್ತಾರೆ : ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ಹೇಳಿದರು : ನಿಮ್ಮಲ್ಲಿ ಅಲ್ಲಾಹನು ಇಚ್ಛಿಸುವ ವರೆಗೆ ನುಬುವ್ವತ್ ನೆಲೆನಿಲ್ಲುವುದು. ಅನಂತರ ಅವನು ಅದನ್ನು ಎತ್ತುವನು. ಅನಂತರ ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್ ಉಂಟಾಗುವುದು. ಅನಂತರ ಅಲ್ಲಾಹನು ಇಚ್ಛಿಸುವಾಗ ಈ ಅನುಗ್ರಹವನ್ನು ಸಹ ಎತ್ತುವನು. ಅನಂತರ ಅವನ ವಿಧಿಯನುಸಾರ ಸ್ವೇಚ್ಛಾಧಿಪತಿಗಳಿಂದ ಆಡಳಿತೆ ಉಂಟಾಗುವುದು. ಇದರಲ್ಲಿ ಜನರು ಕಷ್ಟಪಡುವರು. ಈ ಕಾಲ ಕಳೆಯುವಾಗ ಅವನ ಎರಡನೆಯ ವಿಧಿಯನುಸಾರ ಅದಕ್ಕಿಂತ ಕಠಿಣವಾದ ಬಲಾತ್ಕಾರ ದಿಂದ ಕೂಡಿದ ಆಡಳಿತೆ ಬರುವುದು. ಮತ್ತೆ ಅಲ್ಲಾಹನ ಕರುಣೆ ಉಕ್ಕಿ ಬರುವುದು ; ಅಕ್ರಮದ ಆ ಕಾಲವನ್ನು ಕೊನೆಗೊಳಿಸುವುದು. ಇದರ ನಂತರ ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್ ಉಂಟಾಗುವುದು. ಇದು ಹೇಳಿ ಪೈಗಂಬರರು (ಸ) ನಿಶ್ಶಬ್ದರಾದರು. (ಮಿಶ್ಕಾತ್)

- ಮುಂದೊಂದು ಕಾಲದಲ್ಲಿ ಹಲವಿಧ ಕ್ಷೋಭೆಗಳುಂಟಾಗುವುವು. ಆ ಘಟ್ಟದಲ್ಲಿ ಕುಳಿತುಕೊಳ್ಳುವವನು ನಿಲ್ಲುವವನಿಗಿಂತ, ನಿಲ್ಲುವವನು ನಡೆಯುವವನಿಗಿಂತ, ನಡೆಯುವವನು ಓಡುವವನಿಗಿಂತ ಉತ್ತಮನಾಗಿರುವನು. (ಎಲ್ಲ ಕ್ಷೋಭೆಗಳಿಂದ ನಿಷ್ಕ್ರಿಯನಾಗಿ ಅಗಲಿ ನಿಲ್ಲಬೇಕೆಂದು ತಾತ್ಪರ್ಯ). ಯಾರಾದರೂ ಅದರ ಕಡೆಗೆ ನೋಡುವುದಾದರೆ ಅವನನ್ನು ಅದು ನಾಶಗೊಳಿಸುವುದು. ಯಾರಿಗಾದರೂ ಆ ಘಟ್ಟದಲ್ಲಿ ಅಭಯಾಶ್ರಯವಾಗಲಿ ರಕ್ಷಾಕೇಂದ್ರವಾಗಲಿ ಲಭಿಸಿದರೆ ಅವನು ಅಲ್ಲಿ ಅಭಯ ಪಡೆದುಕೊಳ್ಳಲಿ. (ಬುಖಾರಿ)

- ಅವರ ಆಲಿಮ್‌ಗಳು ಆಕಾಶದ ಕೆಳಗೆ ಅತ್ಯಂತ ನಿಕೃಷ್ಟರಾಗಿರುವರು. ಕ್ಷೋಭೆ ಅವರಿಂದ ಹೊರಟು ಅವರೆಡೆಗೆಯೇ ಮರಳುವುವು. (ಬುಖಾರಿ)

- ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಆ ಅಲ್ಲಾಹನಾಣೆ. ನೀವು ಜನರನ್ನು ಒಳಿತು ಮಾಡಲು ಪ್ರೇರೇಪಿಸಿ ಕೆಡುಕು ಮಾಡುವುದರಿಂದ ಅವರನ್ನು ತಡೆಯಿರಿ. ಅಲ್ಲದಿದ್ದರೆ ನಿಮ್ಮ ಮೇಲೆ ಅಲ್ಲಾಹನಿಂದ ಶಿಕ್ಷೆ ಎರಗಲಿಕ್ಕೆ ಸಾಧ್ಯತೆ ಇದೆ. ನಂತರ ತಡವಾಗಿ ನೀವು ಅಂಗಲಾಚಿದರೂ ಅದು ಸ್ವೀಕರಿಸಲ್ಪಡದಿರಬಹುದು. (ತಿರ್ಮಿದಿ)

- ಯಾರು ನಮ್ಮ ಹಾಗೆ ನಮಾಝ್ ಮಾಡುತ್ತಾನೋ, ನಮ್ಮ ಖಿಬ್ಲಕ್ಕೆ ಮುಖ ತಿರುಗಿಸುತ್ತಾನೋ, ನಾವು 'ದಿಬ್ಹ' ಮಾಡಿದುದನ್ನು ತಿನ್ನುತ್ತಾನೋ ಅವನು ಮುಸ್ಲಿಂ. ಅವನಿಗೆ ಅಲ್ಲಾಹ್ ಮತ್ತು ಅಲ್ಲಾಹನ ಪ್ರವಾದಿ ಖಾತರಿ ಕೊಡುತ್ತಾರೆ. (ಬುಖಾರಿ)

# ಅಹ್ಮದಿಯಾ ಚತುರ್ಥ ಖಲೀಫ ದಿವಂಗತರಾದರು



ಅಹ್ಮದಿಯಾ ಮುಸ್ಲಿಂ ಜಮಾಅತಿನ ಲೋಕೈಕ ಇಮಾಂ ಹಾಗೂ ಚತುರ್ಥ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು 2003 ಎಪ್ರಿಲ್ 19 ರಂದು ಬೆಳಗಾತ 9.30ಕ್ಕೆ ಲಂಡನಿನಲ್ಲಿ ತನ್ನ 74ನೇ ವಯಸ್ಸಿನಲ್ಲಿ ನಿಧನರಾದರು.

"ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್"- ಖಂಡಿತವಾಗಿಯೂ ನಾವು ಅಲ್ಲಾಹನ ಅಧೀನರು; ಅವನ ಬಳಿಗೆಯೇ ನಾವು ಮರಳುವೆವು.

# ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬ್
# ಅಹ್ಮದಿಯಾ ಪಂಚಮ ಖಲೀಫ



2003 ಎಪ್ರಿಲ್ 22ರಂದು ರಾತ್ರಿ 11.40 ಕ್ಕೆ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬ್ ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫರಾಗಿ ಆಯ್ಕೆಯಾದರು.

ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರ ಕಿರಿಯ ಪುತ್ರ ಮಿರ್ಝಾ ಶರೀಫ್ ಅಹ್ಮದ್ ಸಾಹೇಬರ ಪೌತ್ರರಾಗಿದ್ದಾರೆ.

# ನಮ್ಮ ಪ್ರತಿಜ್ಞೆ - ನಮ್ಮ ಸಾಕ್ಷ್ಯ

ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್
ಖಲೀಫತುಲ್ ಮಸೀಹ್ V

**ಅಹ್ಮದಿಯಾ ಮುಸ್ಲಿಂ ಜಮಾಅತಿನ ಐದನೆಯ ಖಲೀಫರು 23-4-2003ರಂದು ಜಾಗತಿಕ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಸಂದರ್ಭದಲ್ಲಿ ಮಾಡಿದ ಭಾಷಣ**



ಓ ಹಝ್ರತ್ ವಾಗ್ದತ್ತ ಮಹ್‌ದೀ ಮಸೀಹರ ಪ್ರೀತಿಯ ಜಮಾಅತ್, ಅವರ ಅಸ್ತಿತ್ವವಾಗಿರುವ ವೃಕ್ಷದ ಫಲ ಸಮೃದ್ಧವಾಗಿರುವ ಶಾಖೆಗಳೇ, ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು.

ನಮ್ಮ ಹೃದಯ ವ್ಯಾಕುಲಗೊಂಡಿದೆ. ಕಣ್ಣುಗಳು ಅಶ್ರುಕಣ ಭರಿತವಾಗಿವೆ. ನಮ್ಮೆಲ್ಲರನ್ನು ಪ್ರೀತಿಸುವ ಗೌರವಾನ್ವಿತ ವ್ಯಕ್ತಿ ನಮ್ಮನ್ನು ಬಿಟ್ಟು ಅಗಲಿದ್ದಾರೆ. ಆದರೆ "ಕುಲ್ಲುಮನ್ ಅಲೈಹಾ ಫಾನ್" (ಅರ್ಥಾತ್, ಈ ಭೂಮಿಯಲ್ಲಿರುವವರೆಲ್ಲರೂ ಮಡಿಯುವರು) ಎಂಬ ದೇವನೀತಿಯ ಮುಂದೆ ನಾವು ಶಿರಬಾಗುತ್ತೇವೆ.

ಜಮಾಅತಿನ ಬಹುಮುಖ ಪ್ರಗತಿಯ ದೃಶ್ಯಗಳನ್ನು ಯಾವುದೇ ವಿಶದೀಕರಣ ಅಗತ್ಯವಿಲ್ಲದ ರೀತಿಯಲ್ಲಿ ನಾವು ನಾಲ್ಕನೆಯ ಖಿಲಾಫತ್‌ನಲ್ಲಿ ಕಂಡೆವು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್, ಹೋಗುವವರನ್ನು ಬೀಳ್ಕೊಡುವ ಮತ್ತು ಬರುವವರನ್ನು ಸ್ವಾಗತಿಸುವ ರೀತಿಯನ್ನು ನಮಗೆ ಹೇಳಿಕೊಟ್ಟ ಪ್ರಕಾರವೇ ಇಂದು ಇಲ್ಲಿ ನಿಂತುಕೊಂಡು ನಾವು ಪ್ರತಿಜ್ಞೆ ಮಾಡುತ್ತೇವೆ: "ಓ ನಮ್ಮನ್ನು ಬಿಟ್ಟು ಅಗಲುವ ದೇಹವೇ, ಎಷ್ಟು ಹೆಚ್ಚು ವೇಗದಿಂದ ತಾವು ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ತಂದ ಧರ್ಮವನ್ನು ಜಗತ್ತಿನೆಲ್ಲೆಡೆ ವಿಜಯಗೊಳಿಸಲಿಕ್ಕಾಗಿ ಹಝ್ರತ್ ವಾಗ್ದತ್ತ ಮಸೀಹರ ದೌತ್ಯ ಸಂಘವನ್ನು ಮುನ್ನಡೆಸಿದ್ದೀರೋ ಅದೇ ಪ್ರಕಾರ ನಾವು ಸದಾ ಈ ದೌತ್ಯ ಸಂಘವನ್ನು ಮುನ್ನಡೆಸಲಿಕ್ಕಾಗಿ ಎಲ್ಲ ವಿಧ ತ್ಯಾಗಗಳಿಗೂ ಸನ್ನದ್ಧರಾಗಿದ್ದೇವೆ. (ಇನ್‌ಶಾ ಅಲ್ಲಾಹ್). ನಿಶ್ಚಯವಾಗಿಯೂ ತಾವು ಈ ಮಹತ್ತರವಾದ ಹೊಣೆಗಾರಿಕೆಯನ್ನು ನೆರವೇರಿಸಿದ್ದೀರೆಂದು ನಾವು ಸಾಕ್ಷ್ಯವಹಿಸುತ್ತೇವೆ. ತಮ್ಮ ಆತ್ಮದ ಮೇಲೆ ಅಲ್ಲಾಹನ ಅಪಾರವಾದ ರಹ್ಮತ್ ಮತ್ತು ಬರ್ಕತ್ ವರ್ಷಿಸಲಿ.

ಆಗಮಿಸಿದ ವ್ಯಕ್ತಿಯನ್ನು ಈ ರೀತಿಯಲ್ಲಿ ಸ್ವಾಗತಿಸಿರಿ : "ಅಲ್ಲಾಹನ ಮೇಲೆ ದೃಢ ವಿಶ್ವಾಸದೊಂದಿಗೆ ನಾವು ಹಝ್ರತ್ ಮುಹಮ್ಮದ್ ಮುಸ್ತಫಾ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ತಂದ ಶಾಂತಿ ಮತ್ತು ಸಮಾಧಾನದ ಸಂದೇಶವನ್ನು ಲೋಕದೆಲ್ಲೆಡೆ ತಲಪಿಸಲಿಕ್ಕಾಗಿಯೂ ಇಡೀ ಜಗತ್ತನ್ನು ಹಝ್ರತ್ ಪೈಗಂಬರರ ಪತಾಕೆಯ ಅಡಿಯಲ್ಲಿ ಒಟ್ಟು ಸೇರಿಸಲಿಕ್ಕಾಗಿಯೂ, ಅದೇ ಪ್ರಕಾರ ಅಹ್ಮದಿಯಾ ಖಿಲಾಫತನ್ನು ನೆಲೆನಿಲ್ಲಿಸಲಿಕ್ಕಾಗಿಯೂ ಎಲ್ಲ ವಿಧ ತ್ಯಾಗಗಳಿಗೂ ಸಿದ್ಧರಾಗಿರುತ್ತೇವೆ. (ಇನ್‌ಶಾ ಅಲ್ಲಾಹ್). ಇದಕ್ಕಾಗಿ ನಾವು ಸದಾ ದುಆ ಮೂಲಕ ತಮಗೆ ನೆರವಾಗಲು ಸನ್ನದ್ಧರಾಗಿದ್ದೇವೆ. ಓ ಅಲ್ಲಾಹ್, ನಿನ್ನ ಸಹಾಯ ದೃಶ್ಯಗಳನ್ನು ಸದಾ ತೋರಿಸಿಕೊಟ್ಟಂತೆಯೇ ಅದಕ್ಕಿಂತ ಮಿಗಿಲಾಗಿ ನೀನು ನಮಗೆ ತೋರಿಸಿಕೊಡು. ನಮ್ಮ ಲೋಪದೋಷಗಳನ್ನು ಮರೆಮಾಚು - ನಿನ್ನ ಅನುಗ್ರಹದಿಂದ ಮಾತ್ರ. ನಿನ್ನ ಕರುಣೆಯ ಕೈಗಳನ್ನು ಎಂದಿಗೂ ನಮ್ಮಿಂದ ತೆಗೆದು ಬಿಡಬೇಡ; ಎಂದಿಗೂ ನಮ್ಮಿಂದ ತೆಗೆದುಬಿಡಬೇಡ; ಎಂದಿಗೂ ನಮ್ಮಿಂದ ತೆಗೆದುಬಿಡಬೇಡ - ಆಮೀನ್ ಯಾ ರಬ್ಬುಲ್ ಆಲಮೀನ್.

# ಅತ್ಯಾಶೆಪಡಬಾರದು; ಅದು ನಿಮ್ಮನ್ನು ನಾಶಪಡಿಸುವುದು

ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್
(ಖಲೀಫತುಲ್ ಮಸೀಹ್ IV)

وَ لَتَجِدَنَّهُمْ اَحْرَصَ النَّاسِ عَلٰى
حَيٰوةٍ ۚ وَمِنَ الَّذِيْنَ اَشْرَكُوْا ۚ يَوَدُّ
اَحَدُهُمْ لَوْ يُعَمَّرُ اَلْفَ سَنَةٍ ۚ وَمَا هُوَ
بِمُزَحْزِحِهٖ مِنَ الْعَذَابِ اَنْ يُّعَمَّرَ ۗ وَ
اللّٰهُ بَصِيْرٌ بِمَا يَعْمَلُوْنَ ﴿٩٧﴾

"ಜನರ ಪೈಕಿ ಬೇರೆಲ್ಲರಿಗಿಂತ ಹೆಚ್ಚು ಐಹಿಕ ಜೀವಿತದಲ್ಲಿ ಅತ್ಯಾಶೆಯನ್ನು ತೋರಿಸುವವರಾಗಿ ನೀನು ಅವರನ್ನೂ ಕೆಲವು ಬಹುದೇವಾರಾಧಕರನ್ನೂ ಕಾಣುವೆ. ಅವರಲ್ಲಿ ಪ್ರತಿಯೊಬ್ಬನೂ ತನಗೆ ಸಾವಿರ ವರ್ಷ ಆಯುಷ್ಯ ಸಿಗುತ್ತಿದ್ದರೆ! ಎಂದು ಬಯಸುತ್ತಾನೆ. ಆದರೆ ಹಾಗೆ ಅವನಿಗೆ ದೀರ್ಘಾಯುಷ್ಯ ದೊರೆತರೂ ಅವನು ಶಿಕ್ಷೆಯಿಂದ ಮುಕ್ತನಾಗಲಾರನು. ಅವರು ಮಾಡುವುದನ್ನೆಲ್ಲ ಅಲ್ಲಾಹನು ಕಾಣುತ್ತಿದ್ದಾನೆ." (ಪವಿತ್ರ ಖುರ್‌ಆನ್ 2:97)

ಮನುಷ್ಯನು ಇಂದು ಭೌತಿಕತೆಯಲ್ಲಿ ಅತ್ಯಾಶೆಯಿಂದ ಜೀವಿಸುತ್ತಿದ್ದಾನೆ. ಅವನಿಗೆ ಮರಣದ ಕುರಿತು ಚಿಂತೆಯಿಲ್ಲ. ಜನರು ದರೋಡೆ ಮಾಡಿ ಮತ್ತು ಕೊಳ್ಳೆ ಹೊಡೆದು ಬದುಕುವುದನ್ನು ಎಲ್ಲೆಡೆಯೂ ಕಾಣುತ್ತಿದ್ದೇವೆ. ಕೊನೆಗೆ ಸಾಯಲಿಕ್ಕಿದೆ ಎಂಬ ನೆನಪು ಕೂಡ ಮನುಷ್ಯನಿಗಿಲ್ಲ. ಹುಟ್ಟಿದವನು ಸಾಯಲೇ ಬೇಕು. ಭೌತಿಕತೆಯ ಆಸಕ್ತಿಯಿಂದ, ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಬೇಕಾಗಿದೆ ಎಂಬ ಚಿಂತೆ ಬಹಳ ತಡವಾಗಿಯೇ ಅವನಿಗೆ ಉಂಟಾಗುತ್ತದೆ.

ಈ ವಿಷಯವನ್ನು ವಿವಿಧ ರೀತಿಯಲ್ಲಿ ಪ್ರತಿಪಾದಿಸುವ ಕೆಲವು ಹದೀಸು (ಪ್ರವಾದಿ ನುಡಿ)ಗಳನ್ನು ನಾನು ಇಂದಿನ ಖುತ್ಬಕ್ಕಾಗಿ ಆಯ್ಕೆ ಮಾಡಿದ್ದೇನೆ.

ಹಝ್ರತ್ ಅನಸ್ (ರಝಿಯಲ್ಲಾಹು ಅನ್‌ಹು) ಅವರಿಂದ ವರದಿ - ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ಹೇಳಿದರು:

"ಮನುಷ್ಯ ಪುತ್ರನು ವೃದ್ಧಾಪ್ಯವನ್ನು ಪಡೆಯುತ್ತಾನೆ. ಆದರೆ ಅವನ ಅತ್ಯಾಶೆ ಮತ್ತು ಹಂಬಲ ಆಗ ಸಹ ಬಾಕಿಯುಳಿಯುತ್ತದೆ." (ಮುಸ್ನದ್ ಅಹ್ಮದ್ ಬಿನ್ ಹಂಬಲ್)

ಅಂದರೆ, ವೃದ್ಧಾಪ್ಯವನ್ನು ಪಡೆದರೂ ಇನ್ನೂ ಹೆಚ್ಚು ಸಂಪಾದಿಸಲು ಪ್ರಯತ್ನ ಅವನಿಂದ ಬಿಟ್ಟುಹೋಗುವುದಿಲ್ಲ. ಅದಕ್ಕೋಸ್ಕರ ಅವನು ಅತಿ ಪ್ರಯತ್ನ ಮಾಡುತ್ತಾನೆ.

ಹಝ್ರತ್ ಅನಸ್ ಇಬ್ನು ಮಾಲಿಕ್ (ರ) ಅವರಿಂದ ವರದಿ- ಹಝ್ರತ್ ಪೈಗಂಬರ್ (ಸ) ಹೇಳಿದರು : "ಮನುಷ್ಯ ಪುತ್ರನ ಬಳಿ ಸ್ವರ್ಣದ ಒಂದು ಕಣಿವೆ ಇದ್ದರೂ ತನಗೆ ಇನ್ನೊಂದು ಕಣಿವೆ ಸಿಗಬೇಕೆಂದು ಅವನು ಬಯಸುತ್ತಾನೆ. ಮಣ್ಣಲ್ಲದೆ ಬೇರೇನೂ ಅವನ ಬಾಯನ್ನು ತುಂಬಲಾರದು. ಪಶ್ಚಾತ್ತಾಪಪಟ್ಟು ಮರಳುವವನ ಪಶ್ಚಾತ್ತಾಪವನ್ನು ಅಲ್ಲಾಹನು ಸ್ವೀಕರಿಸುತ್ತಾನೆ." (ತಿರ್ಮಿದಿ)

ಮನುಷ್ಯನ ಬಾಯಿ ಕೊನೆಗೆ ಮಣ್ಣಿನಿಂದಲೇ ತುಂಬುವುದು. ಅತ್ಯಾಶೆಯುಳ್ಳವನಿಗೆ ತನ್ನ ಬಾಯಿಯನ್ನು ತುಂಬಿಸಲು ಸಾಧ್ಯವಿಲ್ಲ.

ಹಝ್ರತ್ ಕಅಬ್ ಬಿನ್ ಮಾಲಿಕ್ (ರ) ಅವರಿಂದ ವರದಿ- ಹಝ್ರತ್ ಪೈಗಂಬರ್ (ಸ) ಹೇಳಿದರು:

"ಸಂಪತ್ತು ಮತ್ತು ಮಾನ್ಯತೆಯ ಹಂಬಲ ಒಬ್ಬನ ಧರ್ಮಕ್ಕೆ ಎಷ್ಟರ ಮಟ್ಟಿಗೆ ಹಾನಿಯನ್ನು ಮಾಡುತ್ತದೋ ಅಷ್ಟರ ಮಟ್ಟಿಗಿನ ಹಾನಿಯನ್ನು ಹಸಿದು ಕಂಗಾಲಾದ ಎರಡು ತೋಳಗಳನ್ನು ಆಡಿನ ಮಂದೆಗೆ ಬಿಟ್ಟುಬಿಟ್ಟರೆ ಅವು ಮಾಡಲಿಕ್ಕಿಲ್ಲ." (ತಿರ್ಮಿದಿ)

ಹಝ್ರತ್ ಅಬೂಹುರೈರ (ರ) ಅವರಿಂದ ವರದಿ - ಹಝ್ರತ್ ಪೈಗಂಬರ್ (ಸ) ನುಡಿದರು: "ಮನುಷ್ಯನ ಬಹಳ ಕೆಟ್ಟ ಸ್ವಭಾವ ಆಪತ್ಕರವಾದ ಅತ್ಯಾಶೆ ಮತ್ತು ಅಹಿತವಾದ ಭೀರುತ್ವವಾಗಿದೆ." (ಮುಸ್ನದ್ ಅಹ್ಮದ್)

ತನ್ನ ಕೈಯಲ್ಲಿರುವುದು ಮುಗಿದು ಹೋಗುವುದೋ ಎಂದು ಭಯಪಡುವ ಅವಸ್ಥೆ ಭೀರುತ್ವವಾಗಿದೆ. ಅತ್ಯಾಶೆ ಮತ್ತು ಭೀರುತ್ವ ಪರಸ್ಪರ ಒಡನಾಡಿಗಳಾಗಿವೆ.

ಹಝ್ರತ್ ಅಬೂಹುರೈರ (ರ) ಅವರಿಂದ ವರದಿ - ಹಝ್ರತ್ ಪೈಗಂಬರ್ (ಸ) ನುಡಿದರು: "ಅಲ್ಲಾಹನ ಮಾರ್ಗದ ಪರಿಶುದ್ಧವಾದ ಮರಳ ಹರಳು ಮತ್ತು ನರಕದ ಹೊಗೆ ಒಬ್ಬನ ಅಂತರ್ಯದಲ್ಲಿ ಒಟ್ಟು ಸೇರಲಿಕ್ಕಿಲ್ಲ. ಅದೇ ಪ್ರಕಾರ ಒಬ್ಬನ ಮನಸ್ಸಿನಲ್ಲಿ ಸತ್ಯವಿಶ್ವಾಸ ಮತ್ತು ಅತ್ಯಾಶೆ ಒಟ್ಟಿಗೆ ಸೇರಲಿಕ್ಕಿಲ್ಲ." (ನಸಾಈ)

ಹಝ್ರತ್ ಅಬೂಸಈದ್ ಖಿದ್‌ರೀ(ರ) ಅವರಿಂದ ವರದಿ- ಹಝ್ರತ್ ಪೈಗಂಬರ್ (ಸ) ಹೇಳಿದರು : "ನಾನು ಮೂರು ವಿಧ ಸತ್ಯವಿಶ್ವಾಸಿಗಳನ್ನು ಕಾಣುತ್ತೇನೆ. ಒಂದನೆಯ ವರ್ಗದವರು ಅಲ್ಲಾಹನಲ್ಲೂ ಅವನ ಪ್ರವಾದಿಯಲ್ಲೂ ವಿಶ್ವಾಸವಿರಿಸಿ, ಆ ಬಳಿಕ ಯಾವ ರೀತಿಯಲ್ಲೂ ಸಂಶಯಪಡದವರು. ಅವರು ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನ ಮತ್ತು ಜೀವದಿಂದ ಜಿಹಾದ್ ಮಾಡುತ್ತಾರೆ. ಜನರು ತಮ್ಮ ಸಂಪತ್ತನ್ನು ಅಮಾನತ್ತಾಗಿ ವಹಿಸಿಕೊಡುವ ಸತ್ಯವಿಶ್ವಾಸಿಗಳು ಎರಡನೆಯ ವರ್ಗದವರು. ಮೂರನೆಯ ವರ್ಗದ ಸತ್ಯವಿಶ್ವಾಸಿಗಳು, ಅತ್ಯಾಶೆ ಮನಸ್ಸಿನಲ್ಲಿ ಮೂಡಿಬಂದರೆ ಅಲ್ಲಾಹನಿಗೋಸ್ಕರ ಆ ಸ್ವಭಾವವನ್ನು ತ್ಯಜಿಸುವವರಾಗಿದ್ದಾರೆ;" (ಮುಸ್ನದ್ ಅಹ್ಮದ್)

ಸಣ್ಣ ಪ್ರಮಾಣದಲ್ಲಾದರೂ ಅತ್ಯಾಶೆ ಪ್ರತಿಯೊಬ್ಬರಲ್ಲೂ ಇರುತ್ತದೆ. ಆಗಾಗ ಅದು ತಲೆಯೆತ್ತುವುದು. ಅದು ತಲೆಯೆತ್ತುವಾಗ, ಅದು ಅಲ್ಲಾಹನಿಗೆ ಇಷ್ಟವಿಲ್ಲದ ವಿಚಾರವೆಂದು ತಿಳಿದು ಸತ್ಯವಿಶ್ವಾಸಿ ಅದನ್ನು ವರ್ಜಿಸಬೇಕಾಗಿದೆ. ಈ ಮೂರು ವಿಧ ಸತ್ಯವಿಶ್ವಾಸಿಗಳು ಲೋಕದಲ್ಲಿದ್ದಾರೆ. ಯಾರಲ್ಲಿ ಈ ಮೂರು ಗುಣಗಳು ಇವೆಯೋ ಆತನು ಮೂಅ್‌ಮಿನ್ - ಸತ್ಯವಿಶ್ವಾಸಿಯಾಗಿರುತ್ತಾನೆ.

ಹಝ್ರತ್ ಅಬೂಹುರೈರ (ರ) ಅವರಿಂದ ವರದಿ - "ಹಝ್ರತ್ ಪೈಗಂಬರ್ (ಸ) ಹೇಳಿದರು : 'ನಾಶವುಂಟುಮಾಡುವ ಏಳು ವಿಚಾರಗಳನ್ನು ನೀವು ವರ್ಜಿಸಿರಿ.' 'ಅವು ಯಾವುವು?' ಎಂದು ಪೈಗಂಬರರ ಸಂಗಡಿಗರು (ಸಹಾಬತ್) ಕೇಳಿದರು. ಪೈಗಂಬರ್ (ಸ) ಹೇಳಿದರು : 'ಶಿರ್ಕ್ (ದೇವಸಹಭಾಗಿತ್ವ ಕಲ್ಪನೆ), ಅತ್ಯಾಶೆ-ಜಿಪುಣತೆ, ಅಲ್ಲಾಹನು ನಿಷಿದ್ಧಗೊಳಿಸಿದ ಜೀವವನ್ನು ವಧಿಸುವುದು, ಬಡ್ಡಿ ತಿನ್ನುವುದು, ಅನಾಥ ಮಕ್ಕಳ ಸಂಪತ್ತನ್ನು ತಿನ್ನುವುದು, ಯುದ್ಧಕಾಲದಲ್ಲಿ ರಣಾಂಗಣದಿಂದ ಹಿಂದಕ್ಕೋಡುವುದು, ಪರಿಶುದ್ಧೆಯರಾದ ಸ್ತ್ರೀಯರ ಮೇಲೆ ಅಪವಾದ ಹೊರಿಸುವುದು.'" (ನಸಾಈ)

ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ (ರ) ಅವರಿಂದ ವರದಿ - ಹಝ್ರತ್ ಪೈಗಂಬರ್ (ಸ) ಹೇಳಿದರು : "ಅಕ್ರಮ ವರ್ತನೆಗಳಿಂದ ದೂರವಿದ್ದುಕೊಳ್ಳಿರಿ. ಏಕೆಂದರೆ, ಪುನರುತ್ಥಾನ ದಿನದಂದು ಅದು ಕತ್ತಲೆಯಾಗಿ ಮುಂದೆಬರುವುದು. ನಿರ್ಲಜ್ಜೆಯಿಂದಲೂ ವ್ಯರ್ಥವಾದ ಮಾತುಗಳಿಂದಲೂ ದೂರವಿದ್ದುಕೊಳ್ಳಿರಿ. ಏಕೆಂದರೆ, ಅಲ್ಲಾಹನಿಗೆ ಅದು ಇಷ್ಟವಲ್ಲ. ಜಿಪುಣತೆಯಿಂದಲೂ ಅತ್ಯಾಶೆಯಿಂದಲೂ ಮುಕ್ತರಾಗಿರಿ. ಏಕೆಂದರೆ, ಪೂರ್ವಿಕರನ್ನು ನಾಶಪಡಿಸಿದ್ದು ಅದೇ ಆಗಿತ್ತು." (ಮುಸ್ನದ್ ಅಹ್ಮದ್)

ಅಕ್ರಮ ವರ್ತನೆಗಳು ಕತ್ತಲೆಯಾಗಿ ಮುಂದೆ ಬರುವುದೆಂದು ಹೇಳಿದ್ದು ಆಧ್ಯಾತ್ಮಿಕ ನೆಲೆಯಲ್ಲಾಗಿದೆ. ಈ ಹದೀಸಿನಲ್ಲೂ ಹಝ್ರತ್ ಪೈಗಂಬರ್ (ಸ) ಜಿಪುಣತೆ ಮತ್ತು ಅತ್ಯಾಶೆಯನ್ನು ಸೇರಿಸಿ ಹೇಳಿದ್ದಾರೆ. ಈ ಎರಡು ವಿಚಾರಗಳು ಪೂರ್ವಿಕರನ್ನು ನಾಶಪಡಿಸಿವೆಯೆಂದು ಸಹ ಹೇಳಿದ್ದಾರೆ.

ಜಿಪುಣತೆ ಕಾರಣದಿಂದ ಕುಟುಂಬ ಸಂಬಂಧ ಮುರಿದು ಹೋಗುತ್ತದೆ. ನನಗೆ ಬರುವ ದೂರುಗಳಲ್ಲಿ ಹೆಚ್ಚಿನವು ಈ ತರದ್ದಾಗಿವೆ. ಸಹೋದರನು ಸಹೋದರನ ಸಂಪತ್ತನ್ನು ಕಬಳಿಸುತ್ತಾನೆ. ಸಹೋದರನು ಸಹೋದರಿಯ ಸಂಪತ್ತನ್ನು ಕಬಳಿಸುತ್ತಾನೆ. ಹೀಗೆಲ್ಲ ಮಾಡಿ ಎಲ್ಲಿಗೆ ಹೋಗುವುದು ಎಂಬುದರ ಬಗ್ಗೆ ಏನೂ ಚಿಂತೆ ಅವರಿಗಿಲ್ಲ; ಸಾಯಲಿಕ್ಕಿದೆಯೆಂಬ ಪ್ರಜ್ಞೆಯಿಲ್ಲ. ಇಂಥವರ ಪ್ರಾಣಹರಣ ಮಾಡಲು ರಕ್ತದಾಹಿಯಾದ ದೇವದೂತರು ನಿಯೋಜಿಸಲ್ಪಡಬಹುದು. ಅವರು ಇಂಥವರ ಕಣ್ಣಿನ ಮೂಲಕ ಜೀವಹರಣ ಮಾಡುವರು. ಇದೊಂದು ಆಲಂಕಾರಿಕ ಪ್ರಯೋಗವಾಗಿದೆ. ಇವರ ಆತ್ಮವನ್ನು ಸ್ಪರ್ಶಿಸಲಿಕ್ಕೆ ಕೂಡ ದೇವದೂತರು ಸಿದ್ಧರಾಗಲಿಕ್ಕಿಲ್ಲ ಎಂದಾಗಿದೆ ಹೇಳಿದುದರ ತಾತ್ಪರ್ಯ.

ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ (ರ) ಮುಂದುವರಿಸುತ್ತಾರೆ: "ಆ ಪೂರ್ವಿಕ ಜನತೆ ಅವರ ಬಂಧುಗಳೊಡನೆ ಸಂಬಂಧವನ್ನು ಮುರಿದರು. ಅದು ಅವರನ್ನು ಜಿಪುಣತೆಗೆ ಪ್ರೇರೇಪಿಸಿತು. ಹಾಗೆ ಅವರು ಜಿಪುಣರಾದರು. ಅವರನ್ನು ಗಲಭೆಗಳಿಗೂ ದುಷ್ಕೃತ್ಯಗಳಿಗೂ ಪ್ರೇರೇಪಿಸಿದವರು ಆಜ್ಞಾಲಂಘಕರೂ ಅಪರಾಧಿಗಳೂ ಆಗಿಬಿಟ್ಟರು."

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ (ರ) ಅವರಿಂದ ವರದಿ - ಹಝ್ರತ್ ಪೈಗಂಬರ್ (ಸ) ಹೇಳಿದರು : "ಅಕ್ರಮ ವರ್ತನೆಗಳಿಂದ ದೂರವಿದ್ದುಕೊಳ್ಳಿರಿ. ಏಕೆಂದರೆ ಅದು ಕತ್ತಲೆಯಾಗಿ ಪುನರುತ್ಥಾನ ದಿನದಂದು ಮುಂದೆ ಬರುವುದು. ಅತ್ಯಾಶೆ ಮತ್ತು ಜಿಪುಣತೆಯಿಂದ ಮುಕ್ತರಾಗಿರಿ. ಏಕೆಂದರೆ, ಅದು ನಿಮ್ಮ ಪೂರ್ವಿಕರನ್ನು ನಾಶಪಡಿಸಿದ ರೋಗವಾಗಿದೆ. ಪರಸ್ಪರ ಹೊಡೆದು ಕೊಲ್ಲಲಿಕ್ಕೂ ನಿಷಿದ್ಧ ವಸ್ತುಗಳನ್ನು ಧರ್ಮಬದ್ಧಗೊಳಿಸಲಿಕ್ಕೂ ಅದೇ ಅವರನ್ನು ಪ್ರೇರೇಪಿಸಿತು." (ಸಹೀಹ್ ಮುಸ್ಲಿಂ)

ಹಝ್ರತ್ ಅಬ್ಬಾದ್ ಬಿನ್ ಅಬೀ ಸಈದ್ (ರ) ಅವರಿಂದ ವರದಿ - ಅವರು ಹೇಳಿದರು : "ಅಬೂಹುರೈರ (ರ) ಹೇಳುವುದನ್ನು ನಾನು ಕೇಳಿದೆ. ಹಝ್ರತ್ ಪೈಗಂಬರ್ (ಸ) ನಾಲ್ಕು ವಿಚಾರಗಳ ಬಗ್ಗೆ ಅಭಯಯಾಚಿಸಿದ್ದರು. ಒಂದು, ಫಲ ನೀಡದ ಜ್ಞಾನದಿಂದ. ಎರಡು, ಭಯಭಕ್ತಿಯಿಲ್ಲದ ಹೃದಯದಿಂದ. ಮೂರು, ಹಸಿವೆ ಸಹಿಸದ ಆತ್ಮದಿಂದ. ನಾಲ್ಕು, ಸ್ವೀಕರಿಸಲ್ಪಡದ ಪ್ರಾರ್ಥನೆಯಿಂದ." (ನಸಾಈ)

ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಪ್ರಾರ್ಥನೆಯಿಂದ ಮಾತ್ರ ಇಸ್ಲಾಮಿಗೆ ಇಷ್ಟು ದೊಡ್ಡ ವಿಜಯ ಸಿದ್ಧಿಸಿತು. ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್

(ಅಲೈಹಿಸ್ಸಲಾಂ) ಹೇಳುತ್ತಾರೆ :

"ಶತಮಾನಗಳಿಗೆ ಮುಂಚೆ ಅರೇಬ್ಯನ್ ಮರುಭೂಮಿಯಲ್ಲಿ ಒಂದು ಅದ್ಭುತ ಘಟಿಸಿತು. ನೂರುಗಟ್ಟಲೆ ಮೃತಪ್ರಾಯರು ಒಂದೇ ರಾತ್ರಿಯಲ್ಲಿ ಜೀವಂತರಾದರು. ಅದು ಹೇಗಾಯಿತೆಂದು ನಿಮಗೆ ಗೊತ್ತೇ? ಅದು, ಓರ್ವ 'ಫಾನೀಫಿಲ್ಲಾಹ್' (ತನ್ನನ್ನು ದೇವನಿಗೆ ಅರ್ಪಿಸಿಕೊಂಡ ವ್ಯಕ್ತಿ) ರಾತ್ರಿ ವೇಳೆಗಳಲ್ಲಿ ಮಾಡಿದ ದೀರ್ಘ ಪ್ರಾರ್ಥನೆಗಳ ಫಲವಾಗಿತ್ತು."

ನೀವು ಸಹ ಪ್ರಾರ್ಥಿಸಿರಿ. ಅಲ್ಲಾಹನು ಸ್ವೀಕರಿಸುವ ರೀತಿಯಲ್ಲಿ ಪ್ರಾರ್ಥನೆ ಮಾಡುವ ಸೌಭಾಗ್ಯ ಲಭಿಸಲಿಕ್ಕೋಸ್ಕರ ಸಹ ಪ್ರಾರ್ಥಿಸಿರಿ.

ಹಝ್ರತ್ ಕಅ್‌ಬ್ ಬಿನ್ ಅಯಾಝ್ (ರ) ಅವರಿಂದ ವರದಿ - ಅವರು ಹೇಳಿದರು : ಹಝ್ರತ್ ಪೈಗಂಬರ್ (ಸ) ಹೀಗೆ ಹೇಳುವುದನ್ನು ನಾನು ಕೇಳಿದೆ : "ಪ್ರತಿಯೊಂದು ಜನತೆಗೆ ಒಂದು ಪರೀಕ್ಷೆಯಿದೆ. ನನ್ನ ಜನತೆಯ ಪರೀಕ್ಷೆ ಧನವಾಗಿದೆ." (ತಿರ್ಮಿದಿ).

ಇಂದು ಸಹ ಮುಸ್ಲಿಂ ಜನತೆಯ ಪರೀಕ್ಷೆ ಧನವಾಗಿದೆ. ಮೌಲವಿಗಳನ್ನೇ ನೀವು ನೋಡಿರಿ. ಅವರ ವರಮಾನ ಮಾರ್ಗವೇ ಕುಫ್ರಾಗಿದೆ. ಆದ್ದರಿಂದಲೇ ಪೈಗಂಬರ್ (ಸ) ಇದರಿಂದ ಅಭಯಯಾಚಿಸಲು ಉಪದೇಶಿಸಿದ್ದು.

ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ (ರ) ಅವರಿಂದ ವರದಿ - ಹಝ್ರತ್ ಪೈಗಂಬರ್ (ಸ) ಹೇಳಿದರು :

"ಭೂಸೊತ್ತುಗಳನ್ನು ಹೆಚ್ಚುಹೆಚ್ಚಾಗಿ ಖರೀದಿಸಿಡಬೇಡಿರಿ. ಹಾಗೆ ಆದರೆ ನೀವು ಈ ಲೋಕದೊಡನೆ ಹೆಚ್ಚು ಆಸಕ್ತಿಯುಳ್ಳವರಾಗುವಿರಿ." (ತಿರ್ಮಿದಿ)

ಆದರೆ, ಪೈಗಂಬರರ ಕಾಲದಲ್ಲಿ ಕೆಲವರು ಭೂಸೊತ್ತು ಖರೀದಿಸಿದ್ದರು. ಪೈಗಂಬರ್ (ಸ) ಅದರಿಂದ ಅವರನ್ನು ತಡೆದಿರಲಿಲ್ಲ. ಕಾರಣವೇನೆಂದರೆ, ಅವರು ಅದನ್ನೆಲ್ಲ ಅಲ್ಲಾಹನ ಮಾರ್ಗದಲ್ಲಿ ವ್ಯಯಿಸಿದ್ದರು. ಲೋಕದೊಡನೆ ಅವರಿಗೆ ಹೆಚ್ಚಿನ ಆಸಕ್ತಿ ಇರಲಿಲ್ಲ. ಕೇವಲ ಲೋಕದೊಡನೆ ಆಸಕ್ತಿಯಿರುವ ರೀತಿಯಲ್ಲಿ ನೀವು ವರ್ತಿಸಬಾರದೆಂದು ಇದರ ಉದ್ದೇಶವಾಗಿದೆ.

ಹಝ್ರತ್ ಅಬೂಸಈದ್ ಖುದ್‌ರೀ (ರ) ಅವರಿಂದ ವರದಿ - ಹಝ್ರತ್ ಪೈಗಂಬರ್ (ಸ) ಮಿಂಬರಿಗೆ ಹತ್ತಿ ನಿಂತರು. ನಾವೆಲ್ಲರೂ ಸುತ್ತಲೂ ಕುಳಿತೆವು. ಆಗ ಪೈಗಂಬರ್ (ಸ) ಹೇಳಿದರು: "ನಿಮ್ಮ ಮೇಲೆ ಸುಖಲೋಲುಪತೆಯ ಕವಾಟಗಳು ತೆರೆಯಲ್ಪಡುವುವೋ ಎಂದು ನಾನು ಭಯಪಡುತ್ತೇನೆ." (ಸಹೀಹ್ ಮುಸ್ಲಿಂ)

ಹಝ್ರತ್ ಅಬೂಹುರೈರ (ರ) ಅವರಿಂದ ವರದಿ - ಹಝ್ರತ್ ಪೈಗಂಬರ್ (ಸ) ಹೇಳಿದರು: "ಧನದಲ್ಲೂ ಸೃಷ್ಟಿಯಲ್ಲೂ ಮೇಲ್ಮೆ ನೀಡಲ್ಪಟ್ಟವರ ಕಡೆಗೆ ಯಾರಾದರೂ ನೋಡುವುದಾದರೆ ಅದಕ್ಕಿಂತ ಕೇಳ್ಮಟ್ಟದಲ್ಲಿರುವವರ ಕಡೆಗೂ ನೀವು ನೋಡಿರಿ". (ಸಹೀಹ್ ಬುಖಾರಿ)

ಇದು ಬಹಳ ಉನ್ನತ ಮಟ್ಟದ ಒಂದು ಉಪದೇಶವಾಗಿದೆ. ಎಲ್ಲರಿಗೂ ಈ ಉಪದೇಶ ಪ್ರಯೋಜನಕರವಾಗಿದೆ. ಮನುಷ್ಯರೆಡೆಯಲ್ಲಿ ಯಾವುದಾದರೂ ರೀತಿಯಲ್ಲಿ ಕೆಲವರಿಗೆ ಬೇರೆ ಕೆಲವರಿಗಿಂತ ಮೇಲ್ಮೆ ಇರುತ್ತದೆ. ಇಲ್ಲಿ 'ಖುಲ್ಕ್' ಎಂದಲ್ಲ 'ಖಲ್ಕ್' ಎಂದು ಹೇಳಲಾಗಿದೆ. ಅಂದರೆ ಶರೀರ ರಚನೆ, ಮುಖ, ರೂಪ, ಸೌಂದರ್ಯ ಇತ್ಯಾದಿ. ಇದು ಕಾಣುವಾಗ ಅಸೂಯೆ ಹುಟ್ಟುವ ಸಾಧ್ಯತೆಯಿದೆ. ಅದಕ್ಕಿರುವ ಮದ್ದು, ಆ ರೀತಿಯಲ್ಲಿ ಮೇಲ್ಮೆಯಿಲ್ಲದವರನ್ನೂ ನೋಡುವುದಾಗಿದೆ. ಆಗ ಅಲ್ಲಾಹನು ನಿಮಗೆ ದಯಪಾಲಿಸಿದ ಅನುಗ್ರಹವನ್ನು ಮನಗಂಡು ನಿಮ್ಮ ಮನಸ್ಸಿಗೆ ಶಾಂತಿ ಲಭಿಸೀತು.

ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ (ರ) ಅವರಿಂದ ವರದಿ - ಹಝ್ರತ್ ಪೈಗಂಬರ್ (ಸ) ಹೇಳಿದರು: "ವಾಸಿಸಲಿಕ್ಕೆ ಮನೆ, ನಗ್ನತೆ ಮುಚ್ಚಲಿಕ್ಕೆ ವಸ್ತ್ರ, ತಿನ್ನಲಿಕ್ಕೆ ಆಹಾರ ಮತ್ತು ಕುಡಿಯಲಿಕ್ಕೆ ನೀರು ಮನುಷ್ಯ ವಂಶದ ಹಕ್ಕಾಗಿದೆ."

ಈ ಕಾಲದಲ್ಲಿ ಇದರ ಉಲ್ಲಂಘನೆ ಆಗುತ್ತಿದೆ. ಪಾಕಿಸ್ಥಾನದ ಅವಸ್ಥೆಯನ್ನೇ ನೋಡಿರಿ. ಅಲ್ಲಿ ಕುಡಿಯಲಿಕ್ಕೆ ನೀರಿಲ್ಲ. ಬಡವರಿಗೆ ಆಹಾರ ಸಿಗುವುದಿಲ್ಲ. ತತ್ಫಲವಾಗಿ ಜನರು ಅಕ್ರಮವಾಗಿ ವರ್ತಿಸಲು ಪ್ರೇರಿತರಾಗಿದ್ದಾರೆ. ಹಲವರು ಬೆಂಕಿ ಹಚ್ಚಿ ಆತ್ಮಹತ್ಯೆ ಮಾಡುತ್ತಾರೆ. ಇದು ಯಾವುದೂ ಪರಿಹಾರ ಮಾರ್ಗವಲ್ಲ, ಅಂಥವರು ಈ ಲೋಕದಲ್ಲೂ ತಮ್ಮನ್ನು ನರಕದಲ್ಲಿ ಸೇರಿಸಿಕೊಳ್ಳುತ್ತಾರೆ. ಆದರೆ ಅವರು ಅದನ್ನು ತಿಳಿದುಕೊಂಡು ಮಾಡುವುದಲ್ಲ. ಅವರಿಗೆ ಹೇಳಿ ಕಲಿಸಲಿಕ್ಕೂ ಯಾರೂ ಇಲ್ಲ. ನೀರಿಗಾಗಿ ಪಾಕಿಸ್ಥಾನ ತಹತಹಿಸುತ್ತಿದೆ.

ಸಿಂಧ್ ನದಿ ತುಂಬಿ ಹರಿಯುವಾಗ ಒಂದು ಬದಿಯಲ್ಲಿ ನಿಂತು ನೋಡಿದರೆ ಇನ್ನೊಂದು ಬದಿ ಕಾಣುವುದಿಲ್ಲ. ಇಂದು ಆ ನದಿ ಬತ್ತಿ ಬರಡಾಗಿಬಿಟ್ಟಿದೆ. ಜನರು ನದಿಯ ಮರಳಿನಲ್ಲಿ ನಡೆದುಕೊಂಡು ಆಚೆದಡವನ್ನು ಸೇರುತ್ತಾರೆ. ಇದು ಶಿಕ್ಷೆಯಾಗಿದೆ. ಈ ರೀತಿಯಲ್ಲಿ ಶಿಕ್ಷೆಗಳು ಅಲ್ಲಾಹನ ಕಡೆಯಿಂದ ಎರಗುತ್ತವೆ. ಕೆಲವೊಮ್ಮೆ ಬರಗಾಲ ಮತ್ತು ಕೆಲವೊಮ್ಮೆ ಜಲಪ್ರಳಯದಿಂದ ಅವನು ಶಿಕ್ಷಿಸುತ್ತಾನೆ. ಪ್ರವಾದಿ ನೂಹ್ (ಅಲೈಹಿಸ್ಸಲಾಂ) ಅವರ ಚರಿತ್ರೆ ನಿಮಗೆ ಗೊತ್ತಿದೆ. ತಮ್ಮ ಜೀವಿತವನ್ನು ಅಲ್ಲಾಹನಿಗೋಸ್ಕರ ಅರ್ಪಿಸಿದವರನ್ನು ಜಲಕ್ಷಾಮವಾಗಲಿ ಜಲಪ್ರಳಯವಾಗಲಿ ಸ್ಪರ್ಶಿಸಲಿಕ್ಕಿಲ್ಲ. ಅವರಿಗೆ ಅವಶ್ಯವುಳ್ಳ ಜಲ ಸಿಗುತ್ತಲಿರುತ್ತದೆ.

ಹಝ್ರತ್ ಮುತರ್ರಿಫ್ (ರ) ತನ್ನ ತಂದೆಯಿಂದ ವರದಿ ಮಾಡುತ್ತಾರೆ - ಹಝ್ರತ್ ಪೈಗಂಬರ್ (ಸ) ಸೂರಃ 'ಅಲ್‌ಹಾಕುಮುತ್ತಕಾಸ್ಸುರ್' ಓದಿದರು. ಅನಂತರ ಹೇಳಿದರು: "ನನ್ನ ಧನ, ನನ್ನ ಧನ ಎಂದು ಮನುಷ್ಯನು ಹೇಳುತ್ತಾನೆ. ಎಲೈ ಮನುಷ್ಯಾ, ಇದು ನಿನ್ನ ಧನವೇ? ಸರಿ, ನೀನು ಅದರಿಂದ ತಿನ್ನು. ಆ ತಿಂದದ್ದು ಮುಗಿಯಿತು. ನೀನು ಧರಿಸಿದ ವಸ್ತ್ರ ಹಳೆಯದಾಯಿತು. ಆದರೆ ನೀನು ಏನನ್ನು 'ದಾನ' ನೀಡಿದ್ದೀಯೋ ಅದು ಪರಲೋಕದಲ್ಲಿ ನಿನಗೆ ಪ್ರಯೋಜನವಾಗುವುದು." (ಮುಸ್ಲಿಂ)

ಅಂದರೆ ನೀನು ದಾನಕೊಟ್ಟ ಧನ ಮಾತ್ರ ನಿನಗೆ ಪ್ರಯೋಜನಕಾರಿಯಾಗಿದೆ. ಉಳಿದವೆಲ್ಲ ನಾಶವಾಗುವುವು.

ಹಝ್ರತ್ ಇಬ್ನು ಉಮರ್ (ರ) ಅವರಿಂದ ವರದಿ - ಅವರು ಹೇಳಿದರು : ಹಝ್ರತ್ ಪೈಗಂಬರ್ (ಸ) ನನ್ನ ತೋಳನ್ನು ಹಿಡಿದುಕೊಂಡು ನುಡಿದರು : "ನೀನು ಪರದೇಶಿ ಹಾಗೂ ಯಾತ್ರಿಕನೆಂಬಂತೆ ಲೋಕದಲ್ಲಿ ಬದುಕು. ಸಂಜೆಯಾದರೆ ಮುಂಜಾನೆಯನ್ನು ಪ್ರತೀಕ್ಷಿಸಬಾರದು. ಮುಂಜಾನೆಯಾದರೆ ಸಂಜೆಯನ್ನೂ ನಿರೀಕ್ಷಿಸಬಾರದು. ಕಾರಣ, ಯಾವ ವೇಳೆಯಲ್ಲೂ ಮರಣ ಬರಬಹುದು. ಆರೋಗ್ಯವಿರುವಾಗ ಅನಾರೋಗ್ಯ ಕಾಲಕ್ಕೋಸ್ಕರ ಸ್ವಲ್ಪ ತೆಗೆದಿರಿಸು. ಬದುಕಿರುವಾಗ ಮರಣಕ್ಕೋಸ್ಕರ ಸ್ವಲ್ಪ ತೆಗೆದಿರಿಸು." (ತಿರ್ಮಿದಿ)

ಆರೋಗ್ಯದಲ್ಲಿರುವ ಕಾಲದ ಸಂಪಾದನೆಯಿಂದ ಭವಿಷ್ಯತ್‌ಕಾಲಕ್ಕೆ ಸ್ವಲ್ಪ ತೆಗೆದಿರಿಸುವುದು ತವಕ್ಕುಲ್ (ದೇವನ ಮೇಲೆ ಭರವಸೆ)ಗೆ ವಿರುದ್ಧವಲ್ಲ. ಬದಲು, ಅದು ಹಝ್ರತ್ ಪೈಗಂಬರ್(ಸ) ಅವರ ಉಪದೇಶವಾಗಿದೆ. ಇದಕ್ಕನುಸಾರವಾಗಿ ವರ್ತಿಸಿದುದರಿಂದ ನಮಗೆ ತುಂಬಾ ಪ್ರಯೋಜನವಾಗಿದೆ. ಇದು ಅಲ್ಲಾಹನು ಕಲಿಸಿದ ವಿಚಾರವಾಗಿದೆ. ಉತ್ತಮ ಕಾಲ ಬರುವಾಗ ಅದರ ನಂತರ ಕಷ್ಟದ ಕಾಲ ಬರಬಹುದೆಂದು ಭಾವಿಸಿ ಸ್ವಲ್ಪ ತೆಗೆದಿರಿಸಬೇಕಾಗಿದೆ. ಮರಣಕ್ಕೋಸ್ಕರ ತೆಗೆದಿರಿಸಿರಿ ಎಂದು ಹೇಳಿದ್ದು ಮೃತದೇಹವನ್ನು ಹೊದಿಸುವ ವಸ್ತ್ರಕ್ಕೋಸ್ಕರವಲ್ಲ; ಸದಖ ಮತ್ತು ದಾನಧರ್ಮ ಕೊಟ್ಟು ಪರಲೋಕದಲ್ಲಿ ಅದರ ಪ್ರಯೋಜನ ಪಡೆಯಬೇಕು ಎಂಬ ಅರ್ಥದಲ್ಲಾಗಿದೆ.

ಹಝ್ರತ್ ಹಕೀಂ ಬಿನ್ ಹಿಝಾಂ (ರ) ಒಮ್ಮೆ ಪೈಗಂಬರ್ (ಸ)ರವರೊಡನೆ ಸಹಾಯ ಯಾಚಿಸಿದರು. ಪೈಗಂಬರರು ಅದನ್ನು ನೀಡಿದರು. ಹೀಗೆ ಮೂರು ಸಲ ಪುನರಾವರ್ತಿಸಿದರು. ಮೂರನೇ ಸಲ ಹಝ್ರತ್ ಪೈಗಂಬರ್ (ಸ) ನುಡಿದರು: "ಹಕೀಂ, ಧನವು ಬಹಳ ಉತ್ತಮ ಹಾಗೂ ಮಧುರವುಳ್ಳದಾಗಿದೆ. ಆದರೆ ತನ್ನ ಕಾಲಿನ ಮೇಲೆ ನಿಲ್ಲುವುದರಲ್ಲಿ ಅನುಗ್ರಹವಿದೆ." ಇದನ್ನು ಕೇಳಿದಾಗ ಹಕೀಂ ಬಿನ್ ಹಿಝಾಂ (ರ) ಹೇಳಿದರು : "ಅಲ್ಲಾಹನ ಪ್ರವಾದಿವರ್ಯರೇ, ನಾನು ತಮ್ಮಿಂದ ಹೊರತು ಬೇರೆ ಯಾರಿಂದಾಗಲಿ ಏನನ್ನೂ ಕೇಳಲಾರೆ, ಏನನ್ನೂ ಪಡೆಯಲಾರೆ ಎಂದು ಅಲ್ಲಾಹನ ಆಣೆಹಾಕುತ್ತೇನೆ." ಇದರ ನಂತರ ಹಕೀಂ ಬಿನ್ ಹಿಝಾಂ(ರ) ದೀರ್ಘಕಾಲ ಬದುಕಿದ್ದರು. ಅವರಿಗೆ ಹಝ್ರತ್ ಅಬೂಬಕರ್ (ರ) ಮತ್ತು ಹಝ್ರತ್ ಉಮರ್ (ರ) ಸಹಾಯ ನೀಡಲು ಉದ್ಯುಕ್ತರಾದಾಗಲೆಲ್ಲ ಸಂತೋಷದಿಂದ ಅವರು ಅದನ್ನು ನಿರಾಕರಿಸಿದರು.

ಬೇರೊಂದು ವಿಚಾರ, ಅಧಿಕಾರ ಸ್ಥಾನದ ಹಂಬಲವಾಗಿದೆ. ಹಝ್ರತ್ ಅಬೂ ಮೂಸಾ (ರ) ಅವರಿಂದ ವರದಿ - ಅವರು ಹೇಳಿದರು : "ನಾನು ಮತ್ತು ನನ್ನ ಜನತೆಗೆ ಸೇರಿದ ಇಬ್ಬರು ಹಝ್ರತ್ ಪೈಗಂಬರ್ (ಸ)ರವರ ಪವಿತ್ರ ಸನ್ನಿಧಿಯಲ್ಲಿದ್ದೆವು. ಒಬ್ಬ ಹೇಳಿದ : 'ಅಲ್ಲಾಹನ ಪ್ರವಾದಿವರ್ಯರೇ, ನನ್ನನ್ನು ಆಡಳಿತಾಧಿಕಾರಿಯನ್ನಾಗಿ ಮಾಡಬೇಕು'. ಹಾಗೆಯೇ ಇನ್ನೊಬ್ಬನು ಸಹ ಹೇಳಿದನು. ಪೈಗಂಬರ್ (ಸ) ಹೇಳಿದರು : 'ಸ್ಥಾನವನ್ನು ಕೇಳಿ ಪಡೆಯುವವರನ್ನು ನಾವು ಆ ಸ್ಥಾನದಲ್ಲಿ ಕುಳ್ಳಿರಿಸುವುದಿಲ್ಲ. ಅದಕ್ಕೋಸ್ಕರ ಹಂಬಲಿಸುವವರನ್ನು ಕೂಡ.' " (ಬುಖಾರಿ)

ನಮ್ಮ ಜಮಾಅತಿನ ವ್ಯವಸ್ಥೆ ಸಹ ಇದೇ ರೀತಿಯಾಗಿದೆ. ಒಬ್ಬನು ಸ್ವಯಂ ತನಗೆ ಓಟು ನೀಡಬಾರದು. ಯಾರಾದರೂ ಸ್ವಯಂ ತನಗೋಸ್ಕರ ಓಟು ನೀಡಿದ್ದು ಅಥವಾ ಓಟು ಗಿಟ್ಟಿಸಲು ಪ್ರಚಾರ ಮಾಡಿದ್ದು ತಿಳಿದರೆ, ಆತನು ಜಯಗಳಿಸಿದರೂ ಆತನ ಆಯ್ಕೆಯನ್ನು ರದ್ದುಗೊಳಿಸಲಾಗುವುದು. ಇದು ಪೈಗಂಬರ್ (ಸ)ರವರ ಪ್ರಬಲವಾದ ರೂಢಿಯ ಆಧಾರದಲ್ಲಾಗಿದೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಂ) ಹೇಳುತ್ತಾರೆ : "ಇಹಲೋಕದೊಡನೆ ನಿಮಗಿರುವ ಅತಿ ಮೋಹ ಪರಲೋಕದ ಅನ್ವೇಷಣೆಯಿಂದ ನಿಮ್ಮನ್ನು ತಡೆಯಿತು. ಹಾಗೆ ನೀವು ಸಮಾಧಿಗಳಿಗೆ ತಲಪಿದಿರಿ. ಇಹಲೋಕದ ಮೇಲೆ ನೀವು ಪ್ರೀತಿಯಿಡಬಾರದು. ಈ ಲೋಕವನ್ನು ಪ್ರೀತಿಸುವುದು ಒಳ್ಳೆಯದಲ್ಲವೆಂದು ಬೇಗನೇ ನೀವು ತಿಳಿಯುವಿರಿ."

ಕಿಶ್ತೀ ನೂಹ್ ಎಂಬ ಗ್ರಂಥದಲ್ಲಿ ಅವರು ಹೀಗೆ ಹೇಳುತ್ತಾರೆ: "ಎಲೈ ಧನಿಕರೇ, ರಾಜರುಗಳೇ, ಯಜಮಾನರೇ, ಅಲ್ಲಾಹನಿಗೆ ಭಯಪಡುವವರೂ ಅವನ ಮಾರ್ಗದಲ್ಲಿ ಪರಿಶ್ರಮಿಸುವವರೂ ನಿಮ್ಮ ಪೈಕಿ ಬಹಳ ಕಮ್ಮಿ. ಲೋಕದ ಸಂಪತ್ತನ್ನು ಪ್ರೀತಿಸುವವರು ನಿಮ್ಮಲ್ಲಿ ಹೆಚ್ಚಿನವರು. ಹಾಗೆ ನಿಮ್ಮ ಜೀವಿತವನ್ನು ನೀವು ವ್ಯರ್ಥವಾಗಿ ಸವೆಸುತ್ತೀರಿ. ಮರಣದ ಬಗ್ಗೆ ನೀವು ಜ್ಞಾಪಿಸುವುದಿಲ್ಲ."

ಅವರು ಮಲ್‌ಫೂಝಾತ್‌ನಲ್ಲಿ ಹೀಗೆ ಹೇಳುತ್ತಾರೆ : "(ಮನುಷ್ಯರಲ್ಲಿರುವ) ಒಂದು ದುಸ್ಸ್ವಭಾವ ಜಿಪುಣತೆಯಾಗಿದೆ. ಅಲ್ಲಾಹನು ಕರುಣೆಯಿಂದ ವರ್ತಿಸುತ್ತಾನೆ. ಆದರೆ, ಮನುಷ್ಯನು ಸಹಜೀವಿಗಳ ಮೇಲೆ ಕರುಣೆ ತೋರಿಸುವುದಿಲ್ಲ. ನಗ್ನರಾಗಿಯೂ ಹಸಿವೆಯಿಂದಲೂ ಇರುವ ನೆರೆಕರೆಯವರನ್ನು ಅವನು ಗಮನಿಸುವುದಿಲ್ಲ. ಮುಸ್ಲಿಮರೊಡನೆ ತೋರಿಸಬೇಕಾದ ಕರ್ತವ್ಯವನ್ನು ನೆರವೇರಿಸುವುದಿಲ್ಲ. ಸ್ವಯಂ ಲೋಕದ ಸಂಪತ್ತನ್ನು ಬಾಚಿ ಶೇಖರಿಸುವನಾದರೂ ಸುತ್ತುಮುತ್ತು ಇರುವವರೊಡನೆ

*(44ನೇ ಪುಟಕ್ಕೆ)*

# ಇಸ್ಲಾಮ್ - ಶಾಂತಿಯನ್ನು ಪ್ರತಿಪಾದಿಸುವ ಧರ್ಮ

ಅಬ್ದುಲ್ ಗನಿ ಜಹಾಂಗೀರ್ ಖಾನ್

ಇಂದಿನ ಕಾಲದಲ್ಲಿ ಇಸ್ಲಾಮ್ ಧರ್ಮದ ಕುರಿತು ಪ್ರಸ್ತಾಪವನ್ನು ಆಲಿಸಿದವರು ಕೂಡಲೇ "ಏನೋ ತೊಂದರೆ ಸಂಭವಿಸಲಿದೆ" ಎಂದು ಯೋಚಿಸಲು ತೊಡಗುತ್ತಿರುವುದು ಬಹಳ ಆತಂಕಕಾರಿ ಸನ್ನಿವೇಶವಾಗಿದೆ. ಇಸ್ಲಾಮಿಕ ದೇಶಗಳಲ್ಲಿರುವ ಅಸ್ಥಿರವಾದ ಮತ್ತು ಜಟಿಲವಾದ ರಾಜಕೀಯ ಪರಿಸ್ಥಿತಿಗಳನ್ನು ಗಮನಿಸುವ ಒಬ್ಬ ಸಾಮಾನ್ಯ ಮನುಷ್ಯನು ಇಸ್ಲಾಮ್ ಧರ್ಮದೊಂದಿಗೆ ಶಾಂತಿಯನ್ನು ಸಮನ್ವಯಗೊಳಿಸಲಾರನು.

ನಾನು ಒಂದು ಸಂಗತಿಯನ್ನು ಸ್ಪಷ್ಟಗೊಳಿಸಲು ಬಯಸುತ್ತೇನೆ. ನಾನು ಪ್ರಸ್ತಾಪಿಸಲು ಉದ್ದೇಶಿಸಿರುವುದು ಏಕದೇವನಾದ ಅಲ್ಲಾಹನು ತನ್ನ ಸಂದೇಶವಾಹಕರಾದ ಹಝ್ರತ್ ಮುಹಮ್ಮದ್ ಪೈಗಂಬರರಿಗೆ (ಅಲ್ಲಾಹನ ಶಾಂತಿ ಮತ್ತು ಆಶೀರ್ವಾದ ಅವರ ಮೇಲೆ ಸುರಿಸಲ್ಪಡಲಿ) ಅವತೀರ್ಣಗೊಳಿಸಿದ ಇಸ್ಲಾಮ್ ಧರ್ಮದ ಕುರಿತಾಗಿದೆ.

ಇಸ್ಲಾಮ್ ಧರ್ಮದ ಪವಿತ್ರ ಉಪದೇಶಗಳಿಂದ ದೂರಸರಿದ ಮುಸ್ಲಿಮರನ್ನು ಪ್ರತಿನಿಧೀಕರಿಸಲು ಮತ್ತು ಅವರ ನಿಲುವನ್ನು ಪ್ರತಿಪಾದಿಸಲು ನಾನು ಉದ್ದೇಶಿಸುವುದಿಲ್ಲ. ಅವರ ಪೈಕಿ ಬಹುತೇಕ ಜನರು ಜೀವಿಸುತ್ತಿರುವ ರೀತಿ ಮತ್ತು ಅವರು ಜನರ ಮುಂದಿರಿಸುವ ಇಸ್ಲಾಮ್ ನಿಶ್ಚಯವಾಗಿಯೂ ಶಾಂತಿಯನ್ನು ನಿರಾಕರಿಸುತ್ತದೆ ಮತ್ತು ಆ ಕಾರಣದಿಂದ ಅವರು ಇಸ್ಲಾಮನ್ನು ಪ್ರತಿನಿಧೀಕರಿಸುವುದಿಲ್ಲ.

ನಾನು ಇನ್ನೊಂದು ಮುಖ್ಯ ವಿಷಯವನ್ನು ಸ್ಪಷ್ಟಗೊಳಿಸಲು ಬಯಸುತ್ತೇನೆ. ಒಬ್ಬನು ತನ್ನ ಊಹಾಪೋಹಗಳಿಗೆ ಅನುಸಾರವಾಗಿ ಸುಂದರ ತತ್ವಗಳನ್ನು ರೂಪಿಸಿ ಆ ತತ್ವಗಳು ಇಂತಿಂತಹ ಧರ್ಮದಲ್ಲಿದೆ ಎಂದು ಸುಲಭವಾಗಿ ಹೇಳಲು ಸಾಧ್ಯವಿದೆ. ಹೀಗೆ ಪ್ರಸ್ತಾಪಿಸಿದ ತತ್ವಗಳು ಎಷ್ಟು ಆಕರ್ಷಕವಾಗಿದ್ದರೂ ಆ ತತ್ವಗಳು ಸೂಚಿಸಲಾದ ಧರ್ಮದ ದೈವಿಕ ಗ್ರಂಥಗಳಲ್ಲಿ ನಾವು ಎಷ್ಟು ಗಾಢವಾಗಿ ಅಧ್ಯಯನ ಮಾಡಿದರೂ ಕಾಣಿಸದಿರಬಹುದು. ಆದುದರಿಂದ ಒಂದು ಧರ್ಮದ ಧಾರ್ಮಿಕ ಗ್ರಂಥಗಳಲ್ಲಿರದಂತಹ ತತ್ವಗಳು ಆ ಧರ್ಮದಲ್ಲಿದೆ ಎಂದು ಹೇಳುವುದು ಅಸತ್ಯವೂ ಅಪ್ರಾಮಾಣಿಕವೂ ಆಗಿದೆ. ಆದುದರಿಂದ ನಾನು ಇಸ್ಲಾಮ್ ಧರ್ಮವನ್ನು ಪ್ರತಿನಿಧೀಕರಿಸಿ ನನ್ನ ಯೋಚನೆಗನುಸಾರವಾಗಿ ಪ್ರಸ್ತಾಪಿಸಲಾರೆನು. ನಾನು ಇಸ್ಲಾಮ್ ಧರ್ಮದ ನಿಜವಾದ ಸ್ವರೂಪವನ್ನು ಬಹಿರಂಗಗೊಳಿಸಲು ಪವಿತ್ರ ಖುರ್‌ಆನನ್ನು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರು (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ಅದಕ್ಕೆ ನೀಡಿದ ವ್ಯಾಖ್ಯಾನವನ್ನು ಮಾತ್ರ ಅವಲಂಬಿಸುವೆನು.

ಇಸ್ಲಾಮ್ ಧರ್ಮವು "ಶಾಂತಿ" ಎಂಬ ಅರ್ಥವನ್ನು ಹೊಂದಿದ ಹೆಸರನ್ನು ಪಡೆದಿರುವ ಏಕ ಮಾತ್ರ ಧರ್ಮವಾಗಿದೆ. ಅದರ ಇನ್ನೊಂದು ಅರ್ಥ : "ದೇವೇಚ್ಛೆಗೆ ವಿಧೇಯತೆ" ಎಂದಾಗಿದೆ. ಏಕ ದೇವನಾದ ಅಲ್ಲಾಹನ ಇಚ್ಛೆಗೆ ಮತ್ತು ಆಜ್ಞೆಗಳಿಗೆ ವಿಧೇಯನಾಗುವ ಮೂಲಕ ಒಬ್ಬನು "ಮುಸ್ಲಿಮ್" ಆಗುತ್ತಾನೆ. ಮುಸ್ಲಿಮನು ಅಲ್ಲಾಹನೊಂದಿಗೆ ಶಾಂತಿ ಸಂಬಂಧ ಹೊಂದಿಕೊಂಡು ಇತರರಿಗೆ ಶಾಂತಿಯ ಆಕರನಾಗಿರುತ್ತಾನೆ.

ಏಕದೇವನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ತನ್ನನ್ನು "ಅಸ್ಸಲಾಮ್" ಎಂದು ಹೆಸರಿಸಿದ್ದಾನೆ. ಅವನು ಶಾಂತಿ ಸ್ವರೂಪನಾಗಿದ್ದಾನೆ. ಅವನು ಶಾಂತಿಯ ಮೂಲಸ್ಥಾನವಾಗಿದ್ದಾನೆ. ಅವನು ತನ್ನ ಎಲ್ಲಾ ಸೃಷ್ಟಿಗಳಿಗೆ ಶಾಂತಿಯನ್ನು ಬಯಸುತ್ತಾನೆ. ಅದನ್ನು ಯಾವುದೇ ವ್ಯಕ್ತಿಗೆ, ಯಾವುದೇ ಗೋತ್ರಕ್ಕೆ ಅಥವಾ ಜನಾಂಗಕ್ಕೆ ಸೀಮಿತಗೊಳಿಸಲು ಅವನು ಇಚ್ಛಿಸುವುದಿಲ್ಲ. "ದೇವನ ವಿಶಿಷ್ಟ ಕೃಪೆಗೆ ಪಾತ್ರರು", "ದೇವನ ವಿಶಿಷ್ಟ ಕೃಪೆಗೆ ಪಾತ್ರರಾಗದ ಅನ್ಯ ಜನರು" ಎಂಬ ಭೇದ ಭಾವನೆಗಳು ಇಸ್ಲಾಮ್‌ನಲ್ಲಿ ಇಲ್ಲ. ಮೇಲ್ಜಾತಿ, ಕೀಳ್ಜಾತಿ ಅಥವಾ ಅಸ್ಪೃಶ್ಯರು ಎಂಬ ತತ್ವಗಳು ಇಸ್ಲಾಮ್‌ನಲ್ಲಿ ಇಲ್ಲ. ಎಲ್ಲಾ ಮನುಷ್ಯರು ಸಮಾನ ಮತ್ತು ದೇವನಿಂದ ಲಭಿಸುವ ಎಲ್ಲಾ ಮಾರ್ಗದರ್ಶನಗಳನ್ನು ಪಡೆಯಲು ಸರಿಸಮಾನವಾದ ಹಕ್ಕನ್ನು ಪಡೆದವರು ಎಂದು ಇಸ್ಲಾಮ್ ಘೋಷಿಸುತ್ತದೆ.

ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯದಲ್ಲಿ ಅಲ್ಲಾಹನು ಹೀಗೆ ಘೋಷಿಸುತ್ತಾನೆ: **"ಎಲ್ಲ ಸ್ತುತಿಗಳು ಸಕಲ ಲೋಕಗಳ ಪ್ರಭುವಾದ ಅಲ್ಲಾಹನಿಗೆ ಸಲ್ಲುತ್ತವೆ."** ಅಲ್ಲಾಹನು ಎಲ್ಲ ಜನರ ಮತ್ತು ಎಲ್ಲ ಜೀವಿಗಳ ಪ್ರಭುವಾಗಿದ್ದಾನೆ. ಅವರು ಎಲ್ಲಿ ಜೀವಿಸಿದ್ದರೂ ಅಲ್ಲೆಲ್ಲಾ ಅವನ ಪ್ರಭುತ್ವ ವ್ಯಾಪಿಸಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 7 ವಚನ 159ರಲ್ಲಿ ಅಲ್ಲಾಹನು ಪ್ರವಾದಿಯವರೊಂದಿಗೆ ಹೀಗೆ ಆಜ್ಞಾಪಿಸಿರುತ್ತಾನೆ:

**"ನೀನು ಹೇಳು : ಓ ಮನುಷ್ಯರೇ, ನಾನು ನಿಮಗೆಲ್ಲರಿಗಾಗಿ ಅಲ್ಲಾಹನಿಂದ ಆಗಮಿಸಿದ ದೂತನಾಗಿದ್ದೇನೆ. ಆಕಾಶಗಳ ಮತ್ತು ಭೂಮಿಯ ಅರಸೊತ್ತಿಗೆ ಅವನಿಗೆ ಸೇರಿದೆ. ಅವನ ಹೊರತು ಅನ್ಯ ಆರಾಧ್ಯನಿಲ್ಲ."**

ಪವಿತ್ರ ಖುರ್‌ಆನ್ ಅಧ್ಯಾಯ 14 ವಚನ 2ರಲ್ಲಿ ಹೀಗೆ ಇದೆ:

**"ನಾನು ಅಲ್ಲಾಹನು, ಎಲ್ಲವನ್ನೂ ಕಾಣುತ್ತಿರುವವನು. ಇದೊಂದು ಗ್ರಂಥ'ವಾಗಿದೆ. ಇದನ್ನು ನಾವು ನಿನಗೆ ಅವತೀರ್ಣಗೊಳಿಸಿದುದು ಎಲ್ಲ ಜನರನ್ನು ಎಲ್ಲ ವಿಧ ಅಂಧಕಾರದಿಂದ ಬೆಳಕಿನ ಕಡೆಗೆ ಅವರ ಪ್ರಭುವಿನ ಆಜ್ಞೆ ಪ್ರಕಾರ ತರಲಿಕ್ಕಾಗಿದೆ - ಪ್ರತಾಪಶಾಲಿಯೂ ಸ್ತುತ್ಯರ್ಹನೂ ಆಗಿರುವವನ ಮಾರ್ಗದ ಕಡೆಗೆ."**

ಎಲ್ಲರೂ ದೇವನ ಪ್ರೀತಿ ಮತ್ತು ಕರುಣೆಗೆ ಪಾತ್ರರಾಗಿದ್ದಾರೆ ಎಂದು ಘೋಷಿಸಿದ ಇಸ್ಲಾಮ್ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆಗೆ ಶಾಂತಿ ಮತ್ತು ಸಮಾಧಾನದ ಉದ್ಭವ ಸ್ಥಾನವಾಗಿದೆ. "ನನ್ನ ಸಂದೇಶವನ್ನು ಈ ಜನಾಂಗದವರಿಗೆ ತಲಪಿಸು. ಆ ಜನಾಂಗದವರಿಗೆ ತಲಪಿಸಬೇಡ" ಎಂದು ದೇವನು ಆಜ್ಞಾಪಿಸುವುದಿಲ್ಲ. "ನನ್ನ ಸಂದೇಶವನ್ನು ಎಲ್ಲ ಜನರಿಗೆ ತಲಪಿಸು" ಎಂದು ದೇವನು ಹೇಳುತ್ತಾನೆ.

ಪವಿತ್ರ ಖುರ್‌ಆನ್ ಅಧ್ಯಾಯ 3 ವಚನ 104ರಲ್ಲಿ ಮನುಷ್ಯರ ವಿಶ್ವ ಭ್ರಾತೃತ್ವವನ್ನು ಘೋಷಿಸುತ್ತದೆ:

"ನೀವೆಲ್ಲರೂ ದೇವಪಾಶವನ್ನು ಬಲವಾಗಿ ಹಿಡಿದುಕೊಳ್ಳಿರಿ. ನೀವು ಚದುರಿ ಹೋಗಬೇಡಿರಿ. ನೀವು (ಪರಸ್ಪರ) ಶತ್ರುಗಳಾಗಿದ್ದಾಗ ಅಲ್ಲಾಹನು ನಿಮಗೆ ನೀಡಿದ ಅನುಗ್ರಹವನ್ನು ಸ್ಮರಿಸಿರಿ. ಅವನು ನಿಮ್ಮ ಹೃದಯಗಳನ್ನು ಪ್ರೀತಿಯಿಂದ ಒಗ್ಗೂಡಿಸಿದನು. ಅವನ ಅನುಗ್ರಹದ ಫಲವಾಗಿ ನೀವು ಸಹೋದರರ ಹಾಗೆ ಆದಿರಿ. ನೀವು ಬೆಂಕಿಯ ಒಂದು ಕುಂಡದ ಅಂಚಿನಲ್ಲಿದ್ದಿರಿ. ಅವನು ನಿಮ್ಮನ್ನು ಅದರಿಂದ ರಕ್ಷಿಸಿದನು. ಅಲ್ಲಾಹನು ಈ ರೀತಿ ತನ್ನ ಆಜ್ಞೆಗಳನ್ನು ನೀವು ಮಾರ್ಗದರ್ಶನ ಪಡೆಯಲಿಕ್ಕಾಗಿ ವಿವರಿಸುತ್ತಾನೆ."

ವಿವಿಧ ವರ್ಣದ, ವಿವಿಧ ಭಾಷೆಗಳ ಮತ್ತು ವಿವಿಧ ಜನಾಂಗಗಳ ಮಧ್ಯೆ ಶಾಂತಿಯನ್ನು ಸ್ಥಾಪಿಸಲು ಇಸ್ಲಾಮ್ ತನ್ನ ಆರಂಭದ ಘಟ್ಟದಲ್ಲಿಯೇ ಉದ್ದೇಶಪಟ್ಟಿದೆ. ಪವಿತ್ರ ಖುರ್‌ಆನ್ ಅಧ್ಯಾಯ 30 ವಚನ 23 ಹೀಗಿದೆ: "ಅವನ (ಎಂದರೆ ದೇವನ) ಚಿಹ್ನೆಗಳಲ್ಲಿ ಆಕಾಶಗಳ ಮತ್ತು ಭೂಮಿಯ ಸೃಷ್ಟಿ, ನಿಮ್ಮ ಭಾಷೆಗಳ ಮತ್ತು ನಿಮ್ಮ ವರ್ಣಗಳ ವ್ಯತ್ಯಾಸಗಳು ಸೇರಿವೆ. ನಿಶ್ಚಯವಾಗಿಯೂ ಅದರಲ್ಲಿ ಎಲ್ಲಾ ಜ್ಞಾನಿಗಳಿಗೆ ದೃಷ್ಟಾಂತಗಳಿವೆ."

ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 14 ಹೀಗಿದೆ: "ಓ ಜನರೇ, ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದ್ದೇವೆ. ನಾವು ನಿಮ್ಮನ್ನು ಗೋತ್ರಗಳಾಗಿಯೂ ಬುಡಕಟ್ಟುಗಳಾಗಿಯೂ ಮಾಡಿದ್ದೇವೆ - ನೀವು ಒಬ್ಬರಿನ್ನೊಬ್ಬರನ್ನು ಗುರುತಿಸಲಿಕ್ಕಾಗಿ. ನಿಮ್ಮ ಪೈಕಿ ಹೆಚ್ಚು ಭಯಭಕ್ತಿ ಹೊಂದಿರುವವನೇ ನಿಶ್ಚಯವಾಗಿಯೂ ಅಲ್ಲಾಹನ ದೃಷ್ಟಿಯಲ್ಲಿ ಹೆಚ್ಚು ಗೌರವಾರ್ಹನಾಗಿದ್ದಾನೆ."

ಹಝ್ರತ್ ಮುಹಮ್ಮದ್ ಪೈಗಂಬರರು (ಸ) ಹಜ್ಜತುಲ್ ವಿದಾ ಎಂಬ ತನ್ನ ಕೊನೆಯ ಹಜ್ ಯಾತ್ರೆಯ ಸಂದರ್ಭದಲ್ಲಿ ಮಾಡಿದ ಪ್ರವಚನದಲ್ಲಿ ಹೀಗೆ ಘೋಷಿಸಿದರು : "ಓ ಜನರೇ ನೀವು ಎಲ್ಲರೂ ಸರಿಸಮಾನರಾಗಿದ್ದೀರಿ. ಎಲ್ಲ ಜನರು ಅವರು ಯಾವ ಜನಾಂಗಕ್ಕೆ ಅಥವಾ ಬುಡಕಟ್ಟಿಗೆ ಸೇರಿದವರಾಗಿದ್ದರೂ ಸಮಾಜದಲ್ಲಿ ಅವರ ಸ್ಥಾನ ಯಾವ ಮಟ್ಟದಲ್ಲಿದ್ದರೂ ಅವರೆಲ್ಲರೂ ಸರಿಸಮಾನರು. ತನಗೆ ಇತರರ ಮೇಲೆ ಯಾವುದೇ ಶ್ರೇಷ್ಠತೆ ಇದೆ ಎಂದು ಸಾಧಿಸುವ ಹಕ್ಕು ಯಾರಿಗೂ ಇರುವುದಿಲ್ಲ. ನೀವೆಲ್ಲರೂ ಸಹೋದರರಾಗಿರುವಿರಿ."

ವರ್ಣ, ಜಾತಿ, ವಂಶ, ಸಾಮಾಜಿಕ ಅಂತಸ್ತು ಮತ್ತು ಸಂಪತ್ತು ಇವುಗಳಿಗೆ ಸಂಬಂಧಿಸಿದ ವೈಶಿಷ್ಟ್ಯ ಮತ್ತು ವಿಶೇಷಾಧಿಕಾರವು ಇಸ್ಲಾಮ್ ಧರ್ಮದಲ್ಲಿ ರದ್ದುಗೊಳಿಸಲ್ಪಟ್ಟಿದೆ. ಇಸ್ಲಾಮ್ ಧರ್ಮವು ಮನುಷ್ಯಕುಲವನ್ನು ಒಂದು ಬೃಹತ್ತಾದ ಭ್ರಾತತ್ವಕ್ಕೆ ಒಳಪಡಿಸಿದೆ. ಪರಸ್ಪರ ಉತ್ತಮ ನಡವಳಿಕೆ ಮತ್ತು ಸಾತ್ವಿಕ ಜೀವಿತದ ಮೂಲಕ ದೇವನ ತೃಪ್ತಿಗೆ ಪಾತ್ರರಾಗಲು ನಮಗೆಲ್ಲರಿಗೂ ಇಸ್ಲಾಮ್ ಉಪದೇಶ ನೀಡುತ್ತದೆ. ಈ ಕಾರಣದಿಂದಲೇ ಬಿಳಿಯರಿಗಾಗಿ ಮಾತ್ರವಿರುವ ಮಸ್‌ಜಿದ್‌ಗಳನ್ನು ಅಥವಾ ಕರಿಯರಿಗಾಗಿ ಮಾತ್ರವಿರುವ ಮಸ್‌ಜಿದ್‌ಗಳನ್ನು ನೀವು ಇಸ್ಲಾಮಿಕ ಸಮಾಜದಲ್ಲಿ ಕಾಣಲಾರಿರಿ. ಐಶ್ವರ್ಯವಂತರಿಗೆ ಮಾತ್ರ ಸೀಮಿತವಾಗಿರುವ ಮಸ್‌ಜಿದ್‌ಗಳನ್ನಾಗಲಿ ಬಡವರಿಗೆ ಮಾತ್ರ ಸೀಮಿತವಾಗಿರುವ ಮಸ್‌ಜಿದ್‌ಗಳನ್ನಾಗಲಿ ನೀವು ಇಸ್ಲಾಮ್ ಧರ್ಮದಲ್ಲಿ ಕಾಣಲಾರಿರಿ. ಗಣ್ಯರೂ ಶಕ್ತರೂ ಆಗಿರುವ ಜನರಿಗೆ ಪ್ರಾರ್ಥನಾಲಯಗಳಲ್ಲಿ ಪ್ರತ್ಯೇಕ ಸ್ಥಳಗಳನ್ನು ಕಾದಿರಿಸಿರುವುದಾಗಿ ನೀವು ಮುಸ್ಲಿಮ್ ಪ್ರಾರ್ಥನಾಲಯಗಳಲ್ಲಿ ಕಾಣಲಾರಿರಿ. ಪ್ರಾರ್ಥನೆಗೆ ದೇವನ ಎದುರು ನಿಲ್ಲುವಾಗ ಎಲ್ಲರೂ ಭುಜಕ್ಕೆ ಭುಜ ತಗಲಿಸಿ ನಿಲ್ಲಬೇಕಾಗಿದೆ. ತಮ್ಮ ಸಹಜವಾದ ಅಥವಾ ಇತರ ವ್ಯತ್ಯಾಸಗಳಿಗೆ ಅತ್ಯಂತ ಹೆಚ್ಚು ಮಹತ್ವ ನೀಡಿ ಪರಸ್ಪರ ಜಗಳ ಮಾಡುತ್ತಿರುವ ಎಲ್ಲ ಮನುಷ್ಯರ ಮಧ್ಯೆ ಶಾಂತಿಯು ನೆಲೆಯೂರುವಂತೆ ಇಸ್ಲಾಮ್ ಧರ್ಮವು ಮಾಡುತ್ತದೆ.

ದೇವನ ಸಂಪರ್ಕವನ್ನು ನಿಜವಾಗಿಯೂ ಸಾಧ್ಯವಾಗುವಂತೆ ಮಾಡುವ ಧರ್ಮದ ಕಡೆಗೆ ಮನುಷ್ಯ ಕುಲವನ್ನು ಆಹ್ವಾನಿಸುವ ಇಸ್ಲಾಮ್ ಧರ್ಮವು ಶಾಂತಿ ಮತ್ತು ಜಯವು ಅವರಿಗೆ ಆ ಮೂಲಕ ಲಭಿಸುವುದೆಂದು ವಾಗ್ದಾನ ಮಾಡುತ್ತದೆ. ಇಸ್ಲಾಮ್ ಧರ್ಮವು ಪ್ರತಿಯೊಬ್ಬ ವ್ಯಕ್ತಿಯನ್ನು ಸಂಬೋಧಿಸಿ, ಅವನು ಪ್ರಾಮಾಣಿಕತೆಯಿಂದ ದೇವನನ್ನು ಆರಾಧಿಸಬೇಕೆಂದೂ ನಿರಂತರವಾಗಿ ದೇವನೊಂದಿಗೆ ಪ್ರಾರ್ಥಿಸಬೇಕೆಂದೂ ಸತ್ಯವಿಶ್ವಾಸಿಗಳೊಂದಿಗೆ ಸೇರಬೇಕೆಂದೂ ಕರೆ ನೀಡುತ್ತದೆ. ಸತ್ಯವಿಶ್ವಾಸಿಗಳ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಸತ್ಯವಿಶ್ವಾಸಿಗಳ ಹೃದಯಗಳು ಅಲ್ಲಾಹನ, ಸ್ಮರಣೆಯಿಂದ ಸಮಾಧಾನ ಪಡೆಯುತ್ತವೆ. ಅಲ್ಲಾಹನ ಸ್ಮರಣೆಯಿಂದಲೇ ಹೃದಯಗಳು ಸಮಾಧಾನ ಪಡೆಯುತ್ತವೆ. ಯಾರು ಸತ್ಯವಿಶ್ವಾಸವನ್ನು ಸ್ವೀಕರಿಸಿ ಸತ್ಕಾರ್ಯಗಳನ್ನು ಮಾಡುತ್ತಾರೋ ಅವರಿಗೆ ಸುಖ ಸಂತೋಷಗಳಿವೆ...... " (13:29-30)

ಇಸ್ಲಾಮ್ ಧರ್ಮ ಪ್ರತಿಯೊಬ್ಬನಿಗೆ ಶಾಂತಿಯ ಸಂದೇಶ ನೀಡುತ್ತದೆ. ಯಾರು ಶುಭ ಪ್ರತೀಕ್ಷೆಗಳನ್ನು ಕಳೆದು ಕೊಂಡಿರುವರೋ ಮತ್ತು ಯಾರು ತಮ್ಮ ಜೀವಿತದ ನರಳಾಟಕ್ಕೆ ಶೀಘ್ರವಾದ ಅಂತ್ಯವನ್ನು ಕಾಣಬಯಸುತ್ತಾರೋ ಅವರನ್ನು ವಿಶಿಷ್ಟವಾಗಿ ಸಂಬೋಧಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"(ಓ ಪ್ರವಾದಿ) ಹೇಳು - ತಮ್ಮ ಜೀವಗಳ ಮೇಲೆ ಅತಿರೇಕವಾಗಿ ವರ್ತಿಸಿದ ಓ ನನ್ನ ದಾಸರೇ, ಅಲ್ಲಾಹನ ಕರುಣೆಯ ಬಗ್ಗೆ ನೀವು ನಿರಾಶೆ ಹೊಂದಬೇಡಿರಿ. ನಿಶ್ಚಯವಾಗಿಯೂ ಅಲ್ಲಾಹನು ಎಲ್ಲ ಪಾಪಗಳನ್ನು ಕ್ಷಮಿಸುವವನಾಗಿದ್ದಾನೆ. ನಿಶ್ಚಯವಾಗಿಯೂ ಅವನು ಬಹಳ

ಕ್ಷಮಿಸುವವನೂ ಕರುಣಾಮಯನೂ ಆಗಿದ್ದಾನೆ. (39:54)

ಮನುಷ್ಯನು ಸಮಾಜ ಜೀವಿಯಾಗಿದ್ದಾನೆ. ಅವನ ಸೃಷ್ಟಿಯ ಪ್ರಾರಂಭದ ಕ್ಷಣದಿಂದಲೇ ಅವನು ಅವನ ತಾಯಿಯೊಂದಿಗೆ ಶಾರೀರಿಕ, ಭಾವನಾತ್ಮಕ ಮತ್ತು ಸಾಮಾಜಿಕವಾಗಿ ಬಂಧಿಸಲ್ಪಟ್ಟಿರುತ್ತಾನೆ. ಅನಂತರ ಅವನ ಸಂಬಂಧವು ಹೆಚ್ಚಿನ ಆಯಾಮವನ್ನು ಪಡೆಯುತ್ತದೆ. ಅವನ ತಂದೆ, ಅವನ ಸಹೋದರರ ಸಹೋದರಿಯರು, ಅವನ ಪತ್ನಿ, ಅವನ ಮಕ್ಕಳು, ಅವನ ಬಂಧುಬಳಗ, ಅವನ ಸಹಪಾಠಿಗಳು, ಅವನ ನೆರೆಹೊರೆಯವರು ಮೊದಲಾದವರೊಂದಿಗೆ ಅವನ ಸಂಬಂಧ ಬೆಳೆಯುತ್ತದೆ. ಅವನ ಜೀವಿತವು ಮುಂದುವರಿದಂತೆ ಇದು ಹೆಚ್ಚಿನ ಆಯಾಮವನ್ನು ಪಡೆಯುತ್ತದೆ. ಈ ಮಾನವ ಸಂಬಂಧದಲ್ಲಿ ಯಾವುದಾದರೊಂದು ಹಂತದಲ್ಲಿ ಕಲಹ ತಲೆದೋರಿದರೆ ಆಗ ಅಸ್ತವ್ಯಸ್ತತೆ ಉಂಟಾಗುತ್ತದೆ ಮತ್ತು ಶಾಂತಿ ಭಂಗವಾಗುತ್ತದೆ. ಇದರ ಪರಿಣಾಮ ವ್ಯಕ್ತಿಯನ್ನು ಮಾತ್ರವಲ್ಲ ಆ ವ್ಯಕ್ತಿ ಜೀವಿಸುವ ಸಮಾಜವನ್ನು ಬಾಧಿಸುವುದು. ಇದನ್ನು ಸರಳವಾಗಿ ಹೇಳುವುದಾದರೆ, ಒಬ್ಬ ವ್ಯಕ್ತಿ ಇತರರೊಂದಿಗೆ ಕೆಟ್ಟ ರೀತಿಯಲ್ಲಿ ನಡೆದುಕೊಂಡರೆ ಅವನ ಮನೆಯಲ್ಲಿ ಶಾಂತಿ ಇರಲಾರದು ಹಾಗೂ ಸಮಾಜ ಸಹ ಅದರಿಂದ ಪ್ರಭಾವಿತವಾಗುವುದು.

ಮನುಷ್ಯನ ಎಲ್ಲ ರೀತಿಯ ಸಂಬಂಧಗಳ ಕುರಿತು ಇಸ್ಲಾಮ್ ಧರ್ಮವು ಮಾರ್ಗದರ್ಶಕ ಸೂಚನೆಗಳನ್ನು ನೀಡಿ ಎಲ್ಲ ಕ್ಷೇತ್ರಗಳಲ್ಲಿ ಶಾಂತಿ ನೆಲೆಸುವಂತೆ ಮಾಡಿದೆ.

ದೇವನಿಗೆ ವಿಧೇಯತೆಯನ್ನು ತೋರಿಸುವ ಕುರಿತು ವಿವರಿಸಿದ ನಂತರ, ತಂದೆ ತಾಯಂದಿರಿಗೆ ವಿಧೇಯತೆ ಮತ್ತು ಅವರಿಗೆ ಪ್ರೀತಿ ಭರಿತ ಗೌರವ ನೀಡುವ ಕುರಿತು ಪವಿತ್ರ ಖುರ್‌ಆನ್ ಪದೇ ಪದೇ ಆಜ್ಞಾಪಿಸುತ್ತದೆ.

**ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: "ಮನುಷ್ಯನು ತನ್ನ ತಂದೆ ತಾಯಂದಿರೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂದು ನಾವು ಆದೇಶಿಸಿದ್ದೇವೆ. ಅವನ ತಾಯಿ ಕಷ್ಟ ಅನುಭವಿಸಿ ಅವನನ್ನು ಗರ್ಭದಲ್ಲಿ ಹೊತ್ತಳು ಮತ್ತು ನೋವನ್ನು ಅನುಭವಿಸಿ ಅವನನ್ನು ಹೆತ್ತಳು". (46:16)**

ತಾಯಂದಿರಿಗೆ ಇಸ್ಲಾಮ್ ಧರ್ಮದಲ್ಲಿ ವಿಶಿಷ್ಟವಾದ ಗೌರವದಿಂದ ಕೂಡಿದ ಶ್ರೇಷ್ಠ ಸ್ಥಾನವಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಹೀಗೆಂದಿರುವರು : **ಸ್ವರ್ಗವು ತಾಯಂದಿರ ಪಾದಗಳ ಕೆಳಗೆ ಇದೆ."** ಅದರ ಅರ್ಥವೇನೆಂದರೆ ಒಬ್ಬ ಪುತ್ರನು ತನ್ನ ತಾಯಿಯನ್ನು ಚೆನ್ನಾಗಿ ಅನುಸರಿಸಿ ಆಕೆಯ ಸೇವೆಯನ್ನು ಚೆನ್ನಾಗಿ ಮಾಡಿದರೆ ಅವನು ನಿಶ್ಚಯವಾಗಿಯೂ ಸ್ವರ್ಗವನ್ನು ಪಡೆಯುವನು.

ಪುರುಷರು ತಮ್ಮ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: **"ಅವನ (ಎಂದರೆ ಅಲ್ಲಾಹನ) ದೃಷ್ಟಾಂತಗಳಲ್ಲಿ (ಒಂದು) ಇದಾಗಿದೆ. ಅವನು ನಿಮ್ಮ ವರ್ಗದಿಂದಲೇ ನಿಮಗಾಗಿ ಪತ್ನಿಯರನ್ನು ಸೃಷ್ಟಿಸಿರುವನು - ನೀವು ಅವರ ಮೂಲಕ ಮಾನಸಿಕ ಸಮಾಧಾನವನ್ನು ಪಡೆಯಲಿಕ್ಕಾಗಿ. ಅವನು ನಿಮ್ಮ ಮಧ್ಯೆ ಪ್ರೀತಿ ಮತ್ತು ಕರುಣೆಯನ್ನು ಇರಿಸಿರುವನು. ನಿಶ್ಚಯವಾಗಿಯೂ ಅದರಲ್ಲಿ ಚಿಂತಿಸುವವರಿಗೆ ಅನೇಕ ದೃಷ್ಟಾಂತಗಳು ಇವೆ." (30:22)**

ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರು ಪತ್ನಿಯರ ಜೊತೆ ಉತ್ತಮವಾಗಿ ನಡೆದುಕೊಳ್ಳುವ ಕುರಿತು ತನ್ನ ಶಿಷ್ಯರಿಗೆ ಎಷ್ಟು ಆಗ್ರಹಪೂರ್ವಕವಾಗಿ ಉಪದೇಶಿಸಿದರೆಂದರೆ ಅವರಲ್ಲಿ ಕೆಲವರು ತಮ್ಮ ಪತ್ನಿಯರು ತಮಗೆದುರು ಉದ್ಧಟತನದಿಂದ ವರ್ತಿಸುವರೋ ಎಂದು ಭಯಭೀತರಾಗಿದ್ದರು. ಇಸ್ಲಾಮ್ ಧರ್ಮವು ಮಹಿಳೆಯರಿಗೆ ನೀಡಿರುವ ಹಕ್ಕುಗಳನ್ನು ಕಿತ್ತುಕೊಳ್ಳಲು ಅವರ ಪತಿಯಂದಿರಿಗೆ ಅಧಿಕಾರವಿರುವುದಿಲ್ಲ. ದೇವನನ್ನು ಭಯಪಡುವ ನೈಜ ಮುಸ್ಲಿಮ್ ಪತಿ ತನ್ನ ಪತ್ನಿಯ ಹಕ್ಕುಗಳನ್ನು ಎಂದೂ ಕಿತ್ತುಕೊಳ್ಳಲಾರನು.

ಮುಸ್ಲಿಮರು ತಮ್ಮ ಮಕ್ಕಳನ್ನು - ಗಂಡು ಮಕ್ಕಳನ್ನೂ ಹೆಮ್ಮಕ್ಕಳನ್ನೂ ಚೆನ್ನಾಗಿ ಪಾಲನೆ ಪೋಷಣೆ ಮಾಡಬೇಕೆಂದೂ ಅವರಿಗೆ ಉತ್ತಮ ವಿದ್ಯಾಭ್ಯಾಸ ನೀಡಬೇಕೆಂದೂ ಅವರೊಂದಿಗೆ ಗೌರವ ಭಾವದೊಂದಿಗೆ ವರ್ತಿಸಬೇಕೆಂದೂ ಇಸ್ಲಾಮ್ ಉಪದೇಶಿಸುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಹೀಗೆ ಹೇಳಿರುವರು: **ನೀವು ನಿಮ್ಮ ಮಕ್ಕಳಲ್ಲಿ ಒಬ್ಬನಿಗೆ ಒಂದು ಪಾರಿತೋಷಕ ಕೊಟ್ಟರೆ ನೀವು ಅದೇ ರೀತಿಯ ಪಾರಿತೋಷಕವನ್ನು ಇತರ ಮಕ್ಕಳಿಗೂ ಕೊಡಬೇಕು. ಇದು ಅವರ ಮಧ್ಯೆ ಶಾಂತಿ ಮತ್ತು ನ್ಯಾಯವನ್ನು ಸ್ಥಾಪಿಸಲು ಸಹಾಯಕವಾಗುವುದು. (ಬುಖಾರಿ-ಕಿತಾಬುಲ್ ಹಿಬ, ಮುಸ್ಲಿಮ್-ಕಿತಾಬುಲ್ ಹಿಬಾತ್)**

ಪುತ್ರಿಯರೊಂದಿಗೆ ಉತ್ತಮವಾದ ರೀತಿಯಲ್ಲಿ ವರ್ತಿಸಬೇಕೆಂದು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ನುಡಿಮುತ್ತುಗಳು ಮುಸ್ಲಿಮರಿಗೆ ಆದೇಶಿಸಿವೆ. (ಪವಿತ್ರ ಖುರ್‌ಆನ್ ಸೂರಃ ಅತ್ತಕ್‌ವೀರ್ ವಚನಗಳು 9,10. ಸೂರಃ ಅನ್ನಹ್ಲ್ ವಚನಗಳು 59,60 ಹಾಗೂ ಹದೀಸು ಗ್ರಂಥಗಳಾದ ಬುಖಾರಿ-ಕಿತಾಬುರ್ಝ್ಝುಕಾತ್, ಅಬೂದಾವೂದ್-ಕಿತಾಬುಲ್ ಅದಬ್, ಮುಸ್‌ನದ್ ಅಹ್ಮದ್ ಮತ್ತು ಬಾಖಿ ಮುಸ್‌ನದ್ ಅಲ್ ಅನ್‌ಸಾರ್ ನೋಡಿರಿ.)

ಲೋಕದ ವಿವಿಧ ದೇಶಗಳಲ್ಲಿ ಮತ್ತು ಸಮಾಜಗಳಲ್ಲಿ ಹುಡುಗಿಯರೊಂದಿಗೆ ಕೀಳಾಗಿ ವರ್ತಿಸಲಾಗುತ್ತದೆ. ಇಸ್ಲಾಮ್ ಧರ್ಮದ ಈ ಉಪದೇಶಗಳು ಅವರ ಸ್ಥಿತಿಯನ್ನು ಸರಿಪಡಿಸಲು ಸಹಾಯಕವಾಗಬಲ್ಲವು.

ಮುಸ್ಲಿಮರು ತಮ್ಮ ಸಂಬಂಧಿಕರೊಂದಿಗೆ, ತಮ್ಮ ನೆರೆಹೊರೆಯವರೊಂದಿಗೆ ಮತ್ತು ಸ್ನೇಹಿತರೊಂದಿಗೆ, ಅವರು ಅನ್ಯ ಧರ್ಮಕ್ಕೆ ಸೇರಿದವರಾಗಿದ್ದರೂ ನ್ಯಾಯಪೂರ್ಣವಾಗಿ ಮತ್ತು ಉತ್ತಮವಾಗಿ ವರ್ತಿಸಬೇಕೆಂದು ಇಸ್ಲಾಮ್ ಧರ್ಮವು ಆದೇಶಿಸುತ್ತದೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆಂದಿರುವನು:

"ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗಾಗಿ ನ್ಯಾಯಬದ್ಧರಾಗಿ ಸಾಕ್ಷ್ಯನೀಡುವವರಾಗಿ ಸ್ಥಿರವಾಗಿ ನಿಲ್ಲಿರಿ. ಯಾವುದಾದರೂ ಸಮುದಾಯದ ಹಗೆತನವು ನಿಮ್ಮನ್ನು ಅನ್ಯಾಯದಿಂದ ವರ್ತಿಸುವಂತೆ ಪ್ರೇರೇಪಿಸದಿರಲಿ. ನೀವು ಯಾವಾಗಲೂ ನ್ಯಾಯಬದ್ಧವಾಗಿ ವರ್ತಿಸಿರಿ. ಅದು ಭಯಭಕ್ತಿಗೆ ಅತ್ಯಂತ ಸಮೀಪವಾಗಿದೆ." (5:9)

ಇಸ್ಲಾಮ್ ಧರ್ಮ ಉದ್ದೇಶಿಸುವುದು ಯಾವಾಗಲೂ, ಎಷ್ಟು ಕಷ್ಟವಾದರೂ ಶಾಂತಿಯನ್ನು ಕಾಪಾಡಬೇಕು ಎಂದಾಗಿದೆ. ಇದೇ ಕಾರಣದಿಂದ ಸತ್ಯವಿಶ್ವಾಸಿಗಳು ಎಲ್ಲಾ ಸಂದರ್ಭಗಳಲ್ಲಿಯೂ ಸತ್ಯ ಸಂಧತೆ, ವಿನೀತಭಾವನೆ, ಕ್ಷಮಾಗುಣ, ಔದಾರ್ಯ, ಪ್ರಾಮಾಣಿಕತೆ, ಚಾರಿತ್ರ್ಯ, ಹಾಗೂ ಇನ್ನಿತರ ಅನೇಕ ಸದ್ಗುಣಗಳನ್ನು ತಮ್ಮಲ್ಲಿ ಅಳವಡಿಸಬೇಕೆಂದು ಇಸ್ಲಾಮ್ ಧರ್ಮವು ಉಪದೇಶಿಸುತ್ತದೆ. ಅಸತ್ಯ, ವಿದ್ರೋಹ, ಅಸಭ್ಯತೆ, ಅನ್ಯರಿಗೆ ತೊಂದರೆ ಕೊಡುವುದು ಇವುಗಳನ್ನು ಇಸ್ಲಾಮ್ ಬಲಯುತವಾಗಿ ಖಂಡಿಸುತ್ತದೆ ಮತ್ತು ಅವುಗಳನ್ನು ನಿಷಿದ್ಧಗೊಳಿಸಿದೆ. ಇಸ್ಲಾಮ್ ಧರ್ಮವು ಸಮಾಜದ ಎಲ್ಲಾ ಹಂತಗಳಲ್ಲಿಯೂ ಶಾಂತಿಯನ್ನು ಕಾಪಾಡಲು ಆಗ್ರಹ ಪಡಿಸುತ್ತದೆ.

ಮನುಷ್ಯರ ಉದ್ಭವದ ಸಮಾನತೆಯನ್ನು ಪವಿತ್ರ ಖುರ್‌ಆನ್ ಹೀಗೆ ಪ್ರತಿಪಾದಿಸುತ್ತದೆ:

"ಓ ಜನರೇ ನೀವು ನಿಮ್ಮ ಪ್ರಭುವಿಗೆ ಭಯಭಕ್ತಿದೋರುವವರಾಗಿರಿ. ಅವನು ನಿಮ್ಮನ್ನು ಒಂದೇ ಜೀವದಿಂದ ಸೃಷ್ಟಿಸಿದನು ಮತ್ತು ಅದೇ ವರ್ಗದಿಂದ ಅದರ ಜೋಡಿಯನ್ನೂ ಸೃಷ್ಟಿಸಿದನು. ಅವೆರಡರಿಂದ ಅನೇಕ ಪುರುಷರನ್ನೂ ಸ್ತ್ರೀಯರನ್ನೂ (ಲೋಕದಲ್ಲಿ) ಹರಡಿದನು." (4:2)

ಹಝ್‌ರತ್ ಮುಹಮ್ಮದ್ ಪೈಗಂಬರ್ (ಸ) ಹೀಗೆ ಹೇಳಿರುವರು:

"ನೀವು ನಿಮಗಾಗಿ ಏನನ್ನು ಬಯಸುತ್ತಿರುವಿರೋ ಅದನ್ನೇ ಬೇರೆಯವರಿಗೂ ಬಯಸುವ ತನಕ ನೀವು ಸತ್ಯವಿಶ್ವಾಸಿಗಳಾಗಲಾರಿರಿ."

"ತನ್ನ ನಾಲಗೆ ಮತ್ತು ಕೈಗಳ ಉಪದ್ರದಿಂದ ತನ್ನ ನೆರೆಹೊರೆಯವನನ್ನು ಸುರಕ್ಷಿತವಾಗಿಡದವನು ಮುಸ್ಲಿಮನಲ್ಲ." (ಬುಖಾರಿ-ಕಿತಾಬುರ್ರಿಖಾಖ್)

ವಿವಿಧ ದೇಶಗಳ ನಡುವೆ ವಾಣಿಜ್ಯ ಅಥವಾ ಇತರ ವಿಷಯಗಳಿಗೆ ಸಂಬಂಧಿಸಿ ನಡೆಯುವ ಒಪ್ಪಂದಗಳಿಗೆ ಗೌರವ ನೀಡಬೇಕೆಂದು ಇಸ್ಲಾಮ್ ಧರ್ಮವು ಆಗ್ರಪಡಿಸಿರುವುದನ್ನು ಮೇಲಿನ ಉಪದೇಶಗಳ ಬೆಳಕಿನಲ್ಲಿ ವಿಶದೀಕರಿಸಬಹುದಾಗಿದೆ. ಮುಸ್ಲಿಮರು ತಮ್ಮ ಒಪ್ಪಂದಗಳನ್ನು ಪಾಲಿಸಬೇಕೆಂದೂ ತೂಕ ಮತ್ತು ಅಳತೆಯಲ್ಲಿ ಕಡಿತ ಮಾಡಬಾರದೆಂದೂ ಅತ್ಯಂತ ಪ್ರಾಮಾಣಿಕರಾಗಿರಬೇಕೆಂದೂ ಇತರರಿಗೆ ಕೊಡುವ ಸಾಲದ ಹಣದ ಮೇಲೆ ಬಡ್ಡಿಯನ್ನು ಕೇಳಬಾರದೆಂದೂ ಪವಿತ್ರ ಖುರ್‌ಆನ್ ಆಜ್ಞಾಪಿಸಿದೆ. ಪವಿತ್ರ ಖುರ್‌ಆನಿನ ಎರಡನೆಯ ಅಧ್ಯಾಯದ ಕೊನೆಯ ಭಾಗದಲ್ಲಿ, ಬಡ್ಡಿ ವ್ಯವಸ್ಥೆಯು ಯುದ್ಧದ ಪರಿಸ್ಥಿತಿಗೆ ಹೇತುವಾಗುವುದೆಂಬ ಮುನ್ನೆಚ್ಚರಿಕೆ ಇದೆ. ಆದುದರಿಂದ ಅಂತಹ ಪರಿಸ್ಥಿತಿಗಳು ಎಂದೂ ತಲೆದೋರದ ಹಾಗೆ ಜಾಗ್ರತೆ ವಹಿಸಲಾಗಿದೆ.

ಸಂಪತ್ತನ್ನು ಶೇಖರಿಸಿಡುವುದನ್ನು ಅಲ್ಲಾಹನು ವಿರೋಧಿಸಿರುವನು. ಸಂಪತ್ತನ್ನು ವಾಣಿಜ್ಯ ಆವಶ್ಯಕತೆಗಳಿಗಾಗಿ ವಿನಿಯೋಗಿಸಲು ಪ್ರೋತ್ಸಾಹಿಸಲಾಗಿದೆ. ಇದರ ಮೂಲಕ ಸಂಪತ್ತು ಚಲಾವಣೆಯಲ್ಲಿರುತ್ತದೆ. ಆವಶ್ಯಕತೆ ಇರುವವರಿಗೆ, ಬಡವರಿಗೆ, ನಿರ್ಗತಿಕರಿಗೆ, ಅನಾಥರಿಗೆ, ಬಂಧನಕ್ಕೊಳಗಾದವರ ವಿಮೋಚನೆಗಾಗಿ, ಬಡಪ್ರಯಾಣಿಕರಿಗೆ ದಾನವಾಗಿ ಸಂಪತ್ತನ್ನು ವಿನಿಯೋಗಿಸಲು ಉಪದೇಶಿಸಲಾಗಿದೆ. ಮನುಷ್ಯರು ಮಾತ್ರವಲ್ಲ ಪ್ರಾಣಿಗಳು ಸಹ ಸಹಾಯಕ್ಕೆ ಅರ್ಹವಾಗುತ್ತವೆ. ದಾನಧರ್ಮಗಳ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಅನೇಕ ವಚನಗಳಿವೆ. ನಾನು ಕೇವಲ ಒಂದು ವಚನಗಳನ್ನು ಉಲ್ಲೇಖಿಸುವೆನು:

"ಅವರು ಅಲ್ಲಾಹನ ಪ್ರೀತಿಗಳಿಸಲಿಕ್ಕಾಗಿ ಬಡವರಿಗೂ ಅನಾಥರಿಗೂ ಬಂಧನಕ್ಕೊಳಗಾದವರಿಗೂ ಆಹಾರ ನೀಡುತ್ತಾರೆ. ಅವರು ಹೇಳುತ್ತಾರೆ: ನಾವು ಅಲ್ಲಾಹನ ಪ್ರೀತಿಗಳಿಸಲಿಕ್ಕಾಗಿ ಮಾತ್ರ ನಿಮಗೆ ಆಹಾರ ನೀಡುತ್ತೇವೆ. ನಾವು ನಿಮ್ಮಿಂದ ಪ್ರತಿಫಲವನ್ನಾಗಲೀ ಕೃತಜ್ಞತೆಯನ್ನಾಗಲೀ ಬಯಸುವುದಿಲ್ಲ". (76:9,10)

"ನೀವು ದಾನಧರ್ಮವನ್ನು ಬಹಿರಂಗವಾಗಿ ಕೊಟ್ಟರೆ ಅದು ಒಳ್ಳೆಯದೇ ಆಗಿದೆ. ಆದರೆ ನೀವು ಅದನ್ನು ಬಹಿರಂಗಪಡಿಸದೆ ಇದ್ದರೆ ಮತ್ತು ನೀವು ಅದನ್ನು ಬಡವರಿಗೆ ಕೊಟ್ಟರೆ ಅದು ನಿಮಗೆ ಉತ್ತಮವಾಗಿದೆ. ಅವನು ನಿಮ್ಮಿಂದ ನಿಮ್ಮ ಅನೇಕ ಪಾಪದೋಷಗಳನ್ನು ದೂರಸರಿಸುವನು. ನೀವು ಏನನ್ನು ಮಾಡುತ್ತಿರುವಿರೋ ಅದನ್ನು ಅಲ್ಲಾಹನು ಅರಿತು ಕೊಂಡಿರುವನು." (2:272)

ಪ್ರೀತಿ ಮತ್ತು ಸಮಾಧಾನದ ಪರಿಸ್ಥಿತಿಯನ್ನು ಉಂಟುಮಾಡಲಿಕ್ಕಾಗಿ, "ನೀವು ಯಾವುದಾದರೂ ಹಳೆಯ ವಸ್ತುವನ್ನು ದಾನವಾಗಿ ಕೊಡಬೇಡಿರಿ" ಎಂದು ಸತ್ಯವಿಶ್ವಾಸಿಗಳೊಡನೆ ಉಪದೇಶಿಸಲಾಗಿದೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಎಚ್ಚರಿಕೆ ನೀಡಿರುವನು: "ಓ ಸತ್ಯ ವಿಶ್ವಾಸಿಗಳೇ, ನೀವು ಸಂಪಾದಿಸಿದ ಉತ್ತಮವಾದ ವಸ್ತುಗಳಿಂದ ಮತ್ತು ನಿಮಗಾಗಿ ನಾವು ಭೂಮಿಯಿಂದ ಉತ್ಪಾದಿಸಿ ಕೊಟ್ಟುದರಿಂದ ನೀವು ಖರ್ಚು ಮಾಡಿರಿ. ಅದರಲ್ಲಿ ಕೆಟ್ಟು ಹೋಗಿರುವುದನ್ನು ಖರ್ಚು ಮಾಡಲು ನೀವು ಸಂಕಲ್ಪ ಮಾಡಬೇಡಿರಿ. ಅದನ್ನು ನಾಚಿಕೆಯಿಂದ ತಗ್ಗಿದ ದೃಷ್ಟಿಯಿಂದ ಹೊರತು ನೀವು ಸ್ವತಃ ತೆಗೆದು ಕೊಳ್ಳಲಾರಿರಿ". (2:268)

ಮುಸ್ಲಿಮರು ಅಶ್ಲೀಲ ಕೃತ್ಯಗಳನ್ನು ಮಾಡಬಾರದೆಂದು ಎಚ್ಚರಿಕೆ ನೀಡಿ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಶಾಂತಿಯನ್ನು ಕಾಪಾಡಲಾಗಿದೆ. ಜುಗಾರಿ ಆಟ ಮತ್ತು ಮದ್ಯಪಾನವನ್ನು ನಿಷಿದ್ಧಗೊಳಿಸಲಾಗಿದೆ. ಜನರ ಕುಟುಂಬ ವ್ಯವಸ್ಥೆಯನ್ನು ಮತ್ತು ಸಮಾಜವನ್ನು ಅಸ್ತವ್ಯಸ್ತಗೊಳಿಸುವ ಈ ಕೆಡುಕುಗಳನ್ನು ತಡೆಯಲಾಗಿದೆ.

ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ: "ಓ ಸತ್ಯವಿಶ್ವಾಸಿಗಳೇ, ಮದ್ಯ, ಜುಗಾರಿ ಆಟ, ವಿಗ್ರಹಗಳು ಮತ್ತು ಕಣಿ ನೋಡುವ ಬಾಣಗಳು ಶೈತಾನನ ಕೊಳಕು ಕೆಲಸಗಳಾಗಿವೆ. ನೀವು ಅವುಗಳಲ್ಲಿ ಪ್ರತಿಯೊಂದರಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ- ನೀವು ಜಯಶಾಲಿಗಳಾಗಲಿಕ್ಕಾಗಿ. ಮದ್ಯ ಮತ್ತು ಜುಗಾರಿ ಆಟದ ಮೂಲಕ ನಿಮ್ಮ ನಡುವೆ ದ್ವೇಷ ಮತ್ತು ಅಸೂಯೆಯನ್ನು ಉಂಟು ಮಾಡಲು ಹಾಗೂ ಅಲ್ಲಾಹನ ಸ್ಮರಣೆಯಿಂದ ಮತ್ತು ನಮಾಝ್‌ನಿಂದ ನಿಮ್ಮನ್ನು ತಡೆದಿಡಲು ಶೈತಾನನು ಇಚ್ಛಿಸುತ್ತಾನೆ. ಏನು ನೀವು (ಇವುಗಳಿಂದ) ನಿಮ್ಮನ್ನು ತಡೆದಿಡುವಿರೇನು?" (5:91,92)

ಸತ್ಯವಿಶ್ವಾಸಿಗಳು ಅವರ ವಿಶ್ವಾಸಗಳ ಕಾರಣದಿಂದ ಆಕ್ರಮಿಸಲ್ಪಟ್ಟರೆ ಮತ್ತು ಅನ್ಯಾಯವಾಗಿ ಪೀಡಿಸಲ್ಪಟ್ಟರೆ ಅವರು ತಮ್ಮ ಆತ್ಮರಕ್ಷಣೆಗೆ ಬೇಕಾಗಿ ಆವಶ್ಯಕ ಕ್ರಮಗಳನ್ನು ಕೈಗೊಳ್ಳಬಹುದೆಂದು ಪವಿತ್ರ ಖುರ್‌ಆನ್ ಅವರಿಗೆ ಅನುಮತಿ ನೀಡಿದೆ. ಆದರೆ ಅವರು ಎಂದೂ ಆಕ್ರಮಣ ಮಾಡುವವರಾಗಬಾರದೆಂದೂ ಬೇಗನೆ ಶಾಂತಿಯನ್ನು ಪುನಃ ಸ್ಥಾಪಿಸಲು ಆತುರ ಪಡುವವರಾಗಬೇಕೆಂದೂ ಪವಿತ್ರ ಖುರ್‌ಆನ್ ಉಪದೇಶಿದೆ:

"ಸಹೋದರರ ಮಧ್ಯೆ ಸಂಧಾನ ಮಾಡಿಸಿರಿ. ನಿಮ್ಮ ಮೇಲೆ ಕೃಪೆ ಬೀರಲ್ಪಡಲಿಕ್ಕೋಸ್ಕರ ಅಲ್ಲಾಹನಿಗೆ ಭಯಭಕ್ತಿ ತೋರಿಸಿರಿ." (49:11)

ಅಭಿಪ್ರಾಯ ಸ್ವಾತಂತ್ರ್ಯವು ಶಾಂತಿಸ್ಥಾಪನೆಗೆ ಅತ್ಯಾವಶ್ಯಕವಾಗಿದೆ. ಎಲ್ಲ ಸಂದರ್ಭಗಳಲ್ಲಿಯೂ ಈ ಸ್ವಾತಂತ್ರ್ಯದ ರಕ್ಷಣೆ ಅಗತ್ಯವಾಗಿದೆ. ಅಲ್ಲಾಹನನ್ನು ಆರಾಧಿಸುವುದನ್ನು ಬಲತ್ಕಾರದಿಂದ ತಡೆಯುವವರ ವಿರುದ್ಧ ಹೋರಾಡಲು ಪವಿತ್ರ ಖುರ್‌ಆನ್ ಸತ್ಯವಿಶ್ವಾಸಿಗಳಿಗೆ ಅನುಮತಿ ನೀಡಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿರುವನು:

"ಹಿಂಸಾಚಾರವು ಕೊನೆಗೊಳ್ಳುವ ತನಕ ಮತ್ತು ಧರ್ಮದ ಸ್ವೀಕಾರವು ಅಲ್ಲಾಹನಿಗಾಗಿ ಆಗುವ ತನಕ ನೀವು ಅವರ ವಿರುದ್ಧ ಹೋರಾಡಿರಿ. ಅವರು (ದೌರ್ಜನ್ಯವನ್ನು) ನಿಲ್ಲಿಸಿದರೆ (ನೀವು ನೆನಪಿಡಿರಿ) ದುಷ್ಕರ್ಮಿಗಳ ಹೊರತು ಬೇರೆ ಯಾರ ವಿರುದ್ಧವೂ ಹೋರಾಟ ಸಲ್ಲದು." (2:194)

ಅನ್ಯಮತದ ಜನರನ್ನು ಅವರ ಮತದ ಕಾರಣದಿಂದ ಹಿಂಸಿಸುವುದರ ವಿರುದ್ಧ ಮುಸ್ಲಿಮರಿಗೆ ತೀವ್ರವಾಗಿ ಎಚ್ಚರಿಗೆ ನೀಡಲಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 218ರಲ್ಲಿ ಹೀಗೆ ಹೇಳಲಾಗಿದೆ: "ಹಿಂಸಾಚಾರವು ಕೊಲೆಗಿಂತ ಘೋರ ಅಪರಾಧವಾಗಿದೆ." ವಚನ 257ರಲ್ಲಿ ಹೀಗೆ ಹೇಳಲಾಗಿದೆ: "ಧರ್ಮದ ವಿಷಯದಲ್ಲಿ ಬಲತ್ಕಾರವಿಲ್ಲ".

ಎಲ್ಲ ಧರ್ಮಗಳ ಅನುಯಾಯಿಗಳ ನಡುವೆ ಶಾಂತಿಯನ್ನು ಕಾಪಾಡಬೇಕಾದುದರ ಕುರಿತು ಪವಿತ್ರ ಖುರ್‌ಆನ್ ಒತ್ತಿ ಹೇಳಿದೆ. ವಿಗ್ರಹಾರಾಧನೆಯನ್ನು ಖಂಡಿಸಲಾಗಿದ್ದರೂ ಮನುಷ್ಯರಿಂದ ನಿರ್ಮಿಸಲ್ಪಟ್ಟು ಅವರಿಂದ ಆರಾಧಿಸಲ್ಪಡುವ ಪೂಜಾ ವಿಗ್ರಹಗಳನ್ನು ನಿಂದಿಸುವುದನ್ನು ಅಲ್ಲಾಹನು ತಡೆದಿರುವನು.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆಂದಿರುವನು:

"ಅಲ್ಲಾಹನ ಹೊರತು ಯಾರನ್ನು ಅವರು ಕರೆದು ಪ್ರಾರ್ಥಿಸುತ್ತಾರೋ ಅವರನ್ನು ನೀವು ನಿಂದಿಸಬೇಡಿರಿ." (6:109)

ದೇವನು ಎಲ್ಲ ಜನಾಂಗಗಳಿಗೆ ತನ್ನ ಸಂದೇಶವಾಹಕರನ್ನು ಕಳುಹಿಸಿರುವನು ಎಂದು ಘೋಷಿಸುವ ಏಕ ಮಾತ್ರ ದೈವಿಕ ಗ್ರಂಥ ಪವಿತ್ರ ಖುರ್‌ಆನ್ ಆಗಿದೆ. ಮುಸ್ಲಿಮರು ದೇವನ ಎಲ್ಲ ಸಂದೇಶವಾಹಕರನ್ನು ನಂಬುವುದು ಕಡ್ಡಾಯವಾಗಿದೆ. ಯಾವ ಸಂದೇಶವಾಹಕನೂ ಇದಕ್ಕೆ ಹೊರತಾಗಿಲ್ಲ. ಇತರ ಅವತೀರ್ಣಗೊಳಿಸಲ್ಪಟ್ಟ ಧರ್ಮಗಳು ದೇವನಿಂದ ಬಂದುದಲ್ಲ ಎಂದು ಯಾವ ಮುಸ್ಲಿಮನೂ ಹೇಳಲಾರ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

"ನಾವು ಪ್ರತಿಯೊಂದು ಸಮುದಾಯದಲ್ಲಿ ಒಬ್ಬ ಸಂದೇಶವಾಹಕನನ್ನು ಕಳುಹಿಸಿದ್ದೇವೆ. (ಅವರು ಉಪದೇಶಿಸಿದರು:) ಅಲ್ಲಾಹನನ್ನು ಆರಾಧಿಸಿರಿ. ಕೆಟ್ಟವನಿಂದ (ಶೈತಾನನಿಂದ) ದೂರ ಸರಿಯಿರಿ." (16:37)

"(ಓ ಪ್ರವಾದಿ) ಹೇಳು : ನಾವು ಅಲ್ಲಾಹನನ್ನು ನಂಬುತ್ತೇವೆ. ಹಾಗೆಯೇ ನಮಗೆ ಅವತೀರ್ಣಗೊಂಡದ್ದನ್ನೂ ಇಬ್ರಾಹೀಮ್, ಇಸ್ಮಾಈಲ್, ಇಸ್‌ಹಾಖ್ ಮತ್ತು ಯಅ್‌ಖೂಬ್ ಮತ್ತು (ಅವರ) ಸಂತತಿಗಳಿಗೂ ಮೂಸಾ, ಈಸಾ ಮತ್ತು ಇತರ ಪ್ರವಾದಿಗಳಿಗೆ ತಮ್ಮ ಪ್ರಭುವಿನಿಂದ ನೀಡಲ್ಪಟ್ಟದ್ದನ್ನೂ (ನಂಬುತ್ತೇವೆ). ನಾವು ಅವರ ಮಧ್ಯೆ ಯಾರೊಬ್ಬರ ಕುರಿತು ಸಹ ಯಾವ ಭೇದ ಭಾವವನ್ನೂ ಮಾಡುವುದಿಲ್ಲ. ನಾವು ಅವನ (ಅಲ್ಲಾಹನ) ಆಜ್ಞಾಪಾಲಕರಾಗಿದ್ದೇವೆ". (3:85)

ಮಧ್ಯಪೂರ್ವ ದೇಶಗಳಲ್ಲಿ ಆಗಮಿಸಿದ ಪ್ರವಾದಿಗಳ ಕುರಿತು ಮಾತ್ರವಲ್ಲ ಭಾರತ ದೇಶದಲ್ಲಿ ಆಗಮಿಸಿದ ಒಬ್ಬ ಮಹಾನ್ ಸಂದೇಶವಾಹಕರ ಕುರಿತು ಸಹ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರು ತನ್ನ ಶಿಷ್ಯರೊಂದಿಗೆ ಪ್ರಸ್ತಾಪಿಸಿದ್ದರು. ಅವರು ಹೇಳಿದರು : "ಭಾರತದಲ್ಲಿ ಒಬ್ಬ ಪ್ರವಾದಿ ಆಗಮಿಸಿದ್ದರು. ಅವರು ಕಪ್ಪು ವರ್ಣದವರಾಗಿದ್ದರು. ಅವರ ಹೆಸರು ಕಾಹಿನ್ ಎಂದಾಗಿತ್ತು." (ತಾರೀಖ್ ಹಮದಾನ್, ದೈಲಮಿ-ಬಾಬುಲ್ ಕಾಫ್). ಇದು ಮಹಾತ್ಮ ಶ್ರೀ ಕೃಷ್ಣ (ಅವರ ಮೇಲೆ ಅಲ್ಲಾಹನ ಶಾಂತಿ ಇರಲಿ) ಅವರ ಕುರಿತು ಮಾಡಿದ ಪ್ರಸ್ತಾಪವಾಗಿದೆ. ಅವರನ್ನು ಕೃಷ್ಣ ಕನಯ್ಯಾ ಎಂದರೆ ಕಪ್ಪು ವರ್ಣದ ಕೃಷ್ಣ ಎಂದು ಕರೆಯುತ್ತಿದ್ದರು. ಕನಯ್ಯಾ ಎಂಬ ಪದ ಅರಬಿ ಭಾಷೆಯಲ್ಲಿ ಕಾಹಿನ್ ಎಂದು ರೂಪಾಂತರಗೊಂಡಿದೆ.

ದೇವನಿಂದ ಪ್ರವಾದಿಗಳಿಗೆ ನಿಜವಾಗಿಯೂ ಅವತೀರ್ಣಗೊಳಿಸಲ್ಪಟ್ಟ ಎಲ್ಲ ಧರ್ಮಗಳು ಇಸ್ಲಾಮ್ ಧರ್ಮದಲ್ಲಿ ಗೌರವಿಸಲ್ಪಡುತ್ತವೆ. ಇದು ಮನುಷ್ಯರ ಸಾಮರಸ್ಯ ಜೀವಿತ, ಐಕ್ಯ, ಮತ್ತು

ವಿವಿಧ ಧರ್ಮಗಳ ಅನುಯಾಯಿಗಳ ಮಧ್ಯೆ ಶಾಂತಿಗೆ ಕಾರಣವಾಗುವುದು.

ಇಂದಿನ ಕಾಲದಲ್ಲಿ ವಿವಿಧ ಧರ್ಮಗಳ ಅನುಯಾಯಿಗಳು ತಮ್ಮ ಸ್ನೇಹ ಹಸ್ತವನ್ನು ಇತರರ ಕಡೆಗೆ ಚಾಚುವರಾದರೂ ಒಳ್ಳೆಯ ಕೆಲಸಗಳಿಗಾಗಿ ಪರಸ್ಪರ ಸಹಕಾರ ನೀಡುವವರಾಗಿದ್ದರೂ ಇದು ಬಹಳ ಮೆಚ್ಚುವಂತಹದಾಗಿದ್ದರೂ ದೇವನಿಂದ ಅವತೀರ್ಣಗೊಂಡ ಗ್ರಂಥಗಳಲ್ಲಿ ಪವಿತ್ರ ಖುರ್‌ಆನ್ ಮಾತ್ರ ಈ ಬಗೆಯ ಆಹ್ವಾನ ನೀಡುತ್ತದೆ. ಬೇರೆ ಯಾವುದೇ ದೈವಿಕ ಗ್ರಂಥದಲ್ಲಿ ಇತರ ಧರ್ಮಗಳ ಅನುಯಾಯಿಗಳನ್ನು ಸತ್ಕಾರ್ಯಗಳಲ್ಲಿ ಸಹಕರಿಸಲು ಆಹ್ವಾನ ನೀಡಿದ ಕುರಿತು ಅತ್ಯಲ್ಪ ಸೂಚನೆಯನ್ನು ಕೂಡ ಕಾಣಲು ಸಾಧ್ಯವಾಗಲಾರದು. ನಾನು ಇನ್ನು ಮುಂದೆ ಉಲ್ಲೇಖಿಸುವ ಪವಿತ್ರ ಖುರ್‌ಆನ್ ವಚನವು ಧರ್ಮಗಳ ಸಮಾನ ಗುಣಗಳನ್ನು ಒತ್ತಿ ಹೇಳಿ ಮನುಷ್ಯರ ಹಿತಕ್ಕಾಗಿ ಪರಸ್ಪರ ಸಹಕರಿಸಲು ಕಾರ್ಯಕ್ರಮಗಳನ್ನು ರೂಪಿಸಲು ಕರೆ ನೀಡುತ್ತದೆ. ಭಿನ್ನಾಭಿಪ್ರಾಯಗಳನ್ನು ಕಡೆಗಣಿಸಿ ಐಕ್ಯಕ್ಕೆ ಸಹಾಯಕ ವಾಗಬಹುದಾದ, ನಾವೆಲ್ಲರೂ ಒಬ್ಬನೇ ಒಬ್ಬ ದೇವನನ್ನು ಆರಾಧಿಸುತ್ತೇವೆ ಎಂಬ ವಾಸ್ತವಿಕಾಂಶವನ್ನು ಅದರಲ್ಲಿ ಪ್ರಸ್ತಾಪಿಸಲಾಗಿದೆ.

**"(ಓ ಪ್ರವಾದಿ) ಹೇಳು : ಓ ಗ್ರಂಥದವರೇ, ನಿಮ್ಮ ಮತ್ತು ನಮ್ಮ ಮಧ್ಯೆ ಸಮಾನವಾಗಿರುವ ಒಂದು ವಿಚಾರದ ಕಡೆಗೆ -ನಾವು (ಏಕದೇವನಾದ) ಅಲ್ಲಾಹನ ಹೊರತು ಬೇರೆ ಯಾರನ್ನೂ ಆರಾಧಿಸುವುದಿಲ್ಲ; ನಾವು ಯಾರನ್ನೂ ಅವನಿಗೆ ಸಹಭಾಗಿಯಾಗಿ ಕಲ್ಪಿಸುವುದಿಲ್ಲ ಮತ್ತು ಅಲ್ಲಾಹನನ್ನು ಬಿಟ್ಟು ನಮ್ಮವರಲ್ಲಿ ಕೆಲವರು ಬೇರೆ ಕೆಲವರನ್ನು ಪ್ರಭುಗಳನ್ನಾಗಿ ಮಾಡುವುದಿಲ್ಲ (ಎಂಬ ವಿಚಾರದ ಕಡೆಗೆ) ಬನ್ನಿರಿ." (ಪವಿತ್ರ ಖುರ್‌ಆನ್ 3:65)**

ಇಸ್ಲಾಮ್ ಧರ್ಮ ಘೋಷಿಸುವುದೇನೆಂದರೆ, ಎಲ್ಲ ಜನರು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ತಾವೆಲ್ಲರೂ ಒಬ್ಬನೇ ಒಬ್ಬ ದೇವನಿಂದ ಸೃಷ್ಟಿಸಲ್ಪಟ್ಟಿರುವುದಾಗಿ ತಿಳಿದುಕೊಂಡರೆ - ಅವನನ್ನು ಅಲ್ಲಾಹ್ ಎಂದಾಗಲೀ ಇಲೋಹ್ ಎಂದಾಗಲೀ ಪರಮೇಶ್ವರ ಎಂದಾಗಲೀ ಅಥವಾ ಬೇರೆ ಯಾವ ಹೆಸರಲ್ಲಿ ಕರೆದರೂ ಅವನು ಒಬ್ಬನೇ ಆಗಿದ್ದಾನೆ - ಮನುಷ್ಯರೆಲ್ಲರೂ ಸತ್ಕಾರ್ಯಗಳನ್ನು ಮಾಡಲಿಕ್ಕಾಗಿ ಐಕ್ಯದಿಂದ ವರ್ತಿಸಲು ಸಾಧ್ಯವಾಗುವುದು. ಆದರೆ ಮನುಷ್ಯರು ಸತ್ಯದೇವನಿಂದ ದೂರ ಸರಿದು ದೇವನ ಸೃಷ್ಟಿಗಳನ್ನು ಪೂಜಿಸಲು ಪ್ರಾರಂಭಿಸಿದರೆ ಅಥವಾ ಮಿಥ್ಯ ದೇವರನ್ನು ಪೂಜಿಸಲು ತೊಡಗಿದರೆ ಮನುಷ್ಯರೆಲ್ಲರೂ ಸದಾಕಾಲ ಛಿನ್ನ ಭಿನ್ನರಾಗುವರು ಮತ್ತು ಶಾಂತಿಯ ನಿಜವಾದ ಮೂಲಸ್ಥಾನವಾದ ದೇವನ ಸನ್ನಿಧಿಯಿಂದ ಕೊಚ್ಚಿ ಹೋಗಲ್ಪಡುವರು. ಇಸ್ಲಾಮ್ ಧರ್ಮವು ಏಕತೆಯನ್ನು ಪ್ರತಿಪಾದಿಸುತ್ತದೆ. ದೇವನ ಏಕತೆ, ಮನುಷ್ಯ ವರ್ಗದ ಏಕತೆ ಮತ್ತು ಜೀವಿತದ ಏಕತೆಯನ್ನು ಅದು ಪ್ರಸ್ತಾಪಿಸುತ್ತದೆ. ಇಸ್ಲಾಮಿನ ಉದ್ದೇಶ ಲಕ್ಷ್ಯ ಏಕತೆಯನ್ನು ಸ್ಥಾಪಿಸುವುದಾಗಿದೆ. ಅದು ವ್ಯಕ್ತಿಯೊಳಗೆ, ಕುಟುಂಬದೊಳಗೆ, ದೇಶದೊಳಗೆ ಮತ್ತು ವಿಶ್ವದೊಳಗೆ ಶಾಂತಿಯನ್ನು ಸ್ಥಾಪಿಸಬಲ್ಲ ಏಕಮಾತ್ರ ಸಾಧನವಾಗಿದೆ. ಶಾಂತಿ ಸ್ಥಾಪಿಸಬೇಕೆಂಬ ಇಸ್ಲಾಮಿನ ಆಶೆ ಕೇವಲ ಒಂದು ಮೌನ ಪ್ರತೀಕ್ಷೆ ಅಲ್ಲ. ಎಲ್ಲ ಸತ್ಯವಿಶ್ವಾಸಿಗಳು ಲೋಕವನ್ನು ಶಾಂತಿಯ ಅಭಿವಾದನೆಯೊಂದಿಗೆ ಹಾರೈಸಬೇಕೆಂದು ದೇವನು ಸತ್ಯ ವಿಶ್ವಾಸಿಗಳಿಗೆ ಕಲಿಸಿರುವನು. **"ನಿಮ್ಮ ಮೇಲೆ ಶಾಂತಿ ಇರಲಿ"** ಎಂದು ಹೇಳಿ ಮುಸ್ಲಿಮರು ಪರಸ್ಪರ ಹಾರೈಸುತ್ತಾರೆ. ಅವರು ಬೇರೆ ಯಾವ ರೀತಿಯಲ್ಲಿಯೂ ಅಭಿವಂದಿಸುವುದಿಲ್ಲ. ಇದು ದೇವನೇ ತನ್ನ ಎಲ್ಲ ಸಂದೇಶವಾಹಕರಿಗೆ ಕಲಿಸಿಕೊಟ್ಟ ಅಭಿವಂದನೆಯ ರೀತಿಯಾಗಿದೆ.

ಪವಿತ್ರ ಖುರ್‌ಆನಿನ ಸಂದೇಶವು ಸತ್ಯವಾಗಿದೆ ಮತ್ತು ಅದು ತನ್ನ ಅನುಯಾಯಿಗಳಿಗೆ ಪೂರ್ಣಶಾಂತಿಯನ್ನು ನೀಡಬಲ್ಲದು ಎಂಬ ಸಂಗತಿಯನ್ನು ರುಜುಪಡಿಸಲು ಅಲ್ಲಾಹನು ನೂರಾರು ಸಾಕ್ಷ್ಯಾಧಾರಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ನೀಡಿರುವನು. ವಿವೇಕ ಶಾಲಿಗಳಾದ ಜನರು ಯಾವುದೇ ವಿರೋಧಾಭಾಸಗಳನ್ನು ಪ್ರಾಮಾಣಿಕವಾಗಿ ಅಂಗೀಕರಿಸಲಾರರು. ಅಂತಹ ಜನರಿಗೆ ಈ ಸಾಕ್ಷ್ಯಾಧಾರಗಳು ಸತ್ಯವನ್ನು ಕಂಡು ಹಿಡಿಯಲು ಸಹಕಾರಿಯಾಗುವುದು. ಪವಿತ್ರ ಖುರ್‌ಆನ್‌ನಲ್ಲಿ ಅನೇಕ ಚಾರಿತ್ರಿಕ ಮತ್ತು ವೈಜ್ಞಾನಿಕ ಸತ್ಯಗಳು ಸಹ ಅಡಕವಾಗಿವೆ. ಅವುಗಳು ಸ್ವತಃ ಮುಹಮ್ಮದ್ ಪೈಗಂಬರ್ (ಸ)ರವರಿಗೆ ಸಹ ತಿಳಿದಿರಲಿಲ್ಲ. ಅವರ ಕಾಲ ಕಳೆದ ನಂತರ ವಿಜ್ಞಾನವು ಅವುಗಳ ಸತ್ಯತೆಯನ್ನು ಗೊತ್ತುಹಚ್ಚಿದೆ. ಪವಿತ್ರ ಖುರ್‌ಆನ್ ಎಲ್ಲವನ್ನೂ ತಿಳಿದಿರುವ ಎಲ್ಲವನ್ನೂ ನೋಡುತ್ತಿರುವ ಅಲ್ಲಾಹನಿಂದ ಅವತೀರ್ಣವಾಗಿದೆ ಎಂಬುದಕ್ಕೆ ಇವುಗಳು ಸಾಕ್ಷ್ಯಗಳಾಗಿವೆ. ಪವಿತ್ರ ಖುರ್‌ಆನ್ ಚಾರಿತ್ರಿಕ ಮತ್ತು ವೈಜ್ಞಾನಿಕವಾದ ಎಲ್ಲ ವಿಧ ತಪ್ಪುಗಳಿಂದ ವಿರಹಿತವಾಗಿರುವುದು ಆಶ್ಚರ್ಯಕರವಾಗಿದೆ. ಇದು ಸತ್ಯವಿಶ್ವಾಸಿಗಳ ಮನಸ್ಸಿಗೆ ಸಂಪೂರ್ಣ ಶಾಂತಿ ನೀಡುತ್ತದೆ. ಅವರ ಜೀವಿತದಲ್ಲಿ ಧರ್ಮ ಮತ್ತು ವಿಜ್ಞಾನದ ಮಧ್ಯೆ ಯಾವುದೇ ವೈರುಧ್ಯ ಇರುವುದಿಲ್ಲ. ಎಲ್ಲ ಕ್ಷೇತ್ರಗಳಲ್ಲಿ ಶಾಂತಿಯೇ ಶಾಂತಿ ಇರುತ್ತದೆ.

ಅಲ್ಲಾಹನು ಶಾಂತಿಯ ಮೂಲಸ್ಥಾನವಾಗಿದ್ದಾನೆ. ಆದುದರಿಂದ ಶಾಂತಿಗಳಿಸಲು ಅಲ್ಲಾಹನನ್ನು ಪ್ರಾರ್ಥಿಸುತ್ತಾ ಇರಬೇಕೆಂದು ಇಸ್ಲಾಮ್ ಕಲಿಸುತ್ತದೆ. ಮನುಷ್ಯರ ತಂತ್ರಗಳಿಂದ ನೈಜ ಶಾಂತಿ ಲಭಿಸಲಾರದು. ಅದು ದೇವನಿಂದ ಮಾತ್ರ ಲಭಿಸಬಹುದಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ನುಡಿಗಳಲ್ಲಿ ಅಲ್ಲಾಹನನ್ನು ಶಾಂತಿಗಾಗಿ ಪ್ರಾರ್ಥಿಸೋಣ:

**"ಅಲ್ಲಾಹುಮ್ಮ ಅಂತಸ್ಸಲಾಮು ವ ಮಿನ್‌ಕಸ್ಸಲಾಮು ತಬಾರಕ್ತ ಯಾ ಝುಲ್ ಜಲಾಲಿ ವಲ್ ಇಕ್ರಾಮ್."**

**"ಓ ಅಲ್ಲಾಹ್, ನೀನು ಶಾಂತಿ ಆಗಿರುವೆ. ನಿನ್ನಿಂದಲೇ ಶಾಂತಿ ಲಭಿಸುತ್ತದೆ. ವೈಭವ ಮತ್ತು ಘನತೆಯನ್ನು ಹೊಂದಿರುವ ನೀನೇ ಅನುಗ್ರಹದಾಯಕನು."**

("ರಿವ್ಯೂ ಆಫ್ ರಿಲಿಜನ್ಸ್" ಲಂಡನ್ - ಏಪ್ರಿಲ್ 2001)

ಕನ್ನಡಾನುವಾದ: ಎಂ. ಉಬೈದುಲ್ಲಾ

# ಇಸ್ಲಾಂ ಹಾಗೂ ಜಿಹಾದ್

ಲೇಖಕ : ಅಬೂ ಮುಹಮ್ಮದ್ ಲುಕ್ಮಾನ್

ಇಸ್ಲಾಂ ಖಡ್ಗದ ಬಲದಿಂದ ಪ್ರಚಾರಗೊಂಡ ಧರ್ಮವೆಂದೂ ಅದು ಧರ್ಮ ಯುದ್ಧಕ್ಕೆ ಅದರ ಅನುಯಾಯಿಗಳನ್ನು ಪ್ರೇರೇಪಿಸುತ್ತದೆಂದೂ ಜನರನ್ನು ಬಲಾತ್ಕರಿಸಿ ಇಸ್ಲಾಂ ಧರ್ಮವನ್ನು ಸ್ವೀಕರಿಸುವಂತೆ ಮಾಡುವುದು ಅದರ ಶೈಲಿಯೆಂದೂ ಇರುವ ಒಂದು ತಪ್ಪಭಿಪ್ರಾಯ ಜನರೆಡೆಯಲ್ಲಿ ಕಾಣಬಹುದಾಗಿದೆ. ಇಸ್ಲಾಮಿನ ಸುಂದರ ಮುಖಕ್ಕೆ ಮಸಿಬಳಿದು ಜನರನ್ನು ವಂಚಿಸುವ ಕುಪ್ರಸಿದ್ಧರಲ್ಲಿ ಅಗ್ರಗಣ್ಯರು ಪಾಶ್ಚಾತ್ಯರಾಗಿದ್ದಾರೆ. ದುರದೃಷ್ಟವಶಾತ್ ಮುಸ್ಲಿಮರೆಂದು ಹೇಳಿಕೊಳ್ಳುವ ಕೆಲಜನರ ಅವಿವೇಕಯುತವಾದ ವರ್ತನೆಗಳಿಂದಲೂ ಈ ತಪ್ಪಭಿಪ್ರಾಯವು ಬಲಗೊಂಡಿತು.

ಆದರೆ ನಿಷ್ಪಕ್ಷಪಾತಿಯಾದ ಓರ್ವನು ಇಸ್ಲಾಮಿನ ಅಧ್ಯಾಪನೆಗಳ ಕುರಿತು ಮನನ ಮಾಡುವವನಾದರೆ ಅದರ ನಿಜರೂಪವನ್ನು ಕಾಣಬಹುದಾಗಿದೆ.

ಇಸ್ಲಾಂ ಶಾಂತಿ ಹಾಗೂ ಸಮಾಧಾನದ ಧರ್ಮವಾಗಿದೆ. ಇಸ್ಲಾಂ ಎಂಬ ಶಬ್ದದ ಅರ್ಥ ಶಾಂತಿ, ಸಮಾಧಾನ ಎಂದು. ಧರ್ಮಕಾರ್ಯದಲ್ಲಿ ಯಾವುದೇ ರೀತಿಯ ಬಲಾತ್ಕಾರವನ್ನೂ ಇಸ್ಲಾಂ ಸಮ್ಮತಿಸುವುದಿಲ್ಲ. ಪ್ರಮಾಣಗಳ ಆಧಾರದಿಂದ ಧರ್ಮಗಳ ಕುರಿತು ಚರ್ಚಿಸಬೇಕೆಂದು ಅದು ಕಲಿಸುತ್ತದೆ.

ಬಲಪ್ರಯೋಗಿಸಿ ಒಬ್ಬನ ಧರ್ಮವನ್ನು ಬಿಡುವಂತೆ ಪ್ರಯತ್ನಿಸುವುದು ಇಸ್ಲಾಮಿನ ದೃಷ್ಟಿಯಲ್ಲಿ ಸಮರ್ಥಿಸಲ್ಪಡದು. ಅಲ್ಲಾಹನು ಮುಹಮ್ಮದ್ ಪೈಗಂಬರ (ಸಲ್ಲಲ್ಲಾಹು ಅಲೈಹಿ ವಸಲ್ಲಂ)ರಿಗೆ ಹೀಗೆ ಆಜ್ಞಾಪಿಸಿದನು : ನೀನು ಹೇಳು - ಎಲೈ ಅವಿಶ್ವಾಸಿಗಳೇ, ನಾನು ನನ್ನ ರೀತಿಯಲ್ಲಿ ಆರಾಧಿಸುತ್ತೇನೆ ; ನೀವು ನಿಮ್ಮ ರೀತಿಯಲ್ಲಿ ಆರಾಧಿಸುತ್ತೀರಿ. (ಈ ಬಗ್ಗೆ ನಮ್ಮೆಡೆಯಲ್ಲಿ ಭಿನ್ನತೆ ಇದೆಯೆಂಬುದು ಸ್ಪಷ್ಟ. ಆದರೆ ನಾವು ಪರಸ್ಪರ ಬಲಪ್ರಯೋಗಿಸುವ ಅಗತ್ಯವಿಲ್ಲ). ನಿಮಗೆ ನಿಮ್ಮ ಧರ್ಮ; ನನಗೆ ನನ್ನ ಧರ್ಮ. (ಪವಿತ್ರ ಖುರ್‌ಆನ್ ಅಧ್ಯಾಯ 109 - ಸಾರಾಂಶ)

ಸತ್ಯವೆಂದು ಮನದಟ್ಟಾಗುವ ಒಂದು ಧರ್ಮವನ್ನು ಸ್ವೀಕರಿಸಲೂ ಅದನ್ನನುಸರಿಸಿ ನಡೆಯಲೂ ಅದನ್ನು ಇತರರೆಡೆಯಲ್ಲಿ ಪ್ರಚಾರ ಮಾಡಲೂ ಪ್ರತಿಯೋರ್ವನಿಗೆ ಸ್ವಾತಂತ್ರ್ಯವಿರಬೇಕಾಗಿದೆ. ಇದು ಮನುಷ್ಯನ ಮೂಲಭೂತ ಹಕ್ಕಾಗಿದೆ. ಈ ಹಕ್ಕನ್ನು ಇಸ್ಲಾಂ ಪೂರ್ಣವಾಗಿ ಮನ್ನಿಸುತ್ತದೆ. ಮತಪ್ರಚಾರ ಬಲಪ್ರಯೋಗದಿಂದಲ್ಲ, ಸಮಾಧಾನದಿಂದಲೂ ಸಾಕ್ಷ್ಯಗಳ ಆಧಾರದಿಂದಲೂ ಮಾಡಬೇಕೆಂದು ಅದು ಸಾರುತ್ತದೆ. ಪವಿತ್ರ ಖುರ್‌ಆನ್ ಹೇಳುವುದನ್ನು ನೋಡಿರಿ: "ನಿಮ್ಮ ವಾದದಲ್ಲಿ ನೀವು ಸತ್ಯವಂತರೆಂದಾದರೆ ಸಾಕ್ಷ್ಯಗಳನ್ನು ತನ್ನಿರಿ." (27:65)

ಪ್ರಮಾಣಗಳ ಆಧಾರದಿಂದ ಮನಸ್ಸಾಕ್ಷಿಯನ್ನನುಸರಿಸಿ ಯಾವುದೇ ಧರ್ಮವನ್ನು ಸ್ವೀಕರಿಸುವರೆ ಅಥವಾ ನಿರಾಕರಿಸುವರೆ ಪ್ರತಿಯೋರ್ವನಿಗೆ ಸ್ವಾತಂತ್ರ್ಯವಿರಬೇಕು. ಆ ಹಕ್ಕನ್ನು ಮನ್ನಿಸುತ್ತಾ ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ:" ಇದು (ಇಸ್ಲಾಂ) ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಇಷ್ಟವಿದ್ದವರು ನಂಬಲಿ; ಇಷ್ಟವಿಲ್ಲದವರು ನಿರಾಕರಿಸಲಿ." (18:30). ಸತ್ಯವನ್ನು ಸ್ವೀಕರಿಸುವುದರ ಫಲ ಅದನ್ನು ಸ್ವೀಕರಿಸುವವನಿಗಾಗಿಯೇ ಲಭಿಸುತ್ತದೆ; ಅದನ್ನು ನಿರಾಕರಿಸುವುದರ ದುಷ್ಫಲ ಅದನ್ನು ನಿರಾಕರಿಸುವವನೇ ಅನುಭವಿಸಬೇಕಾಗಿದೆ. ಆದುದರಿಂದ ಧರ್ಮದಲ್ಲಿ ಬಲಾತ್ಕಾರ ಅಥವಾ ಅಕ್ರಮದ ಅಗತ್ಯ ಬರುವುದಿಲ್ಲ. ಒಬ್ಬನ ಮನಸ್ಸಾಕ್ಷಿಯನ್ನಾಗಲೀ ವಿಶ್ವಾಸವನ್ನಾಗಲೀ ಯಾರಿಗೂ ಬಲಪ್ರಯೋಗಿಸಿ ಬದಲಾಯಿಸಲು ಸಾಧ್ಯವಿಲ್ಲ. ಧರ್ಮ ವಿಶ್ವಾಸ ಹೃದಯಕ್ಕೆ ಸಂಬಂಧಿಸಿದುದಾಗಿದೆ. ಬಾಹ್ಯ ಶಕ್ತಿಯಿಂದ ಅದನ್ನು ಬದಲಾಯಿಸಲು ಪ್ರಯತ್ನಿಸುವುದು ಅವಿವೇಕವಾಗಿದೆ. ಆದ್ದರಿಂದಲೇ ಪವಿತ್ರ ಖುರ್‌ಆನ್ ಹೀಗೆ ಆಜ್ಞಾಪಿಸಿದೆ : "ಧರ್ಮದಲ್ಲಿ ಬಲಾತ್ಕಾರ ಕೂಡದು. ಸತ್ಯವು ಅಸತ್ಯದಿಂದ ಭಿನ್ನವಾದುದಾಗಿದೆ." (2:257)

ಸಂಕ್ಷಿಪ್ತವಾಗಿ, ಇಸ್ಲಾಂ, ಧರ್ಮಕಾರ್ಯಗಳಲ್ಲಿ ಬಲಾತ್ಕಾರವನ್ನೋ ಅಕ್ರಮವನ್ನೋ ಸಮ್ಮತಿಸುವುದಿಲ್ಲ; ಮಾತ್ರವಲ್ಲ ಶಕ್ತಿಯುತವಾಗಿ ವಿರೋಧಿಸುತ್ತದೆ. ಬಲಾತ್ಕಾರದಿಂದ ಕಪಟ ವಿಶ್ವಾಸಿಗಳನ್ನಲ್ಲದೆ ಸತ್ಯ ವಿಶ್ವಾಸಿಗಳನ್ನುಂಟು ಮಾಡಲು ಸಾಧ್ಯವಿಲ್ಲ. ಅಂತಹ ಕಪಟ ವಿಶ್ವಾಸಿಗಳಿಂದ ಇಸ್ಲಾಮಿಗೆ ಕುಂದುಂಟಾಗುವುದಲ್ಲದೆ ಪ್ರಯೋಜನವೇನೂ ಲಭಿಸಲಾರದು. ಕಪಟ ವಿಶ್ವಾಸಿಗಳನ್ನು ಇಸ್ಲಾಂ ಬಹಳ ನಿಕೃಷ್ಟರನ್ನಾಗಿ ಗಣಿಸುತ್ತದೆ.

ಇಸ್ಲಾಂ ಏಕದೇವ ವಿಶ್ವಾಸವನ್ನು ಶಕ್ತಿಯುತವಾಗಿ ಬೋಧಿಸುವ ಧರ್ಮವಾಗಿದೆ. ಮೂರ್ತಿ ಪೂಜೆಯನ್ನೂ ಬಹುದೇವಾರಾಧನೆಯನ್ನೂ ಅದು ವಿರೋಧಿಸುತ್ತದೆ. ಆದರೂ "ಇತರರು ಪೂಜಿಸುವ ಆರಾಧ್ಯ ವಸ್ತುಗಳನ್ನು ನೀವು ನಿಂದಿಸಬಾರದು" (ಪವಿತ್ರ ಖು. 6:109) ಎಂದು ಮುಸ್ಲಿಮರಿಗೆ ಎಚ್ಚರಿಕೆ ನೀಡುತ್ತದೆ. ಹೀಗೆ ಇಸ್ಲಾಂ ಒಂದು ಕಡೆಯಲ್ಲಿ ಧರ್ಮಕಾರ್ಯಗಳಲ್ಲಿ ಬಲಾತ್ಕಾರ ಕೂಡದೆಂದೂ ಇತರರನ್ನು ನೋಯಿಸಬಾರದೆಂದೂ ಮತ್ತೊಂದು ಕಡೆಯಲ್ಲಿ ಇತರರೊಡನೆ ಸೌಹಾರ್ದದಿಂದ ವರ್ತಿಸಬೇಕೆಂದೂ ಕಲಿಸುತ್ತದೆ. ಇತರ ಸಮುದಾಯದ ಧುರೀಣರು ನಿಮ್ಮೆಡೆಗೆ ಬರುವವರಾದರೆ ಅವರನ್ನು ಮರ್ಯಾದೆಯಿಂದ ಸ್ವಾಗತಿಸಿ ಗೌರವಿಸಬೇಕೆಂದು ಮುಹಮ್ಮದ್ ಪೈಗಂಬರ್ (ಸ)

ಉಪದೇಶಿಸಿದ್ದಾರೆ. ಆ ಮಹಾಪುರುಷ ಅದನ್ನು ಮಾತಿನಲ್ಲಿ ಮಾತ್ರವಲ್ಲ ಕೃತಿಯಲ್ಲೂ ತೋರಿಸಿಕೊಟ್ಟಿದ್ದಾರೆ. ಒಂದು ಸಂದರ್ಭದಲ್ಲಿ ಪೈಗಂಬರರ ಭೇಟಿಗೋಸ್ಕರ ನಜರಾನಾದಿಂದ ಒಂದು ಕ್ರೈಸ್ತ ಸಂಘವು ಮದೀನಕ್ಕೆ ಬಂದಿತ್ತು. ಪೈಗಂಬರರು ಅವರನ್ನು ಮದೀನದ ಮಸೀದಿಯಲ್ಲಿ ಬರಮಾಡಿಕೊಂಡು ಅಲ್ಲಿಯೇ ಸಂಭಾಷಣೆಯನ್ನು ನಡೆಸಿದರು. ಸಂಭಾಷಣೆಯ ಮಧ್ಯೆ ಅವರು ತಮಗೆ ಪ್ರಾರ್ಥನೆಗೆ ಸಮಯವಾಯಿತೆಂದೂ ಹೋಗಲು ಅನುಮತಿಯನ್ನೀಯಬೇಕೆಂದೂ ಕೇಳಿಕೊಂಡರು. ಆದರೆ ಆ ವಿಶಾಲ ಹೃದಯಿಯಾದ ಪೈಗಂಬರರು ಅವರಿಗೆ ನೀಡಿದ ಉತ್ತರ "ಪ್ರಾರ್ಥನೆಗಾಗಿ ನಿಮಗೆ ಬೇರೆಡೆಗೆ ಹೋಗುವ ಅಗತ್ಯವಿಲ್ಲ; ಮಸೀದಿ ದೇವಾರಾಧನೆಗಾಗಿ ನಿರ್ಮಿಸಲ್ಪಟ್ಟಿದೆ; ಇಲ್ಲಿಯೇ ನೀವು ಪ್ರಾರ್ಥನೆಯನ್ನು ನಿರ್ವಹಿಸಬಹುದು" ಎಂದಾಗಿತ್ತು. ಹಾಗೆ ಆ ಸಂಘವು ಮದೀನದಲ್ಲಿ ಪೈಗಂಬರರೇ ನಿರ್ಮಿಸಿದ ಆ ಮಸೀದಿಯಲ್ಲೇ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿದರು. ಚರಿತ್ರೆಯಲ್ಲಿ ಇಂತಹ ಮತ್ತೊಂದು ಉದಾಹರಣೆಯನ್ನು ಕಾಣಲು ಸಾಧ್ಯವಿಲ್ಲ.

ಇಂತಹ ವಿಶಾಲ ಮನೋಭಾವನೆ ಹಾಗೂ ಪರಮತ ಸಹಿಷ್ಣುತೆಯನ್ನು ಪ್ರಬೋಧಿಸುವ ಒಂದು ಧರ್ಮವನ್ನು ಲೋಕವಿಂದು ತಪ್ಪಾಗಿ ತಿಳಿದುಕೊಂಡಿದೆ. ಅದು ಬಲಾತ್ಕಾರದ ಧರ್ಮವೆಂದೂ ಖಡ್ಗದ ಬಲದಿಂದಾಗಿ ಪ್ರಚರಿಸಲ್ಪಟ್ಟದ್ದೆಂದೂ ಚಿತ್ರೀಕರಿಸಲ್ಪಡುತ್ತದೆ. ಇವೆಲ್ಲ ಇಸ್ಲಾಮನ್ನು ಅವಮಾನಿಸಲೂ ಅದರ ಮಹತ್ವಕ್ಕೆ ಕಳಂಕವನ್ನುಂಟುಮಾಡಲೂ ಅದರ ವಿರೋಧಿಗಳಾದ ಪಾಶ್ಚಾತ್ಯ ಇತಿಹಾಸಕಾರರು ನಿರ್ಮಿಸಿದ ಕಟ್ಟುಕತೆಗಳಾಗಿವೆ. ಅವರ ದುಷ್ಪವರ್ತನೆಗಳ ಫಲವಾಗಿ ಲೋಕವಿಂದು ಇಸ್ಲಾಮಿನ ಕುರಿತು ಮಹಾ ತಪ್ಪು ಕಲ್ಪನೆಗಳನ್ನು ಹೊಂದಿದೆ. ಆದರೆ ಅವರು ವಿರಚಿಸಿದ ಕಟ್ಟುಕತೆಗಳನ್ನು ಕಣ್ಣುಮುಚ್ಚಿ ನಂಬುವುದರ ಬದಲು ಇಸ್ಲಾಮನ್ನು ಅದರ ಅಧ್ಯಾಪನೆಗಳ ಮೂಲಕ ನಿಷ್ಪಕ್ಷಪಾತಿಗಳಾದ ಚರಿತ್ರಕಾರರ ಸಾಕ್ಷ್ಯಗಳ ಆಧಾರದಿಂದ ಕಲಿಯಲು ಪ್ರಯತ್ನಿಸುವವರಿಗೆ ಸತ್ಯವನ್ನು ಗ್ರಹಿಸಲು ಕಷ್ಟವಾಗಲಾರದು. ಗಾಂಧೀಜಿ ಹೇಳುವುದನ್ನು ನೋಡಿರಿ : "ಈ ಮಹತ್ತಾದ ಧರ್ಮದ ಕುರಿತು ಅಧ್ಯಯನ ಮಾಡುತ್ತಿದ್ದಂತೆಯೇ ಯಥಾರ್ಥ ವಿಚಾರ ನನಗೆ ಸ್ಪಷ್ಟವಾಗಿ ಕಂಡು ಬರುತ್ತಿದೆ. ಇಸ್ಲಾಮಿನ ಮಹತ್ವ ಖಂಡಿತವಾಗಿಯೂ ಖಡ್ಗದ ಮೊನೆಯಿಂದ ಅಧಿಷ್ಠಾನಗೊಂಡದ್ದಲ್ಲ. " (Young India)

ಇನ್ನು ಜಿಹಾದ್ ಎಂದರೇನೆಂದೂ ಇಸ್ಲಾಂ ಮತ್ತು ಜಿಹಾದ್ ಇವೆರಡರ ಸಂಬಂಧವೇನೆಂದೂ ಪರಿಶೀಲಿಸೋಣ. ಅರಬಿ ಭಾಷೆಯಲ್ಲಿ "ಜಿಹಾದ್" ಎಂಬ ಶಬ್ದದ ಅರ್ಥ ಅತಿಯಾಗಿ ಪರಿಶ್ರಮಿಸು ಎಂದಾಗಿದೆ. ಸದುದ್ದೇಶವನ್ನು ಸಾಧಿಸಲಿಕ್ಕೋಸ್ಕರ ಎಲ್ಲ ಸನ್ಮಾರ್ಗಗಳನ್ನು ಕೈಗೊಳ್ಳುತ್ತಾ ಬಹುರೀತಿಯಲ್ಲಿ ಪ್ರಯತ್ನಿಸುವುದನ್ನು ಜಿಹಾದ್ ಎಂದು ಹೇಳುತ್ತಾರೆ. ಅಲ್ಲಾಹನ ಪ್ರೀತಿಯನ್ನು ಗಳಿಸುವರೆ ಹಾಗೂ ಅವನ ಇಷ್ಟವನ್ನನುಸರಿಸಿ ಜೀವನವನ್ನು ಕ್ರಮೀಕರಿಸುವುದರಲ್ಲಿ ಬಹು ತರವಾಗಿ ಪರಿಶ್ರಮಿಸುವುದನ್ನು ಸಹ ಇಸ್ಲಾಮಿನಲ್ಲಿ ಜಿಹಾದ್ ಎಂದು ಹೇಳಲಾಗುತ್ತದೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುವುದನ್ನು ನೋಡಿರಿ: "ಯಾರು ನಮ್ಮ ವಿಚಾರದಲ್ಲಿ ಜಿಹಾದ್ ಮಾಡುತ್ತಾರೋ (ತ್ಯಾಗದಿಂದ ಕೂಡಿದ ಭಾರೀ ಪರಿಶ್ರಮಪಡುತ್ತಾರೋ) ಅವರಿಗೆ ನಮ್ಮ ಮಾರ್ಗವನ್ನು ತೋರಿಸಿ ಕೊಡುವೆವು" (29:70). ಇಲ್ಲಿ ದೇವಪ್ರಾಪ್ತಿಗಾಗಿ ಮಾಡುವ ಪರಿಶ್ರಮಕ್ಕೆ ಜಿಹಾದ್ ಎಂಬ ಶಬ್ದವು ಪ್ರಯೋಗಿಸಲ್ಪಟ್ಟಿದೆ. ದ್ರೋಹಿಯಾದ ಆಡಳಿತಾಧಿಕಾರಿಯ ಮುಂದೆ ಸತ್ಯವನ್ನು ಮರೆಮಾಚದೆ ಹೇಳುವುದು, ನ್ಯಾಯಪೂರ್ಣವಾಗಿ ಮಾತನಾಡುವುದು ಜಿಹಾದ್ ಮಾತ್ರವಲ್ಲ, ಅದು ಜಿಹಾದ್‌ಗಳಲ್ಲಿ ಶ್ರೇಷ್ಠವಾದುದೆಂದು ಪೈಗಂಬರರು ಹೇಳಿರುವರು. ಹಾಗೆಯೇ ತನ್ನ ಹೃದಯವನ್ನು ಎಲ್ಲ ವಿಧದ ಮಾಲಿನ್ಯಗಳಿಂದ ಪರಿಶುದ್ಧವಾಗಿಡಲು ಪ್ರಯತ್ನಿಸುವುದನ್ನು ಸಹ ಜಿಹಾದ್ ಎಂದು ಹೇಳುತ್ತಾರೆ. ಒಂದು ಸಂದರ್ಭದಲ್ಲಿ ಯುದ್ಧದಿಂದ ಮರಳುತ್ತಿದ್ದಾಗ ಪೈಗಂಬರರು, "ನಾವೀಗ ಸಣ್ಣ ಜಿಹಾದಿನಿಂದ ದೊಡ್ಡ ಜಿಹಾದಿಗೆ ಮರಳುತ್ತಿದ್ದೇವೆ" ಎಂದು ಹೇಳಿದರು. ದೊಡ್ಡ ಜಿಹಾದ್ ಏನೆಂದು ಕೇಳಿದಾಗ, "ತನ್ನ ಮನಸ್ಸಿನೊಡನೆ ನಡೆಸುವ ಹೋರಾಟ ದೊಡ್ಡ ಜಿಹಾದ್" ಎಂದು ಹೇಳಿದರು. ವಿವಿಧಾರ್ಥಗಳಲ್ಲಿ ಪ್ರಯೋಗಿಸಲ್ಪಡುವ ಜಿಹಾದ್ ಎಂಬ ಶಬ್ದದ ಇನ್ನೊಂದು ಅರ್ಥ ತಮ್ಮ ವಿಶ್ವಾಸವನ್ನು ಸಂರಕ್ಷಿಸಲು ಪ್ರತಿರೋಧಕವಾಗಿ ಹೋರಾಡುವ ಧರ್ಮಯುದ್ಧವಾಗಿದೆ. ಆದರೆ ಅದು ಸಣ್ಣ ಜಿಹಾದ್ ಆಗಿದೆ.

ಹೀಗಿರುವ ಜಿಹಾದ್ ಎಲ್ಲ ಮುಸ್ಲಿಮರಿಗೆ ಮಾತ್ರವಲ್ಲ ಎಲ್ಲ ಧರ್ಮವಿಶ್ವಾಸಿಗಳಿಗೂ ಆವಶ್ಯಕವಾಗಿದೆ.

ಪೈಗಂಬರರಿಗೂ ಅನುಚರರಿಗೂ ಯುದ್ಧ ಮಾಡುವ ಸಂದರ್ಭ ಒದಗಿತ್ತೆಂಬುದು ವಾಸ್ತವ. ಆದರೆ ಆ ಯುದ್ಧಗಳಲ್ಲಿ ಯಾವುದೂ ಸಹ ಇಸ್ಲಾಂ ಧರ್ಮ ಪ್ರಚಾರಕ್ಕೋಸ್ಕರ ಮಾಡಿದುದಲ್ಲ. ಓರ್ವ ಪಾಶ್ಚಾತ್ಯ ವಿದ್ವಾಂಸನಾದ Mr. Cranston ತನ್ನ World Faith ಎಂಬ ಪುಸ್ತಕದಲ್ಲಿ ಬರೆದುದನ್ನು ನೋಡಿರಿ: "ಮುಹಮ್ಮದ್ ಒಮ್ಮೆಯೂ ಸ್ವಂತ ನೆಲೆಯಲ್ಲಿ ಯುದ್ಧಮಾಡಿಲ್ಲ. ಅವರು ಮಾಡಿದ ಎಲ್ಲ ಯುದ್ಧಗಳು ಆತ್ಮ ರಕ್ಷಣಾರ್ಥ ಹಾಗೂ ಸ್ವಯಂ ಜೀವಿಸಲಿಕ್ಕೆ ಆಗಿತ್ತು." ಬಲಹೀನರೂ ಅಲ್ಪ ಸಂಖ್ಯಾತರೂ ಆಗಿದ್ದ ಮುಸ್ಲಿಮರನ್ನು, ಅವರ ವಿಶ್ವಾಸವನ್ನು ತ್ಯಜಿಸುವಂತೆ ಶತ್ರುಗಳು ಬಲಪ್ರಯೋಗಿಸಿದಾಗ, ದೇವೇಚ್ಛೆಯನ್ನನುಸರಿಸಿ ತಮ್ಮ ವಿಶ್ವಾಸವನ್ನು ಸಂರಕ್ಷಿಸಲಿಕ್ಕಾಗಿ ಪ್ರತಿರೋಧಕವೆಂಬಂತೆ ಮಾಡಿದ ಹೋರಾಟಗಳಾಗಿದ್ದವು ಅವೆಲ್ಲ. ಇಂತಹ ಯುದ್ಧ ಮುಹಮ್ಮದ್ ಪೈಗಂಬರ್ ಮಾತ್ರವಲ್ಲ ಹಿಂದಿನ ಹಲವಾರು ಪ್ರವಾದಿಗಳೂ ಸಹ ಮಾಡಿದ್ದರು. ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸಿಕೊಡಬೇಕೆಂದು ಉಪದೇಶಿಸಿದ ಯೇಸುಕ್ರಿಸ್ತರು ಕೂಡ ಒಂದು ಸಂದರ್ಭದಲ್ಲಿ " ಮೇಲಂಗಿಯನ್ನು ಮಾರಿಯಾದರೂ ಖಡ್ಗವನ್ನು ಕೊಂಡುಕೊಳ್ಳಲಿ" (ಲೂಕ 22:36) ಎಂದು ಆಜ್ಞಾಪಿಸಿದರು.

ಶ್ರೀ ರಾಮಚಂದ್ರರ ಚರಿತ್ರೆಯನ್ನು ನೋಡಿರಿ. ಆ ಮಹಾಮಹಿಮನಿಗೆ 14 ವರ್ಷ ವನವಾಸ ಮಾಡಬೇಕಾಗಿ ಬಂದರೂ ಆ ಪುಣ್ಯ ಪುರುಷ ಯಾರಿಗೂ ದ್ರೋಹವನ್ನು ಬಗೆಯಲಿಲ್ಲ. ಆದರೆ ವನವಾಸ ಜೀವನವನ್ನು ನಡೆಸುತ್ತಿದ್ದ ಆ ಮಹಾಪುರುಷನನ್ನು ಅಲ್ಲಿಯೂ ಶಾಂತಿಯಿಂದ ಕಳೆಯಲು ವೈರಿಗಳು ಬಿಡಲಿಲ್ಲ. ಕಟ್ಟಕಡೆಗೆ ಅವರು ಯುದ್ಧ ಮಾಡಬೇಕಾಯಿತು. ಇನ್ನು ಶ್ರೀ ಕೃಷ್ಣರ ಚರಿತ್ರೆಯೆಡೆಗೆ ಕಣ್ಣು ಹಾಯಿಸುವ. ಮಾಧುರ್ಯದಿಂದ ತುಂಬಿದ ಅವರ ಉಪದೇಶಗಳನ್ನು ಕೇಳಲು ಸೌಮ್ಯ ಶೀಲರಾದ ಜನರು ಬಂದು ನೆರೆದರು. ಆದರೆ ದುಷ್ಟರು ಆ ಮಹಾಪುರುಷನ ಶಬ್ದಕ್ಕೆ ಕಿವಿಗೊಡಲಿಲ್ಲ. ಹಾಗೆ ದೌರ್ಜನ್ಯವು ಬಹಳ ವಿಪರೀತವಾಗಿ ಪರಿಣಮಿಸಿದಾಗ ಅದನ್ನು ತಡೆಯುವ ಸಲುವಾಗಿ ಅವರು ಹಲವಾರು ಹೋರಾಟ ನಡೆಸಿದರು. ಕಡೆಗೆ ಅವರು ಕೌರವರ ವಿರುದ್ಧವಾಗಿ ಪಾಂಡವರ ಸಹಾಯಕನಾಗಿ ಅರ್ಜುನನ ರಥದ ಸಾರಥ್ಯವನ್ನು ವಹಿಸಿಕೊಂಡು ರಣರಂಗಕ್ಕಿಳಿದರು. ನಿಷ್ಕರುಣೆಯಿಂದ ಬಾಣಗಳ ಸುರಿಮಳೆಯನ್ನು ಸುರಿಸಲು ಅವರು ಅರ್ಜುನನಿಗೆ ಆಜ್ಞಾಪಿಸಿದರು. ಭಗವದ್ಗೀತೆಯು ಶ್ರೀ ಕೃಷ್ಣರು ಅದೇ ಸಂದರ್ಭದಲ್ಲಿ ಅರ್ಜುನನಿಗೆ ನೀಡಿದ ಉಪದೇಶಗಳಾಗಿವೆಯೆಂದು ಹೇಳಲ್ಪಡುತ್ತದೆ. ಇನ್ನು ಝುರತುಷ್ಟ್ರರ ಚರಿತ್ರೆಯನ್ನು ಅವಲೋಕಿಸುವುದಾದರೆ, ಗುಸ್ತಾಸ್ಪ ರಾಜನ ಅತಿ ಪ್ರಿಯವಾದ ಕುದುರೆಯ ವ್ಯಾಧಿಗ್ರಸ್ತ ಕಾಲುಗಳನ್ನು ಗುಣಪಡಿಸಲೋಸುಗ ಝುರತುಷ್ಟ್ರ ಮಾಡಿಕೊಂಡ ಕರಾರುಗಳ ಪೈಕಿ ಒಂದು, ರಾಜನ ಶೂರ ಪುತ್ರನಾದ ಇಸ್ಫಂದಿಯರನು ಧರ್ಮ ರಕ್ಷಣಾರ್ಥವಾಗಿ ಖಡ್ಗಧಾರಿಯಾಗಬೇಕೆಂದಾಗಿತ್ತು. ಮುಂದೆ ತನ್ನ ಅನುಯಾಯಿಯಾಗಿ ಮಾರ್ಪಟ್ಟ ಗುಸ್ತಾಸ್ಪರಾಜನಿಗೂ ಝುರತುಷ್ಟ್ರ ಧರ್ಮದ ವಿರೋಧಿಯಾಗಿದ್ದ ಅರಜಸ್ಪ ರಾಜನಿಗೂ ಯುದ್ಧವುಂಟಾದಾಗ ಮಹಾಭಯಂಕರವಾಗಿ ಕಾದಿದವನು ಇಸ್ಫಂದಿಯರನೇ ಆಗಿದ್ದನು.

ಇನ್ನು ಮುಹಮ್ಮದ್ ಪೈಗಂಬರರ ಚರಿತ್ರೆಯನ್ನು ಪರಿಶೀಲಿಸೋಣ. ಅವರನ್ನೂ ಅವರ ಅನುಯಾಯಿಗಳನ್ನೂ ಶತ್ರುಗಳು ಹಲವಿಧ ದೌರ್ಜನ್ಯಗಳಿಗೆ ಗುರಿಪಡಿಸಿದರು. ಕೆಲವರ ಕಾಲಿಗೆ ಹಗ್ಗವನ್ನು ಕಟ್ಟಿ ಎಳೆದುಕೊಂಡು ಹೋದರು. ಕೆಲವರನ್ನು ಉರಿಬಿಸಿಲಿನಲ್ಲಿ ಮರಳಿನ ಮೇಲೆ ಮಲಗಿಸಿ ಎದೆಯ ಮೇಲೆ ಭಾರವಾದ ಕಲ್ಲುಗಳನ್ನಿಟ್ಟು ಅವರು ಅನುಭವಿಸುವ ಬಾಧೆಯನ್ನು ಕಂಡು ಹರ್ಷಗೊಂಡರು. ಕೆಲವರನ್ನು ಹೊಗೆಹಾಕಿ ಉಸಿರು ಕಟ್ಟುವಂತೆ ಮಾಡಿದರು. ಮುಸ್ಲಿಮರಿಗೆದುರಾಗಿ ಅವರು ನಡೆಸಿದ ದುಷ್ಕೃತ್ಯಗಳು ಎಲ್ಲ ಸೀಮೆಗಳನ್ನೂ ಮೀರಿದ್ದವು. ಅದರ ಘೋರತೆಯನ್ನು ನೆನೆಸುವಾಗಲೇ ಮೈ ನವಿರೇಳುತ್ತದೆ. ಅವರು ಬಡ ಸ್ತ್ರೀಯರನ್ನೂ ಮಕ್ಕಳನ್ನೂ ನಿಷ್ಕರುಣೆಯಿಂದ ವಧಿಸಲು ತೊಡಗಿದರು. ಕೆಲ ಸ್ತ್ರೀಯರನ್ನು ಅವರ ಗುಹ್ಯಾಂಗದೊಳಗೆ ಈಟಿಯಿಂದ ತಿವಿದು ಕೊಂದರು. ಕೆಲ ಸ್ತ್ರೀಯರ ಕಾಲುಗಳನ್ನು ಎರಡು ಒಂಟೆಗಳಿಗೆ ಬಿಗಿಯಾಗಿ ಕಟ್ಟಿ ಅವುಗಳನ್ನು ಎದಿರುಬದಿರು ದಿಕ್ಕುಗಳಿಗೆ ಓಡಿಸಿ ಅವರನ್ನು ಎರಡು ಸೀಳಾಗಿ ಮಾಡಿದರು. ಮೂರು ವರ್ಷಗಳ ಕಾಲ ಅವರು ಪೈಗಂಬರರನ್ನೂ ಅನುಯಾಯಿಗಳನ್ನೂ ಬಹಿಷ್ಕರಿಸಿದರು. ಆ ಬಹಿಷ್ಕಾರದ ಕಾರಣದಿಂದ ಪೈಗಂಬರರ ಚಿಕ್ಕಪ್ಪ ಅಬೂತಾಲಿಬ್ ಮತ್ತು ಪ್ರಿಯಪತ್ನಿ ಖದೀಜ ಮೃತರಾದರು. ಕೆಲವರಿಗೆ ತಮ್ಮ ವಿಶ್ವಾಸವನ್ನು ಸಂರಕ್ಷಿಸಲು ಊರು ಬಿಡಬೇಕಾಯಿತು. ಹೀಗೆ ಹದಿಮೂರು ವರ್ಷಗಳ ಕಾಲ ಪೈಗಂಬರರಿಗೂ ಅನುಚರರಿಗೂ ಹಲವಿಧ ಕಷ್ಟಾನುಭವಗಳನ್ನು ಸಹಿಸಬೇಕಾಯಿತು. ವೈರಿಗಳು ಕೊನೆಗೆ ಪೈಗಂಬರರನ್ನು ಕೊಲ್ಲಲು ತೀರ್ಮಾನಿಸಿದರು. ಆ ಸಂದರ್ಭದಲ್ಲಿ ಅವರಿಗೆ ತನ್ನ ಜನ್ಮಭೂಮಿಯಾದ ಮಕ್ಕವನ್ನು ಬಿಟ್ಟು ಹೋಗಬೇಕಾಯಿತು. ಹಾಗೆ ಅವರು ಮದೀನದಲ್ಲಿ ಅಭಯವನ್ನು ಪಡೆದರು. ಅವರಲ್ಲಿ ವಿಶ್ವಾಸವನ್ನಿಟ್ಟಿದ್ದ ಬಡವರಾದ ಅನುಯಾಯಿಗಳು ಸಹ ಅವರನ್ನು ಅನುಗಮಿಸಿ ಮದೀನವನ್ನು ತಲುಪಿಸಿದರು. ಅಲ್ಲಿಯೂ ಸಮಾಧಾನದಿಂದ ಉಸಿರೆಳೆಯಲು ಶತ್ರುಗಳು ಅವರನ್ನು ಬಿಡಲಿಲ್ಲ. ಅವರು ದೊಡ್ಡ ಸೈನ್ಯದಿಂದೊಡಗೂಡಿ ಮದೀನವನ್ನು ಆಕ್ರಮಿಸಿ ಮುಸ್ಲಿಮರನ್ನು ಕೊಂದು ನಾಶ ಮಾಡಲು ಉದ್ಯುಕ್ತರಾದರು. ಆ ಸಂದರ್ಭದಲ್ಲಿ ಅಲ್ಲಾಹನಿಂದ ಹೀಗೆ ಆಜ್ಞೆಯುಂಟಾಯಿತು: "ಇನ್ನು ಈ ಹಿಂಸೆಗೊಳಗಾದ ಮುಸ್ಲಿಮರಿಗೆ ತಮ್ಮೊಡನೆ ಯುದ್ಧ ಮಾಡುವವರೊಡನೆ ಯುದ್ಧ ಮಾಡಲು ಅನುಮತಿಯನ್ನೀಯಲಾಗಿದೆ; ನಿಶ್ಚಯವಾಗಿಯೂ ಅಲ್ಲಾಹನು ಅವರಿಗೆ ಸಹಾಯವನ್ನೀಯಲು ಶಕ್ತನು." (22:40). ಯಾವ ಸಂದರ್ಭದಲ್ಲಿ ಮುಸ್ಲಿಮರಿಗೆ ಖಡ್ಗವನ್ನೆತ್ತುವುದು ಅನಿವಾರ್ಯವಾಯಿತೆಂಬುದು ಈ ಖುರ್‌ಆನ್ ವಚನ ನಮಗೆ ವ್ಯಕ್ತವಾಗಿ ತಿಳಿಸುತ್ತದೆ. ಆದರೆ ಯುದ್ಧದ ಸಮಯದಲ್ಲಿ ಕೂಡ ಆಕ್ರಮ ಮತ್ತು ಅನ್ಯಾಯ ಮಾಡಬಾರದೆಂದು ಇಸ್ಲಾಂ ಎಚ್ಚರಿಸುತ್ತದೆ. ಪವಿತ್ರ ಖುರ್‌ಆನ್ ಹೇಳುವುದನ್ನು ನೋಡಿರಿ: "ದೇವಮಾರ್ಗದಲ್ಲಿ ನಿಮ್ಮೊಡನೆ ಯುದ್ಧ ಮಾಡುವವರೊಡನೆ ಮಾತ್ರ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬಾರದು. ಖಂಡಿತವಾಗಿ ಅಲ್ಲಾಹನು ಅತಿಕ್ರಮಣಮಾಡುವವರನ್ನು ಪ್ರೀತಿಸುವುದಿಲ್ಲ." (2:191). ಯುದ್ಧ ಮಾಡುತ್ತಿರುವಾಗಲೇ ಶತ್ರುಗಳು ಸಂಧಿಗೆ ಬರುವವರಾದರೆ ನೀವು ಸಹ ಅದನ್ನು ಒಪ್ಪಬೇಕೆಂದು ಖುರ್‌ಆನ್ ಕಲಿಸುತ್ತದೆ. ಅದು ಹೀಗೆನ್ನುತ್ತದೆ : "ಅವರು (ಶತ್ರುಗಳು) ಸಂಧಾನಕ್ಕೆ ಒಪ್ಪುವರಾದರೆ ನೀನು ಸಹ ಅದಕ್ಕೆ ಸಿದ್ಧನಾಗು; ಮತ್ತು ಅಲ್ಲಾಹನಲ್ಲಿ ಭರವಸೆಯನ್ನಿಡು" (8:62). ಯುದ್ಧದ ಸಂದರ್ಭದಲ್ಲಿ ಸ್ತ್ರೀಯರನ್ನೂ ಮಕ್ಕಳನ್ನೂ ಕೊಲ್ಲಬಾರದೆಂದೂ ಆರಾಧನಾಲಯಗಳನ್ನು ಹಾಳುಗೆಡಹಬಾರದೆಂದೂ ಕೃಷಿಯನ್ನು ನಾಶಪಡಿಸಬಾರದೆಂದೂ ಮುಸ್ಲಿಮರಿಗೆ ಇಸ್ಲಾಂ ಉಪದೇಶಿಸುತ್ತದೆ. ಇಸ್ಲಾಮಿನ ಈ ಉಪದೇಶಗಳು ಸುವರ್ಣಾಕ್ಷರಗಳಲ್ಲಿ ಬರೆಯಲರ್ಹವಾಗಿವೆ. ಯುದ್ಧಮಾಡುವ ಸಂದರ್ಭ ಬಂದರೂ ಮರ್ಯಾದೆ ಮತ್ತು ಮನುಷ್ಯತ್ವದ ಸೀಮೆಯನ್ನು ಉಲ್ಲಂಘಿಸಕೂಡದೆಂಬ ಉಪದೇಶವನ್ನೀಯುವ ಧರ್ಮವನ್ನು ಖಡ್ಗದ ಬಲದಿಂದ ಪ್ರಚಾರಗೊಂಡ ಧರ್ಮವೆಂದು ಶತ್ರುಗಳು ಚಿತ್ರೀಕರಿಸುತ್ತಾರೆ. ಧರ್ಮಪ್ರಚಾರಕ್ಕೋಸ್ಕರ ಮುಸ್ಲಿಮರು ಬಲಪ್ರಯೋಗಿಸಿದರೆಂದು ಅವರು ಹೇಳುತ್ತಾರೆ. ಆದರೆ ಸತ್ಯವು ತೀರಾ ವಿರುದ್ಧವಾಗಿದೆ. ಧರ್ಮ ಪ್ರಚಾರಕ್ಕಲ್ಲ; ಧರ್ಮ ಸ್ವಾತಂತ್ರ್ಯಕ್ಕಾಗಿತ್ತು ಯುದ್ಧಮಾಡಲು ಇಸ್ಲಾಂ ಮುಸ್ಲಿಮರಿಗೆ

ಆಜ್ಞಾಪಿಸಿದ್ದು. ಪವಿತ್ರ ಖುರ್‌ಆನ್ ಹೇಳುತ್ತದೆ: "ಯುದ್ಧ ಮಾಡುವ ಸಂದರ್ಭ ಬಂದರೆ ಯುದ್ಧಕಾರಕವಾದ ಒಳಸಂಚುಗಳು ನಿಶ್ಶೇಷವಾಗಿ, ಧರ್ಮವು ದೇವಕಾರ್ಯಕ್ಕಾಗಿ ಮಾರ್ಪಡುವಂತೆ ಬದಲಾವಣೆ ಉಂಟಾಗುವ ವರೆಗೆ ಹೋರಾಡಿರಿ" (2:194). ಇದರಿಂದ ತಿಳಿದು ಬರುವುದೇನೆಂದರೆ ಧರ್ಮ ಕಾರ್ಯವು ದೇವರಿಗೆ ಸಂಬಂಧಿಸಿದ್ದು ಎಂದು. ಅದರಲ್ಲಿ ಇತರರು ಕೈ ಹಾಕುವ ಅಗತ್ಯವಿಲ್ಲ. ಹಾಗೆ ಮಾಡುವುದು ಬಲಾತ್ಕಾರವಾಗಿದೆ. ಹಾಗಿರುವ ಧರ್ಮಸ್ವಾತಂತ್ರ್ಯವನ್ನು ವಿರೋಧಿಸುವ ಬಲಾತ್ಕಾರವನ್ನು ಇಸ್ಲಾಂ ವಿರೋಧಿಸುತ್ತದೆ.

ಮುಸ್ಲಿಮರಿಗೆ ಧರ್ಮಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡುವ ಸಂದರ್ಭ ಬಂದರೆ ಅವರ ಧರ್ಮದ ಸ್ವಾತಂತ್ರ್ಯವನ್ನು ಸಂರಕ್ಷಿಸಿದರೆ ಸಾಲದೆಂದೂ ಇತರ ಧರ್ಮಾನುಯಾಯಿಗಳಿಗೂ ಅವರವರ ಧರ್ಮಾನುಷ್ಠಾನಗಳನ್ನು ನಿರ್ವಹಿಸುವ ಮತ್ತು ಅವರ ಆರಾಧನಾಲಯಗಳಲ್ಲಿ ಆರಾಧಿಸುವ ಸ್ವಾತಂತ್ರ್ಯವನ್ನು ದೊರಕಿಸಿ ಕೊಡುವುದು ಸಹ ಯುದ್ಧದ ಉದ್ದೇಶವಾಗಿರಬೇಕೆಂದೂ ಪವಿತ್ರ ಖುರ್‌ಆನ್ ಕಲಿಸುತ್ತದೆ. ಅದು ಹೇಳುವುದನ್ನು ನೋಡಿರಿ: "ಅಲ್ಲಾಹನು ನಮ್ಮ ಪ್ರಭುವೆಂದು ಹೇಳಿದ ಕಾರಣದಿಂದ ಮಾತ್ರ ಅನ್ಯಾಯವಾದ ರೀತಿಯಲ್ಲಿ ಅವರು ಆಕ್ರಮಿಸಲ್ಪಟ್ಟರು. ಆಕ್ರಮಶೀಲರನ್ನು ಇತರರ ಮುಖಾಂತರ ಪ್ರತಿಭಟಿಸದೆ ಇರುತ್ತಿದ್ದರೆ ಮಠಗಳೂ, ಕ್ರೈಸ್ತ ದೇವಾಲಯಗಳೂ, ಯಹೂದ್ಯರ ಉಪಾಸನ ಮಂದಿರಗಳೂ, ಮುಸ್ಲಿಮರ ಮಸೀದಿಗಳೂ ದಿಟವಾಗಿಯೂ ನಾಶಗೊಳಿಸಲ್ಪಡುತ್ತಿದ್ದವು. ಆ ಸ್ಥಳಗಳು ದೇವ ಸ್ಮರಣೆಗಾಗಿ ಉಪಯೋಗಿಸಲ್ಪಡುವ ಸ್ಥಳಗಳಾಗಿವೆ. " (22 : 41)

ಇಂತಹ ಮಹತ್ವಪೂರ್ಣವಾದ ಉಪದೇಶಗಳನ್ನು ಇಸ್ಲಾಂ ನೀಡಿರುವಾಗ, ಯುದ್ಧ ಮಾಡಿ ಇತರರನ್ನು ಮುಸ್ಲಿಮರನ್ನಾಗಿ ಪರಿವರ್ತಿಸಬೇಕೆಂಬುದು ಇಸ್ಲಾಮಿನ ಉಪದೇಶವೆಂದು ಆರೋಪಿಸುವುದು ಕಠೋರ ಅನೀತಿಯಾಗಿದೆ.

ಇನ್ನು ಕೊನೆಯದಾಗಿ, ಯುದ್ಧ ಮಾಡಿದ ನಂತರ ಸೋತವರೊಡನೆ ಹೇಗೆ ವರ್ತಿಸಬೇಕೆಂಬುದರ ಉತ್ತಮ ಮಾರ್ಗದರ್ಶನವನ್ನು ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆಯಿಂದ ಉದ್ಧರಿಸಬಹುದಾಗಿದೆ. ಆ ಚಾರಿತ್ರಿಕ ಸಂಭವವನ್ನು ಒಬ್ಬ ಪಾಶ್ಚಾತ್ಯ ಚರಿತ್ರೆಕಾರನಾದ ಮಿಸ್ಟರ್ ಸ್ಟೇನ್‌ಲೀ ಲೇನ್ ಪೂಲ್ ಹೀಗೆ ಬರೆದಿದ್ದಾರೆ: "ಅದು ಮುಹಮ್ಮದ್ (ಪೈಗಂಬರ್) ರವರು ಶತ್ರುಗಳಿಗೆ ಪ್ರತೀಕಾರವನ್ನುಂಟು ಮಾಡುವ ಸಂದರ್ಭವಾಗಿತ್ತು. ಅವರ ಹಳೆಯ ವೈರಿಗಳು ಮುಹಮ್ಮದರ ಪಾದದಡಿಯಲ್ಲಿ ಬಂದು ಬಿದ್ದಿದ್ದಾರೆ. ಏನು ! ಅವರು ನಿಷ್ಕರುಣೆಯಿಂದ ಶತ್ರುಗಳನ್ನು ನಾಶ ಮಾಡುವರೋ ? ಭಯಂಕರವಾದ ಶಿಕ್ಷೆಗೆ ಅವರನ್ನು ಗುರಿಪಡಿಸುವರೋ?

"ಅದು ಒಬ್ಬನ ಯಥಾರ್ಥ ಸ್ವರೂಪವು ಪ್ರಕಟವಾಗುವ ಸಂದರ್ಭವಾಗಿತ್ತು. ಆ ಸಮಯದಲ್ಲಿ ವಿಧಿಸಬಹುದಾಗ ಶಿಕ್ಷೆಯ ಕುರಿತು ಊಹಿಸುವಾಗಲೇ ರೋಮಾಂಚನವಾಗುತ್ತದೆ. ಅದರ ಭೀಕರತೆಯನ್ನು ಭಾವಿಸುವಾಗಲೇ ಅಸಹ್ಯವಾಗುತ್ತದೆ. ಆದರೆ ಸಂಭವಿಸಿದ್ದು ಏನು ? ರಕ್ತದ ಕಾಲುವೆ ಎಲ್ಲಿ ? ಸಾವಿರಗಟ್ಟಲೆ ಕೊಲ್ಲಲ್ಪಟ್ಟವರ ಶವವೆಲ್ಲಿ? ಸಂಭವಿಸಿದ್ದೆಲ್ಲ ತದ್ವಿರುದ್ಧವಾಗಿತ್ತು. ಯಾವ ದಿನದಂದು ಪೈಗಂಬರರು ತನ್ನ ಶತ್ರುಗಳನ್ನು ಜಯಿಸಿದ್ದರೋ ಅದೇ ದಿನ ತನ್ನ ಮನಸ್ಸನ್ನು ಸಹ ಜಯಿಸಿದ್ದರು. ಶತ್ರುಗಳು ವರ್ಷಗಟ್ಟಲೆ ಕಾಲ ಅವರನ್ನು ಏನೆಲ್ಲ ರೀತಿಯಲ್ಲಿ ಪೀಡಿಸುತ್ತಾ ಇದ್ದುದ್ದನ್ನೂ ನಿಷ್ಕಾರುಣ್ಯವಾಗಿ ಅವರನ್ನು ನಿಂದಿಸಲಿಕ್ಕೂ ಅಪಮಾನಿಸಲಿಕ್ಕೂ ಟೊಂಕಕಟ್ಟಿ ಹೊರಟದ್ದನ್ನೂ ವಿಶಾಲ ಹೃದಯಿಯಾದ ಪೈಗಂಬರರು ಮರೆತು ಮಕ್ಕ ನಿವಾಸಿಗಳೆಲ್ಲರಿಗೂ ಕ್ಷಮೆ ನೀಡಿದರು."

ಈ ಚಾರಿತ್ರಿಕ ಸಂಭವದಿಂದ, ಜಯಿಸಲ್ಪಟ್ಟ ಜನರನ್ನಾಗಲೀ ಬಲ ಪ್ರಯೋಗಿಸಿ ಇಸ್ಲಾಂ ಧರ್ಮವನ್ನು ಸ್ವೀಕರಿಸುವಂತೆ ಮಾಡಲು ಪೈಗಂಬರರೂ ಅನುಚರರೂ ತಯಾರಿರಲಿಲ್ಲವೆಂದು ಸ್ಪಷ್ಟವಾಗುತ್ತದೆ.

ಸಂಕ್ಷಿಪ್ತವಾಗಿ, ಧಾರ್ಮಿಕ ವಿಶ್ವಾಸದ ಸಂರಕ್ಷಣೆಗೋಸ್ಕರ ಯುದ್ಧ ಮಾಡುವುದನ್ನು ಇಸ್ಲಾಂ ಸಮ್ಮತಿಸುವುದಾದರೂ ಇಸ್ಲಾಮಿಕ ದೃಷ್ಟಿಯಲ್ಲಿ ಅಂತಹ ಜಿಹಾದ್ ಸಣ್ಣ ಜಿಹಾದ್ ಆಗಿದೆ. ತನ್ನ ಮನಸ್ಸನ್ನು ನಿಗ್ರಹಿಸಿ ಅದನ್ನು ಸನ್ಮಾರ್ಗದೆಡೆಗೆ ಕೊಂಡೊಯ್ಯಲಿಕ್ಕಾಗಿ ಮಾಡುವ ಹೋರಾಟ ದೊಡ್ಡ ಜಿಹಾದ್ ಹಾಗೂ ಶ್ರೇಷ್ಠವಾದದ್ದು.

## *Love For All*
## *Hatred For None*

## ಎಲ್ಲರೊಡನೆಯೂ ಪ್ರೀತಿ
## ಯಾರೊಡನೆಯೂ ದ್ವೇಷವಿಲ್ಲ.

### ನೊಬೆಲ್ ಪ್ರಶಸ್ತಿ ವಿಜೇತ

# ಖ್ಯಾತ ಮುಸ್ಲಿಂ ವಿಜ್ಞಾನಿ ಡಾ| ಅಬ್ದುಸ್ಸಲಾಂ



ಕನ್ನಡ ವಾರ ಪತ್ರಿಕೆ "ಅಲ್ ಅನ್ಸಾರ್" 2001 ಫೆಬ್ರವರಿ 19 ರಿಂದ ಜೂನ್ 18ರ ವರೆಗೆ 14 ಕಂತುಗಳಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ಡಾ| ಅಬ್ದುಸ್ಸಲಾಮರ ಜೀವನ ಚರಿತ್ರೆಯನ್ನು ಚಿಣ್ಣರಿಗಾಗಿ ಬರೆದಿದೆ. ನಾವು ಅದನ್ನು "ಯುಗರಶ್ಮಿ"ಯ ಓದುಗರಿಗೋಸ್ಕರ ಕೃತಜ್ಞತಾಪೂರ್ವಕವಾಗಿ ಪ್ರಕಟಿಸುತ್ತಿದ್ದೇವೆ. ಅಹ್ಮದಿಯಾ ಮುಸ್ಲಿಂ ಜಮಾಅತಿನ ಹೆಮ್ಮೆಯ ಪುತ್ರನಾದ ಡಾ| ಅಬ್ದುಸ್ಸಲಾಂ ಓರ್ವ ವಿಶ್ವ ವಿಖ್ಯಾತ ವಿಜ್ಞಾನಿಯಾಗಿದ್ದು, ಜೊತೆಗೆ ನಿಷ್ಠಾವಂತ ದೇವ ವಿಶ್ವಾಸಿಯೂ ಮುಸ್ಲಿಂ ಕರ್ಮಯೋಗಿಯೂ ಆಗಿದ್ದರು. ಅವರು 1961ರಿಂದ ಪಾಕಿಸ್ಥಾನದ ಅಧ್ಯಕ್ಷರ ಪ್ರಧಾನ ವೈಜ್ಞಾನಿಕ ಸಲಹೆಗಾರರಾಗಿದ್ದರು. 1974ರಲ್ಲಿ ಅಹ್ಮದಿಯರನ್ನು ಪಾಕಿಸ್ಥಾನದಲ್ಲಿ ಮುಸ್ಲಿಮೇತರರೆಂದು ಘೋಷಿಸಿದಾಗ, ಸರಕಾರದ ಧೋರಣೆಯನ್ನು ಪ್ರತಿಭಟಿಸಿ ಅವರು ಆ ಹುದ್ದೆಗೆ ರಾಜೀನಾಮೆ ನೀಡಿದ್ದರು. -ಸಂಪಾದಕ

## ಖ್ಯಾತ ವಿಜ್ಞಾನಿ

ಚೌಧುರಿ ಮುಹಮ್ಮದ್ ಹುಸೇನ್ ವೃತ್ತಿಯಲ್ಲಿ ಹೈಸ್ಕೂಲ್ ಅಧ್ಯಾಪಕರು. ಪ್ರವೃತ್ತಿಯಲ್ಲಿ ಧರ್ಮ ಭಕ್ತರು. ಇವರ ಪತ್ನಿ ಹಾಜರಾ. ಪತಿಗೆ ತಕ್ಕ ಪತ್ನಿ. ಇಬ್ಬರೂ ಆದರ್ಶ ದಂಪತಿಗಳು. ಇಬ್ಬರದೂ ಒಂದೇ ಕನಸು. ಒಂದೇ ಪ್ರಾರ್ಥನೆ. "ಅಲ್ಲಾಹುವೇ! ನಮಗೆ ಸ್ವಾಲಿಹ್ ಆದ ಸಂತಾನ ಭಾಗ್ಯ ಕೊಡು". ಐದು ಹೊತ್ತಿನ ನಮಾಝ್‌ನಲ್ಲೂ ಇದೇ ಪ್ರಾರ್ಥನೆ.

ಹಾಜರಾ ಗರ್ಭಿಣಿಯಾದರು. ಪತಿ ಹುಸೈನ್‌ರವರು ಗರ್ಭಿಣಿ ಪತ್ನಿಯನ್ನು ಚೆನ್ನಾಗಿ ಆರೈಕೆ ಮಾಡಿದರು. ಸುಗಮ ಹೆರಿಗೆಯಾಗಲಿ, ಉತ್ತಮ ಸಂತಾನ ಪ್ರಾಪ್ತಿಯಾಗಲಿ ಎಂದು ಆಶಿಸುತ್ತಿದ್ದರು.

ಒಂದು ಸಂಜೆ ಹುಸೇನ್‌ರವರು ಶಾಲೆ ಬಿಟ್ಟು ಬೇಗನೇ ಮನೆಗೆ ಮರಳಿದರು. ತುಂಬು ಗರ್ಭಿಣಿ ಮನೆಯಲ್ಲಿರುವ ಯೋಚನೆ ಅವರದ್ದು. ಯಾವುದೇ ಹೊತ್ತಲ್ಲಿ ಹೆರಿಗೆಯಾದೀತು...

ಹಾಜರಾರವರು ಪತಿಯವರನ್ನು ಮುಗುಳ್ನಗೆಯಿಂದ ಸ್ವಾಗತಿಸಿದರು. ಸಂಜೆಯ ಚಹಾ ತಂದು ಕೊಟ್ಟು ಅವರನ್ನು ಸತ್ಕರಿಸಿದರು.

ಅದೇ ರಾತ್ರಿ ಹಾಜರಾರಿಗೆ ಹೆರಿಗೆ ನೋವು ಕಾಣಿಸಿಕೊಂಡಿತು. ಸ್ವಲ್ಪ ಹೊತ್ತಿನಲ್ಲೇ ಕೊಠಡಿಯೊಳಗಿಂದ ಮಗುವಿನ ಅಳು ಕೇಳತೊಡಗಿತು. ಅಲ್ಲಾಹನ ಅನುಗ್ರಹದಿಂದ ಸುಗಮ ಹೆರಿಗೆ ಅವರಿಗಾಗಿತ್ತು. ಮುದ್ದು ಮುದ್ದಾದ ಗಂಡು ಮಗು. ಹುಸೈನ್-ಹಾಜರಾ ದಂಪತಿಗಳು ಸಂತೋಷದಿಂದ ನಲಿದರು. "ಅಲ್-ಹಮ್ದುಲಿಲ್ಲಾಹ್! ಸುಗಮವಾದ ಹೆರಿಗೆಯ ಮೂಲಕ ಗಂಡು ಮಗುವನ್ನು ಕರುಣಿಸಿದ ನಿನಗೆ ನಾವು ಚಿರಋಣಿಗಳು" ಎಂದು ಸರ್ವಶಕ್ತನನ್ನು ಸ್ತುತಿಸಿದರು. ಅಷ್ಟಕ್ಕೇ ನಿಲ್ಲಿಸಲಿಲ್ಲ. ಅವರು ಮತ್ತೂ ಬೇಡಿದರು; "ಸಂತಾನದಾತನೇ! ಗಂಡುಮಗು ಕೊಟ್ಟ ನಿನಗೇ ಸ್ತುತಿಗಳು! ಅಲ್ಲಾಹನೇ! ಈ ಮಗುವನ್ನು ಓರ್ವ ಸಾಲಿಹ್ ಆಗಿಯೂ ಆರೋಗ್ಯವಂತನಾಗಿಯೂ ಪ್ರತಿಭಾವಂತನಾಗಿಯೂ ಬುದ್ಧಿಶಾಲಿಯಾಗಿಯೂ ಮಾಡು."

ಅಲ್ಲಾಹು ಈ ಧರ್ಮಭಕ್ತರ ದುಆವನ್ನು ತಿರಸ್ಕರಿಸಲಿಲ್ಲ. ಮುಂದೆ ಹಾಗೆಯೇ ಆಯಿತು. ಆ ಮಗು ಜಗದಗಲ ಖ್ಯಾತಿ ಪಡೆಯಿತು. ಅಂದ ಹಾಗೆ ಮಗು ಹುಟ್ಟಿದ್ದೆಲ್ಲಿ? ಅವರಿಟ್ಟ ಹೆಸರೇನು?

## ಮಗುವಿದ್ದಾಗಲೇ ಬಹುಮಾನ!

ಈಗಿನ ಪಾಕಿಸ್ತಾನದಲ್ಲಿರುವ, ಪಂಜಾಬ್‌ನ ಒಂದು ಪುಟ್ಟ ಪಟ್ಟಣ ಝೂಂಗ್. ಚೌಧುರಿ ಹುಸೇನ್ ದಂಪತಿಗಳ ಕನಸಿನ ಕೂಸು ಹುಟ್ಟಿದ್ದು ಇಲ್ಲೇ, ಇಸವಿ 1926ರಲ್ಲಿ. ತಮ್ಮ ಮುದ್ದಿನ ಮಗುವಿಗಿಟ್ಟ ಹೆಸರು - 'ಅಬ್ದುಸ್ಸಲಾಂ'. ಎಷ್ಟೊಂದು ಅರ್ಥವತ್ತಾದ ಹೆಸರು! 'ಶಾಂತಿಯ ಸೇವಕ'. ಮತಾಪಿತರ ಹಾಲ್ಜೇನು ತುಂಬಿದ ಪ್ರೀತಿಯಲ್ಲಿ, ಆರೈಕೆಯಲ್ಲಿ 'ಸಲಾಂ' ಹೂವಿನಂತೆ ಅರಳಿ ತಂದೆ-ತಾಯಿಗಳ ಸಂತೋಷವನ್ನು ಹೆಚ್ಚಿಸುತ್ತಿದ್ದ. ತಂದೆ-ತಾಯಿಗಳ ಪ್ರೀತಿ, ಅಂದದ ಪ್ರಭೆಯಾಗಿ ಆ ಮುಗ್ಧ ಮಗುವಿನ ವದನದಲ್ಲಿ ಅರಳಿತ್ತು!

ಚೌಧುರಿ ಹುಸೇನರಿಗೆ ಮುಂಜಾನೆ ವಾರ್ತಾ ಪತ್ರಿಕೆ ಓದುವುದೊಂದು ಹವ್ಯಾಸ. ಎಂದಿನಂತೆಯೇ ಒಂದು ದಿನಪತ್ರಿಕೆಯ ಪುಟವೊಂದು ತಿರುವಿದಾಗ ಒಂದು ಜಾಹೀರಾತು ಅವರ ಗಮನ ಸೆಳೆಯಿತು.

"ಪುಟ್ಟ ಮಕ್ಕಳ ಆರೋಗ್ಯ ಸ್ಪರ್ಧೆ....." ಅವರ ಕಣ್ಣಮುಂದೆ ಅಬ್ದುಸ್ಸಲಾಮನ ಸುಂದರ ಮುಖ ಹಾದು ಹೋಯಿತು. ಮನಸ್ಸು ನುಡಿಯಿತು. "ಈ ಸ್ಪರ್ಧೆಗೆ ಅಬ್ದುಸ್ಸಲಾಮನನ್ನು ಕರಕೊಂಡು ಹೋಗಬೇಕು". ಹಾಗೇ ಮಾಡಿದರು. ಮಗುವಿನ ತೂಕ, ವಯಸ್ಸು, ಮತ್ತಿತರ ದೈಹಿಕ ಪರೀಕ್ಷೆ ಮಾಡಲಾಯಿತು. ಫೋಟೋ ತೆಗೆಯಲಾಯಿತು.

ಒಂದು ತಿಂಗಳು ಕಳೆಯಿತು. ಎಂದಿನಂತೆ ಪತ್ರಿಕೆಯನ್ನು ನೋಡುತ್ತಿರುವಾಗ ಇದ್ದಕ್ಕಿದ್ದಂತೆ ಅವರ ಮುಖ ಅರಳಿ ರೋಮಾಂಚನಗೊಂಡರು; "ಹಾಜರಾ!.... ಹಾಜರಾ! ಬಾ.....! ಬೇಗ ಬಾ...!" ಎಂದು ಕೂಗಿದರು. ಗಂಡನ ಹರ್ಷೋದ್ಗಾರದ ದನಿ ಕೇಳಿ ಧಾವಿಸಿ ಬಂದ ಪತ್ನಿ ಹಾಜರಾ; "ಏನು, ಏನು?"

ಹುಸೈನ್ ಕಣ್ಸನ್ನೆ ಮಾಡುತ್ತಾ ನಗುಮುಖದಿಂದ ಪೇಪರಿನತ್ತ ನೋಡಿದರು. ಹಾಜರಾ ಕುತೂಹಲದಿಂದ ನೋಡಿದರು! ಏನಾಶ್ಚರ್ಯ! ತನ್ನ ಮಗ ಅಬ್ದುಸ್ಸಲಾಮ್ ನಗುತ್ತಿದ್ದಾನೆ! ಆರೋಗ್ಯ ಸ್ಪರ್ಧೆಯಲ್ಲಿ ಮಗುವಿಗೆ ಪ್ರಥಮ ಬಹುಮಾನ ಬಂದಿತ್ತು. ಅದರ ಛಾಯಾ ಚಿತ್ರ ಅಲ್ಲಿತ್ತು! ತಾಯಿ ಮತ್ತು ತಂದೆಯ ಸಂತೋಷಕ್ಕೆ ಪಾರವೇ ಇಲ್ಲವಾಯಿತು.

## ಮೊದಲ ಗುರುವಿನ ಪಾಠ

ತಂದೆ ತಾಯಿಗಳ ಪ್ರೀತಿಯ ನೆರಳಲ್ಲಿ ಅರಳಿ ದಿನೇ ದಿನೇ ಬೆಳೆಯುತ್ತಿದ್ದ ಸಲಾಂ. ಎಲ್ಲ ಮಕ್ಕಳಂತೆ ಸಹಜ ತುಂಟತನ, ರಚ್ಚೆ ಹಿಡಿದು ಅಳುವುದು, ನಗುವುದು, ಹಠ ಹಿಡಿಯುವುದರಲ್ಲಿ ಇತರ ಮಕ್ಕಳಿಗಿಂತ ಸಲಾಂ ಕಡಿಮೆಯೇನಲ್ಲ. ಆದರೆ ಜಾಣೆಯಾದ ತಾಯಿ ಹಾಜರಾರಿಗೆ ಮುದ್ದಿನ ಮಗನನ್ನು ಸಹನೆಯಿಂದ ಲಾಲಿಸಿ, ಪಾಲಿಸಿ ಪೋಷಿಸಲು ಕಷ್ಟವಾಗಲಿಲ್ಲ. ಮಗುವಿನ ಬೇಕು - ಬೇಡಗಳಿಗೆ ಎಚ್ಚರಿಕೆಯಿಂದ ಸ್ಪಂದಿಸಿ ಖುಷಿ ಪಡಲು ಅವರು ಪಡುತ್ತಿದ್ದ ಪಾಡು ಅಷ್ಟಿಷ್ಟಲ್ಲ. ಆ ಕಂದನ ತುಟಿಯಲ್ಲಿ ಒಂದು ಕ್ಷಣ ನಗು ಲಾಸ್ಯವಾಡುವಾಗ ದೊರೆಯುತ್ತಿದ್ದ ಮಹದಾನಂದದಿಂದ ಆ ತಾಯಿ ಮಗನಿಗಾಗಿ ತೆಗೆದುಕೊಳ್ಳುತ್ತಿದ್ದ ತ್ರಾಸಗಳನ್ನೆಲ್ಲ ಮರೆಯುತ್ತಿದ್ದರು. ತಾನು ನಮಾಜ್ ಮಾಡುತ್ತಿರುವಾಗ ಅದೇ ಚಾಪೆಯಲ್ಲಿ ತನ್ನನ್ನು ಅನುಕರಿಸುವುದು, ಕುರ್‌ಆನ್ ಪಾರಾಯಣ ಮಾಡುತ್ತಿರುವಾಗ ಮಡಿಲಲ್ಲಿ ಬಂದು ಬೀಳುವುದು, ತಂದೆಯಂತೆ ತನಗೂ ಲುಂಗಿ-ಟೊಪ್ಪಿ ಧರಿಸುವಂತೆ ತಾಯಿಯಲ್ಲಿ ಹಠ ಹಿಡಿಯುವುದು ಸಲಾಂನ ನಿತ್ಯ ಪ್ರವೃತ್ತಿಯಾಗಿದ್ದುವು.

ಇದೀಗ ಸಲಾಂನಿಗೆ ನಾಲ್ಕು ವರ್ಷ. ಅಲ್ಲಾಹನ ಕುರಿತು, ಪ್ರೀತಿಯ ಕಣ್ಮಣಿ ಪ್ರವಾದಿ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುರಿತು ತಾಯಿ ವಿವರಿಸುತ್ತಿದ್ದ ಕಥೆಗಳನ್ನು ಸಲಾಂ ಕುತೂಹಲದಿಂದ ಆಲಿಸುತ್ತಿದ್ದ. ಮನೆಯಲ್ಲೇ ತಾಯಿ ಲೆಕ್ಕಗಳ ಆಟವನ್ನು ಹೇಳಿಕೊಡುತ್ತ, ಕೇಳುತ್ತಾ ಸಲಾಂನ ಬುದ್ಧಿವಂತಿಕೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದರು. ಅಕ್ಷರಗಳನ್ನೂ ಕಲಿಸಿದರು.

ತನ್ನ ದೊಡ್ಡಪ್ಪನ ಮಕ್ಕಳು ಶಾಲೆಗೆ ಹೋಗುತ್ತಿರುವುದನ್ನು ಗಮನಿಸಿದ ಸಲಾಂ, "ಮಾ! (ಅಮ್ಮಾ!) ನಾನೂ ಶಾಲೆಗೆ ಹೋಗುತ್ತೇನೆ" ಎಂದು ಹಠ ಹಿಡಿಯತೊಡಗಿದ. "ನೀನು ಇನ್ನೂ ಪುಟ್ಟವ. ಇನ್ನೂ ಎರಡು ವರ್ಷಗಳಾಗಬೇಕು." ತಾಯಿ ಹೇಳಿದರೂ ಸಲಾಂ ಕೇಳಬೇಕಲ್ಲ? "ನನಗೆ ಹೋಗಲೇ ಬೇಕ್"ಂದು ಹಠದಿಂದ ಅಳತೊಡಗಿದ. "ಆಯಿತು, ತಂದೆಗೆ ಹೇಳಿ ಶಾಲೆಗೆ ಕಳಿಸೋಣ" ಎಂದು ಸಮಾಧಾನಪಡಿಸಿದರು. ಎಂ. ಬಿ. ಎಸ್. ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರು ಅಬ್ದುಸ್ಸಲಾಮನ ಕಲಿಕೆಯ ಉತ್ಸಾಹವನ್ನು ಗುರುತಿಸಿದರು. ಆದರೆ ಕಾನೂನಿನ ನಿಯಮದಂತೆ ಶಾಲೆಗೆ ಸೇರಿಸಿಕೊಳ್ಳಲು ಇನ್ನೂ ಎರಡು ವರ್ಷ ಬೇಕಿತ್ತು. ಹಾಸ್ಯ ಪ್ರವೃತ್ತಿಯವರಾದ ಮುಖ್ಯೋಪಾಧ್ಯಾಯರು ಅಬ್ದುಸ್ಸಲಾಮನನ್ನು ಮುದ್ದಿಸುತ್ತಾ, ಪುಟಾಣಿ ಅಬ್ದುಸ್! ಈಗ ಮನೇಲೇ ಆಟ-ಪಾಠ! ಇನ್ನೆರಡು ವರ್ಷ ಬೀಳ್ಕೊಂಡ ಮೇಲೆ ನಿನಗಿಲ್ಲಿ ಆಟ-ಪಾಠ! ಹುಂ, ಚೆನ್ನಾಗಿ ಮನೆಯಲ್ಲೇ ಓದಬೇಕು" ಎನ್ನುತ್ತಾ ಸಮಾಧಾನಪಡಿಸಿದರು. ಸಲಾಂ ಶಾಲೆಗೆ ಹೋಗುವ ಇಚ್ಛೆ ಕೈಗೂಡಲಿಲ್ಲ. ಮೊದಲ ಗುರುವಾದ ತಾಯಿಯ ಅಕ್ಕರೆಯಲ್ಲೇ ಕಲಿಕೆ ಮುಂದುವರಿಸಿದ.

## ನಾಲ್ಕನೇ ತರಗತಿಯೇ ಮೊದಲ ತರಗತಿ!

ಚೌಧುರಿ ಗುಲಾಂ ಹುಸೇನ್. ಇವರು ಅಬ್ದುಸ್ಸಲಾಂನ ಚಿಕ್ಕಪ್ಪ. ಝಾಂಗ್‌ನಲ್ಲಿ ಇವರದೊಂದು ಔಷಧಿ ಅಂಗಡಿ. ಆ ಊರಲ್ಲೆ ಬಹಳ ಪ್ರಸಿದ್ಧ ಔಷಧಿ ವ್ಯಾಪಾರಿ. ನಾನಾ ರೀತಿಯ ಬಣ್ಣ ಬಣ್ಣದ, ವಿವಿಧ ಆಕಾರದಲ್ಲಿ ಜೋಡಿಸಿಟ್ಟಿರುವ ಔಷಧಿ ಬಾಟ್ಲಿಗಳನ್ನು ನೋಡುವುದೆಂದರೆ ಅಬ್ದುಸ್ಸಲಾಮ್‌ನಿಗೆ ಎಲ್ಲಿಲ್ಲದ ಕುತೂಹಲ. ಚಿಕ್ಕಪ್ಪ ಔಷಧಿಗಳನ್ನು ತಯಾರಿಸುತ್ತಿರುವಾಗ ಅಬ್ದುಸ್ಸಲಾಮ್ ಅಲ್ಲಿಂದ ಕದಲುವುದಿಲ್ಲ. ಔಷಧಿಗಳನ್ನು ತಯಾರಿಸುವಾಗ, ದ್ರವ ಪುಡಿಯನ್ನೂ ಬೆರೆಸುವಾಗ ಅಬ್ದುಸ್ಸಲಾಮ್‌ಗಾಗುವ ಕುತೂಹಲ, ಆಶ್ಚರ್ಯ ಅಷ್ಟಿಷ್ಟಲ್ಲ. ಜೊತೆಗೆ ಚಿಕ್ಕಪ್ಪನಿಗೆ ಪ್ರಶ್ನೆಗಳ ಬಾಣ. "ಅದರಲ್ಲಿ ಹಾಕಿದ ಪುಡಿ ಏನಾಯಿತು? ಅದು ಏಕೆ ಕರಗುತ್ತದೆ? ಏಕೆ ಬಣ್ಣ ಬದಲಾಯಿಸುತ್ತದೆ? ಇದೇಕೆ ಹೀಗೆ ವಾಸನೆ?" ಇತ್ಯಾದಿ. ಗುಲಾಂ ಹುಸೇನನಿಗೂ ಅಬ್ದುಸ್ಸಲಾಮ್‌ನ ಬುದ್ಧಿಮತ್ತೆಯಲ್ಲಿ ವಿಶೇಷ ಅಭಿಮಾನ. ಎಲ್ಲವನ್ನು ವಿವರಿಸಿ ಅವನ ಕುತೂಹಲವನ್ನು ತಣಿಸುತ್ತಿದ್ದ.

ಈಗ ಸಲಾಮ್‌ನಿಗೆ ಆರು ವರ್ಷ. ಶಾಲೆಯ ಮೆಟ್ಟಿಲುಗಳನ್ನು ತುಳಿಯಲು ಎಂದಿನಿಂದಲೋ ಕಾತರಿಸುತ್ತಿದ್ದ ಸಲಾಮ್‌ನಿಗೆ ಇದೀಗ ಅದು ಕೈಗೂಡುವ ಹರ್ಷ. ಶಾಲೆಗೆ ಬಂದೇ ಬಿಟ್ಟ ಸಲಾಮ್. ಎಂ. ಬಿ. ಎಸ್. ಮಿಡ್ಲ್ ಸ್ಕೂಲಿನ ಹೆಡ್ಮಾಸ್ಟರ್‌ರಿಂದ ಸಲಾಮ್‌ನಿಗೆ ವಿಶೇಷ ರೀತಿಯ ಸ್ವಾಗತ, ಮುದ್ದಾಟ. ಸಲಾಮ್‌ನನ್ನು ನೇರವಾಗಿ ಕ್ಲಾಸಿಗೆ ಕರೆದೊಯ್ದರವರು. ಒಂದನೇ ತರಗತಿಗಲ್ಲ, ಬದಲಾಗಿ ನಾಲ್ಕನೇ ತರಗತಿಗೆ! ಹೌದು. ತನ್ನ ಪ್ರತಿಭೆ ಮತ್ತು ಮನೆಯಲ್ಲಿನ ಕಲಿಕೆಯ ಮೂಲಕ ಅಕ್ಷರಾಭ್ಯಾಸ, ಓದು ಬರಹ ಎಲ್ಲ ಕಲಿತಿದ್ದ ಸಲಾಮ್‌ನಿಗೆ ಒಂದು, ಎರಡು ಮೂರನೇ ತರಗತಿಗಳಲ್ಲಿ ಕಲಿಯಲಿಕ್ಕೆ ಏನೂ ಉಳಿದಿರಲಿಲ್ಲ. ಆದ್ದರಿಂದಲೇ ಆತನಿಗೆ ಈ ಪ್ರಮೋಶನ್. "ಅಲ್ಲಾಹನ ದಯೆ ನಿನಗಿರಲಿ. ಚೆನ್ನಾಗಿ ಅಭ್ಯಾಸ ಮಾಡು" ಎಂದು ಆಶೀರ್ವದಿಸುತ್ತಾ ಬೆನ್ನು ತಟ್ಟಿ ತರಗತಿಯಲ್ಲಿ ಕೂರಿಸಿದರು ಹೆಡ್ಮಾಸ್ಟರ್.

ಹೆಡ್ಮಾಸ್ತರತ್ತ ಕೃತಜ್ಞತೆಯ ನೋಟ ಬೀರುತ್ತಾ ಸಲಾಂ, ತನ್ನ ಮೇಲೆ ಅವರಿಟ್ಟಿರುವ ಭರವಸೆಯನ್ನು ಈಡೇರಿಸಲು ದೃಢ ಸಂಕಲ್ಪ ಮಾಡಿದಂತಿತ್ತು. ಆಸಕ್ತಿಯಿಂದ ಕಲಿತ. ಕಲಿತದ್ದನ್ನು ಗ್ರಹಿಸಿದ. ತರಗತಿಯಲ್ಲೇ ಸಲಾಮ್‌ನಿಗೆ ಮೊದಲ ಸ್ಥಾನ. ಅಧ್ಯಾಪಕರಿಗೆ ಸಮಾಧಾನ. ತಂದೆ ತಾಯಿಯರಿಗೆ ಅಭಿಮಾನ. ಸಹಪಾಠಿಗಳಿಗೆ ಆಪ್ಯಾಯಮಾನ.

## ಜ್ಞಾನ ಕೊಟ್ಟ ಉಡುಗೊರೆ

ಅಬ್ದುಸ್ಸಲಾಮನ ತಂದೆಗೆ ಇದೀಗ ಏಳು ಮಕ್ಕಳು. ಪುಟ್ಟ ಮನೆ. ಇರುವುದು ಒಂದೇ ಒಂದು ಕೊಠಡಿ. ಅಧ್ಯಯನಕ್ಕಾಗಿ ಪ್ರತ್ಯೇಕ ಕೊಠಡಿಯಿಲ್ಲ. ಸದ್ದು ಗದ್ದಲದ ವಾತಾವರಣದಲ್ಲಿ ಅಬ್ದುಲ್ ಸಲಾಮ್‌ನಿಗೆ ಕಲಿಯುವುದು ಕಷ್ಟವಾಗಿದ್ದರೂ ಸುತ್ತಲೂ ಮೌನವಿರುವಂತೆ ಮಾನಸಿಕ ವಾತಾವರಣವನ್ನು ಆತ ನಿರ್ಮಿಸಿಕೊಂಡಿದ್ದ.

ಅಬ್ದುಸ್ಸಲಾಮ್‌ನ ಶಾಲೆ ಇಲ್ಲಿಯಂಥದ್ದಲ್ಲ. ಅಲ್ಲಿ ಧಾರ್ಮಿಕ ವ್ಯಾಸಂಗಕ್ಕೂ ಅವಕಾಶವಿತ್ತು. ಇಸ್ಲಾಮಿನ ಬಾಲ ಪಾಠಗಳನ್ನೂ, ನಿಯಮ ಶಿಷ್ಟಾಚಾರಗಳನ್ನೂ ಕುರ್‌ಆನ್ ಹದೀಸ್‌ಗಳ ಸಾರವನ್ನೂ ಇಸ್ಲಾಮೀ ಚರಿತ್ರೆಗಳನ್ನೂ ಶಾಲೆಯಲ್ಲೇ ಇದ್ದ ಮದರಸದಿಂದ ಕಲಿಯುವ ಸುಯೋಗ ಅಬ್ದುಸ್ಸಲಾಮ್‌ನಿಗಿತ್ತು. ಸಂಪ್ರದಾಯಸ್ಥ, ಧರ್ಮಭಕ್ತ ಕುಟುಂಬ ಹಾಗೂ ನೈತಿಕ ಶಿಕ್ಷಣ ಇವೆರಡೂ ದೊರೆತಾಗ ಅಲ್ಲಾಹನ ಮೇಲೆ ಅಪಾರ ವಿಶ್ವಾಸ-ಭಕ್ತಿ ಅಬ್ದುಸ್ಸಲಾಮ್‌ನಿಗೆ ಇದ್ದುದು ಸಹಜವೇ ಆಗಿತ್ತು. ತನ್ನ ಪ್ರತಿಯೊಂದು ಕಾರ್ಯದಲ್ಲಿ ಅಲ್ಲಾಹನ ಮೇಲೆ ಭರವಸೆಯಿಟ್ಟು ಮುಂದಡಿಯಿಡುತ್ತಿದ್ದ. ತನ್ನ ಯಶಸ್ಸಿಗಾಗಿ ಸದಾ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಿದ್ದ. ಬುದ್ಧಿ-ವಿದ್ಯೆಯನ್ನು ನೀಡುವ ಅಲ್ಲಾಹನಿಗೆ ಕೃತಜ್ಞತಾ ಭಾವದಲ್ಲಿ ಆರಾಧನೆ, ಪ್ರಾರ್ಥನೆ ಸಲ್ಲಿಸುತ್ತಿದ್ದ.

ಹುಸೇನರೂ ಅಷ್ಟೇ. ಮಗನ ಅಧ್ಯಯನದ ಮೇಲೆ ತೀವ್ರ ನಿಗಾ ಇಡುತ್ತಿದ್ದರು. ಕಲಿಕೆಗಾಗಿ ಪ್ರೀತಿಯಿಂದ ಹುರಿದುಂಬಿಸುತ್ತಿದ್ದರು. ತಂದೆಯು ಕುರ್‌ಆನ್ ಪಾರಾಯಣ ಮಾಡುವಾಗ ಆ ಪದಗಳ ಲಾಲಿತ್ಯ, ರಾಗದ ಮಾಧುರ್ಯತೆಯಿಂದ ಆನಂದಾನುಭೂತಿ ಹೊಂದುತ್ತಿದ್ದ.

* * * * * *

ಅಂದು ಮೆಟ್ರಿಕ್ಯುಲೇಶನ್ ಪರೀಕ್ಷೆಯ ಫಲಿತಾಂಶ. ಅಬ್ದುಸ್ಸಲಾಮ್ ಹನ್ನೆರಡನೆಯ ವಯಸ್ಸಿನಲ್ಲೇ ಪಬ್ಲಿಕ್ ಪರೀಕ್ಷೆಗೆ ಕುಳಿತಿದ್ದ. ತಂದೆಯ ಕಛೇರಿಯಲ್ಲಿ ತಂದೆ-ಮಕ್ಕಳು ಫಲಿತಾಂಶದ ವಿವರ ಬರುವುದನ್ನೇ ಕುತೂಹಲದಿಂದ ಕಾಯುತ್ತಿದ್ದಾರೆ.

"ಝಾಂಗ್ ಸ್ಟೇಷನಿಗೆ ರೈಲೇ ಬಂದಿಲ್ಲವೇನೋ?" ಅಂಚೆಗಾಗಿ ಕಾದು ಕಾದು ಸುಸ್ತಾದ ತಂದೆಯ ಉದ್ಗಾರ. ಸ್ವಲ್ಪ ಹೊತ್ತಿನಲ್ಲೇ ಆಳುವೊಬ್ಬ ಬಂದು ಫಲಿತಾಂಶದ ಹಾಳೆಯ ಕಟ್ಟನ್ನು ತಂದೆಯ ಕೈಗಿಟ್ಟ. ಕಟ್ಟು ಬಿಚ್ಚಿ ನೋಡುವಾಗ ಮೊದಲ ಹೆಸರೇ ಅಬ್ದುಸ್ಸಲಾಂ!

ಅಬ್ದುಸ್ಸಲಾಂ ಸಂತೋಷಾಧಿಕ್ಯದಿಂದ ಸೈಕಲ್ ಹತ್ತಿ ವೇಗವಾಗಿ ಸಾಗುತ್ತಿದ್ದ. ರಸ್ತೆಯ ಅಕ್ಕಪಕ್ಕದಲ್ಲಿ, ಅಂಗಡಿಗಳಲ್ಲಿ, ಅಬ್ದುಸ್ಸಲಾಮಿನದ್ದೇ ವಿಷಯ. ಹಿಂದೂ-ಮುಸ್ಲಿಮರು, ಮಿತ್ರರು ಅಬ್ದುಸ್ಸಲಾಮ್‌ನ ವಿಜಯ ವಾರ್ತೆಯನ್ನು ಕೇಳಿ ಆನಂದಿಸುತ್ತಿದ್ದಾರೆ. ಅಬ್ದುಸ್ಸಲಾಮ್‌ನಿಗೆ ಅವರಿಂದ ಅಭಿನಂದನೆಗಳ ಸುರಿಮಳೆ;

"ಕಾಂಗ್ರಾಜ್ಯುಲೇಶನ್, ಸಲಾಮ್!"

"ಅಬ್ದೂಸ್, ವೆಲ್‌ಡನ್"

"ಸನ್! ಕೀಪಿಟ್ ಅಪ್"

ಜನ-ಮಿತ್ರರ ಅಭಿಮಾನ ಕಂಡು ಅಬ್ದುಸ್ಸಲಾಮ್ ಆನಂದ ಬಾಷ್ಪ ಸುರಿಸಿದ. ಅಲ್ಲಾಹನ ಅನುಗ್ರಹವನ್ನು ಸ್ಮರಿಸಿದ.

## ಕಾಲೇಜಿನ ಮೆಟ್ಟಿಲಲ್ಲಿ!

ಅಬ್ದುಸ್ಸಲಾಮ್ ಮೆಟ್ರಿಕ್ಯುಲೇಷನ್‌ನಲ್ಲಿ ತೇರ್ಗಡೆ ಹೊಂದಿ ಪ್ರಥಮ ಸ್ಥಾನ ಪಡೆದಿದ್ದ. ಇದೀಗ ಅವನ ಗುರಿ ಉನ್ನತ ವ್ಯಾಸಂಗ. ಇದಕ್ಕಾಗಿ ತನ್ನ ಪ್ರೀತಿಯ ಊರು ಮತ್ತು ಮನೆಯನ್ನು ಬಿಡಬೇಕಾದ ಸನ್ನಿವೇಶ. ಜೊತೆಗೆ ಮಮತೆಯ ಅಪ್ಪ-ಅಮ್ಮನ ಆಶ್ರಯದಿಂದ ದೂರವಾಗಿ ಹೊಸ ಪ್ರಪಂಚವನ್ನು ಎದುರಿಸಬೇಕು. ಯಾಕೆಂದರೆ ಅವನು ಕಲಿಯಬೇಕಿದ್ದ ಸರ್ಕಾರಿ ಕಾಲೇಜು ಇದ್ದುದ್ದು ಲಾಹೋರಿನಲ್ಲಿ. ಇದು ತನ್ನ ಹುಟ್ಟೂರಾದ ಝಾಂಗ್ ಪಟ್ಟಣದಿಂದ ತುಂಬಾ ದೂರ. ವಾತಾವರಣವೂ ವಿಭಿನ್ನ. "ಆ

ಹೊಸ ಸ್ಥಳ ನನಗೆ ಒಗ್ಗುವುದೇ? ಅಲ್ಲಿ ಆತ್ಮೀಯ ಗೆಳೆಯರು ಸಿಕ್ಕಾರೆಯೇ"? ಎಂಬ ಆತಂಕದೊಂದಿಗೇ ಸಲಾಮ್ ಅಲ್ಲಾಹನ ಮೇಲೆ ಭಾರ ಹೊರಿಸಿ ಗಂಟುಮೂಟೆ ಕಟ್ಟಿ ಪ್ರಯಾಣ ಹೊರಟ.

ಹದಿನಾರು ವರ್ಷದ ತರುಣ ಅಬ್ದುಸ್ಸಲಾಮ್ ತನ್ನ ಗಂಟುಮೂಟೆಯೊಂದಿಗೆ ಕಾಲೇಜಿನ ಕಟ್ಟಡವನ್ನು ನೋಡುತ್ತಾ ನಿಂತಿದ್ದ. ಇಲ್ಲಿಯ ವಿದ್ಯಾರ್ಥಿ ಜೀವನ ಸುಲಭವಲ್ಲ. ಬಹಳ ಸಾಹಸ, ಸಹನೆ, ಎಚ್ಚರಿಕೆಯಿಂದ ಅಧ್ಯಯನ ನಿರತರಾಗಬೇಕಾದ ಅವಶ್ಯಕತೆಯಿದೆ ಎಂದು ತಿಳಿದುಕೊಂಡ.

ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಎರಡು ಬಗೆಯಲ್ಲಿ ಗುರುತಿಸಬಹುದಾಗಿತ್ತು. ಸದಾ ವಿನೋದ, ತಮಾಷೆ ಹರಟೆಯಲ್ಲೇ ಖುಷಿ ಪಡುವ ವಿದ್ಯಾರ್ಥಿಗಳು ಒಂದೆಡೆ. ಪುಸ್ತಕದಲ್ಲಿಯೇ ತಲ್ಲೀನರಾಗಿ ಆಟ-ಸಂತೋಷವರಿಯದ ವಿದ್ಯಾರ್ಥಿಗಳು ಇನ್ನೊಂದೆಡೆ. ಅಬ್ದೂಸ್‌ಗೆ ಯಾರೊಂದಿಗೆ ಸೇರಬೇಕೆಂಬ ಸಮಸ್ಯೆ.

ಈ ಮಧ್ಯೆ ಕಾಲೇಜಿನಲ್ಲಿ ಚದುರಂಗದಾಟದ ಚಟ್ಟು ಅಬ್ದುಸ್ಸಲಾಮ್‌ನಿಗೆ ಹತ್ತಿಕೊಂಡಿತ್ತು. ನಿತ್ಯವೂ ಇದೇ ಆಟ. ಕ್ರಮೇಣ ಈ ಆಟ ಒಂದು ಚಟವಾಗಿ ಬೆಳೆದು ಬಿಟ್ಟು ಅಧ್ಯಯನಕ್ಕಿಂತ ಆಟದ ಮೇಲೆಯೇ ಗಮನ ಹೆಚ್ಚಾಗತೊಡಗಿತು. ಆದರೆ ಈ ಆಟದಲ್ಲಿ ಪಡುತ್ತಿದ್ದ ಸಂತೋಷ ಅವನಿಗೆ ಬಹಳ ಕಾಲ ಉಳಿಯಲಿಲ್ಲ. ಇವನ ತಂದೆಗೆ, ಮಗ 'ಚೆಸ್'ನಲ್ಲಿ ಕಾಲ ಕಳೆಯುತ್ತಿರುವನೆಂಬ ವಿಚಾರ ಪತ್ರದ ಮೂಲಕ ಓರ್ವ ಹಿತೈಷಿಗಳು ತಿಳಿಸಿದರು; "ಹುಸೇನ್! ಅಬ್ದುಸ್ಸಲಾಮ್‌ನಿಗೆ ವಿದ್ಯಾಭ್ಯಾಸದತ್ತ ಗಮನ ಹರಿಸಲು ಹೇಳುವುದು ಉಚಿತ. ಅವನಿಗೆ ಚೆಸ್ ತಲೆಗಡರಿದಂತಿದೆ. ಓದಿನ ಕಡೆಗೆ ಗಮನವೇ ಕಡಿಮೆಯಾಗಿದೆ."

ತಂದೆ ಹುಸೇನರಿಗೆ ಇದು ಸಿಹಿ ಸುದ್ದಿಯಾಗಿರಲಿಲ್ಲ. ದಿಗ್ಭ್ರಮೆಗೊಂಡ ಅವರು ಗಂಭೀರವಾದ ಪತ್ರವೊಂದನ್ನು ಬರೆದು ಮಗನನ್ನು ಎಚ್ಚರಿಸಿದರು. ತಂದೆಯಿಂದ ಬಂದ ಬುದ್ಧಿವಾದದ ನುಡಿಗಳು, ಅವನನ್ನು ಖಿನ್ನನನ್ನಾಗಿ ಮಾಡಿತು. ಚೆಸ್ ಆಟವನ್ನು ನಿಲ್ಲಿಸಬೇಕಾಯಿತು.

## ಇಂಗ್ಲೆಂಡಿಗೆ ಪಯಣ

ಕಾಲೇಜಿನಲ್ಲಿ ಪಾಠಕ್ಕಿಂತ ಆಟಕ್ಕೇ ಹೆಚ್ಚು ಗಮನ ಕೊಡುತ್ತಿದ್ದಾನೆಂದು ತಿಳಿದ ತಂದೆಯ ಎಚ್ಚರಿಕೆಯ ಪತ್ರವನ್ನೋದಿ ಅಬ್ದುಸ್ಸಲಾಮನಿಗೆ ಆಘಾತವಾಯಿತು. "ತಾನೇನು ಓದಿನಲ್ಲಿ ಹಿಂದೆಯೇ? ನನಗೆ ಅಲ್ಪಸ್ವಲ್ಪ ಸಂತೋಷಪಡುವಷ್ಟು ಸ್ವಾತಂತ್ರ್ಯ ಇಲ್ಲವೆ?" ಎಂಬ ಯೋಚನೆ ಅವನಿಗೆ ಹೊಳೆಯಿತು. ಆದರೆ ತಂದೆಯನ್ನು ಪ್ರಶ್ನಿಸಿ, ಅವರ ಮನಸ್ಸನ್ನು ನೋಯಿಸುವ ಇಷ್ಟ ಸಲಾಮ್‌ಗಿರಲಿಲ್ಲ. ತಂದೆಯ ಮೇಲಿನ ಅಪಾರ ಮಮತೆಯಿಂದ ತುಂಬಿ ಹೋಗಿದ್ದ ಆತ ತಂದೆಯನ್ನು ಸಮಾಧಾನಿಸುವಂತಹ ಒಂದು ಪತ್ರವನ್ನು ಬರೆದ :

"ಬಾಪಾ! ನಾನು ಅಧ್ಯಯನದಲ್ಲೇ ನಿರತನಾಗಿದ್ದೇನೆ. ಚದುರಂಗದಾಟವನ್ನು ಆಡುತ್ತಿರುವುದು ನಿಜವಾಗಿದ್ದರೂ ನನ್ನ ಅಧ್ಯಯನಕ್ಕೆ ಯಾವ ಚ್ಯುತಿಯೂ ಉಂಟಾಗಿಲ್ಲ. ನನ್ನ ಬಗ್ಗೆ ಕರುಣೆಯಿರಲಿ. ನಾನು ಇದೀಗ ಶ್ರೀನಿವಾಸ ರಾಮಾನುಜರವರ 'ಶುದ್ಧ ಗಣಿತಶಾಸ್ತ್ರ' (Pure Mathematics)ನ್ನು ಅಭ್ಯಾಸ ಮಾಡುತ್ತಿರುವೆ. ಆ ವಿಷಯ ಕಠಿಣ. ಆದರೆ ಅದನ್ನೊಂದು ಸವಾಲಾಗಿ ಸ್ವೀಕರಿಸಿದ್ದೇನೆ. ನನ್ನ ಇನ್ನೊಂದು ಆಸಕ್ತಿ ಮಿರ್ಜಾ ಘಾಲಿಬ್‌ರವರ ಕವನಗಳು. ಇದನ್ನು ಕೂಡಾ ಉತ್ಸುಕತೆಯಿಂದ ಅಧ್ಯಯನ ಮಾಡುತ್ತಿರುವೆ."

ಹೀಗೆ ಅಬ್ದುಸ್ಸಲಾಮ್ ಆಟಪಾಠಗಳೊಂದಿಗೆ, ವಿಜ್ಞಾನ ಪ್ರಪಂಚವನ್ನೂ ಕವನ ಪ್ರಪಂಚವನ್ನೂ ಪ್ರೀತಿಸಿದ. ಶ್ರಮವಹಿಸಿ ಅಧ್ಯಯನ ನಡೆಸಿ ಇಲ್ಲೂ ಮೊದಲ ದರ್ಜೆಯಲ್ಲಿ ತೇರ್ಗಡೆ ಹೊಂದಿ ತಂದೆಯ ಆತಂಕವನ್ನು ಸುಳ್ಳಾಗಿಸಿದ.

ಪುತ್ರನ ಪರಿಶ್ರಮ ಮತ್ತು ಯಶಸ್ಸಿನಿಂದ ತೃಪ್ತಿ ಹೊಂದಿದ ಹುಸೇನರು ಸಲಾಮ್‌ನನ್ನು ಕರೆದು, "ಬೇಟಾ! ಖುದಾನ ಅನುಗ್ರಹದಿಂದ ಶ್ರದ್ಧೆ, ಶ್ರಮಗಳು ನಿನಗೆ ಯಶಸ್ಸು ದಯಪಾಲಿಸಿವೆ. ಇನ್ನು ನೀನು ಒಂದು ವಿಷಯದ ಕಡೆ ವಿಶೇಷ ಗಮನ ಕೊಡಬೇಕು. ಅದೇನೆಂದರೆ ಭಾರತೀಯ ಸಾರ್ವಜನಿಕ ಸೇವಾ ಪರೀಕ್ಷೆಯಲ್ಲಿ ಕುಳಿತುಕೊಳ್ಳುವುದು. ಪ್ರತಿಭಾವಂತರಿಗಾಗಿ ನಡೆಸಲಾಗುವ ಈ ಪರೀಕ್ಷೆಯಲ್ಲಿ ನಿನ್ನ ಗುರಿ ಯಶಸ್ಸು ಗಳಿಸುವುದಾಗಬೇಕು."

"ಬಾಪಾ! ನಿಮ್ಮ ಇಚ್ಛೆಯಂತೆಯೇ ಆಗಲಿ" ಎಂದು ತಲೆಯಲ್ಲಾಡಿಸಿದ. ಆದರೆ ಯಾವಾಗಲೂ ಮನುಷ್ಯನ ಲೆಕ್ಕಾಚಾರವೆಲ್ಲ ಸರಿಯಾಗಬೇಕೆಂದಿಲ್ಲ. ಕೆಲವೊಮ್ಮೆ ನಾವು ನೆನೆಯುವುದೊಂದಾದರೆ, ಅಲ್ಲಾಹನ ವಿಧಿ ಬೇರೆಯೇ ಇರುತ್ತದೆ. ಇಲ್ಲೂ ಹಾಗೇ ಆಯಿತು. 1934ರಲ್ಲಿ ಎರಡನೇ ಜಾಗತಿಕ ಮಹಾಯುದ್ಧ ಆರಂಭವಾದ ಕಾರಣ ಐ.ಸಿ.ಎಸ್. (ICS) ಪರೀಕ್ಷೆಗಳು ರದ್ದಾದವು. ಅದೇ ವೇಳೆಗೆ ಸರಿಯಾಗಿ ಸರ್ಕಾರೀ ಪ್ರಕಟನೆಯೊಂದು ಪ್ರಕಟವಾಯಿತು: "ರೈತರ ಮಕ್ಕಳಿಗೆ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ವಿದ್ಯಾರ್ಥಿ ವೇತನ ನೀಡಲಾಗುವುದು."

ಆಗ ತಾನೇ ಹುಸೈನ್ ಒಂದಲ್ಪ ಸಾಗುವಳಿ ಭೂಮಿಯನ್ನು ಕೊಂಡಿದ್ದರು. ಇದು ಅಬ್ದುಸ್ಸಲಾಮ್‌ನಿಗೆ ವರದಾನವಾಯಿತು. ಇದರಿಂದ ಆತ ಉನ್ನತ ವ್ಯಾಸಂಗಕ್ಕೆ ವಿದೇಶಕ್ಕೆ ಹೋಗುವ ಅರ್ಹತೆ ಗಳಿಸಿದ್ದ. ಈ

ಪ್ರಕಟನೆಯನ್ನು ಕಂಡಾಗ ಹುಸೇನ್ ತನ್ನ ಸಹೋದರನಿಗೆ ಕೃತಜ್ಞತೆಯಿಂದ,

"ಭಯ್ಯಾ! ನನಗಾಗಿ ನೀನು ಕೊಂಡುಕೊಟ್ಟ ಅಂಗೈ ಅಗಲ ಭೂಮಿ ಅಬ್ದುಸ್ಸಲಾಮ್‌ನನ್ನು ವಿದೇಶಕ್ಕೆ ಕಳುಹಿಸಲಿದೆ. ಉನ್ನತ ವ್ಯಾಸಂಗಕ್ಕೆ."

"ಅಲ್ ಹಮ್ದುಲಿಲ್ಲಾಹ್. ಅಲ್ಲಾಹನ ಅನುಗ್ರಹದಿಂದ ಅಬ್ದುಸ್ಸಲಾಮ್‌ನ ಭವಿಷ್ಯ ಉಜ್ವಲವಾಗಲಿ" ಎಂದು ಸಹೋದರ ಹಾರೈಸಿದರು.

ಅಣ್ಣ-ತಮ್ಮಂದಿರ ನಿರೀಕ್ಷೆ ನಿಜವಾಯಿತು. ಇಂಗ್ಲೆಂಡಿನ ಸೈಂಟ್‌ಜಾನ್ ಕಾಲೇಜಿನಲ್ಲಿ ಅಬ್ದುಸ್ಸಲಾಮನಿಗೆ ಪ್ರವೇಶಾತಿ ದೊರೆಯಿತು.

## ಸಂಶೋಧನಾ ಹಾದಿಯಲ್ಲಿ ಸಲಾಮ್

ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಹಡಗು ಹತ್ತಿದ ಸಲಾಮ್. ಹಡಗು ಇಂಗ್ಲೆಂಡಿನ ಪೋರ್ಟ್ ಲಿವರ್ ಪೂಲ್ ಬಂದರಿಗೆ ಮುಟ್ಟಿತು. 'ಪಿ ಅ್ಯಂಡ್ ಓ ಫ್ರಾಂಕೋನಿಯ' ಹಡಗಿನಿಂದ ಇಳಿದ ಅಬ್ದುಸ್ಸಲಾಮ್ ತನ್ನ ಜೀವಮಾನದಲ್ಲಿ ಎಂದೂ ಅನುಭವಿಸದ ಕೊರೆಯುವ ಚಳಿಯಿಂದ ಥರಥರ ನಡುಗುತ್ತಿದ್ದಾನೆ. ತನ್ನನ್ನು ಎದುರುಗೊಳ್ಳಲು ಕಾಯುತ್ತಿದ್ದ ತನ್ನ ತಂದೆಯ ಹಳೆಯ ಸ್ನೇಹಿತ ಮುಹಮ್ಮದ್ ಝುಫರುಲ್ಲಾ ಖಾನ್* ನಡುಗುವ ಅಬ್ದುಸ್ಸಲಾಮ್‌ನನ್ನು ಕಂಡು,

"ಈ ಇಂಗ್ಲಿಷ್ ಹವಾಕ್ಕೆ ತಯಾರಿ ಆಗಿಲ್ಲಾಂತ ಕಾಣುತ್ತೆ. ಹೂಂ....! ಈ ಓವರ್ ಕೋಟ್ ಹಾಕಿಕೋ" ಎನ್ನುತ್ತಾ ದಪ್ಪನೆಯ ಒಂದು ಕೋಟನ್ನು ಕೈಗಿತ್ತರು.

"ಶುಕ್ರಿಯಾ ಸಾರ್! ಆದರೆ ನೀವು?" ಚಳಿಯಿಂದ ತುಟಿ-ಹಲ್ಲುಗಳು ಅದುರುತ್ತಿದ್ದವು.

"ಈ ಹವಾ, ನನಗೆ ಒಗ್ಗಿ ಹೋಗಿದೆ. ಹುಂ.... ನಡೀ..... ತಾ ಇಲ್ಲಿ ಆ ಬ್ಯಾಗೇಜ್" ಎನ್ನುತ್ತಾ ಅವನ ಲಗೇಜುಗಳನ್ನು ಹಿಡಿದುಕೊಂಡು ಮುಂದೆ ನಡೆಸಿದರು.

ವಿದೇಶದ ಆತ್ಮೀಯ ಸ್ವಾಗತ, ಪ್ರೀತಿಯ ಕೊಡುಗೆಯಾಗಿ ಬಂದ ಕೋಟ್ ಅಬ್ದುಸ್ಸಲಾಮ್‌ನನ್ನು ಆನಂದಗೊಳಿಸಿತು.

ಕೇಂಬ್ರಿಡ್ಜ್ ವಿಶ್ವ ವಿದ್ಯಾಲಯವಂತೂ ಅಬ್ದುಸ್ಸಲಾಮ್‌ನನ್ನು ಮೋಡಿಗೊಳಿಸಿತು. ಅಲ್ಲಿಯ ಆಹ್ಲಾದಕರ ಪರಿಸರ, ಕಟ್ಟಡ, ಉದ್ಯಾನ ನಗರಿಗಳು, ಪ್ರಯೋಗಾಲಗಳು ವಿಶೇಷ ಪ್ರಭಾವ ಬೀರತೊಡಗಿದವು. ಅಲ್ಲಿಯ ಪ್ರತಿಯೊಂದು ಕಟ್ಟಡಕ್ಕೂ ಒಂದೊಂದು ಚರಿತ್ರೆ, ಹಿನ್ನಲೆಯಿತ್ತು. ಕಲೆಯ ಬೀಡಾಗಿತ್ತು. ಹಸಿರಾದ ಹುಲ್ಲಿನ ಲಾನ್ ಆಕರ್ಷಣೀಯವಾಗಿತ್ತು. ಪ್ರೊಫೆಸರ್ ಡಿರ್‍ಯಾಕ್‌ರ ಉಪನ್ಯಾಸಗಳಂತೂ ಅಬ್ದುಸ್ಸಲಾಮ್‌ನ ವೈಜ್ಞಾನಿಕ ಸಂವೇದನೆಯನ್ನು ಚುರುಕುಗೊಳಿಸಿತು. ಗಣಿತದ ಎಲ್ಲಾ ಪ್ರಮೇಯ, ಸಿದ್ಧಾಂತಗಳನ್ನು ಅರಗಿಸಿಕೊಂಡ ಅಬ್ದುಸ್ಸಲಾಮ್ 'ರ್‍ಯಾಂಗ್ಲರ್' ಎನಿಸಿಕೊಂಡನು. ಕೇಂಬ್ರಿಡ್ಜ್‌ನಲ್ಲಿ ಪ್ರಥಮ ಶ್ರೇಣಿಯ ಗಣಿತಜ್ಞನನ್ನು 'ರ್‍ಯಾಂಗ್ಲರ್' (Wrangler) ಎನ್ನಲಾಗುತ್ತದೆ. ಗಣಿತದೊಂದಿಗೆ ಭೌತಶಾಸ್ತ್ರದ ಅಧ್ಯಯನವನ್ನು ಕೈಗೊಂಡಿದ್ದ ಸಲಾಮ್‌ನಿಗೆ ಜ್ಞಾನವಾಹಕಗಳಾಗಿದ್ದ ಭೌತಶಾಸ್ತ್ರದ ಪ್ರಮೇಯಗಳು ತನ್ನ ಜ್ಞಾನ ಮತ್ತು ಸಂಶೋಧನೆಗೆ ನಿರ್ದಿಷ್ಟ ದಿಕ್ಕನ್ನು ತೋರಿಸಿಕೊಟ್ಟವು.

## ಭೌತಶಾಸ್ತ್ರದ ಸಂಶೋಧನೆಯಲ್ಲಿ.....

ಕೇಂಬ್ರಿಜ್‌ನಲ್ಲಿ ತಾತ್ವಿಕ ಭೌತಶಾಸ್ತ್ರವನ್ನು (Theoritical Physics) ಅಭ್ಯಸಿಸತೊಡಗಿದ ಅಬ್ದುಸ್ಸಲಾಮ್ ಡಾಲ್ಟನ್‌ನ "ಅಣುಗಳಿಂದ ವಸ್ತು ರೂಪುಗೊಂಡಿದೆ" ಎಂಬ ಸಿದ್ಧಾಂತವನ್ನು ಆಳವಾಗಿ ಅಭ್ಯಸಿಸಿದ. ವಸ್ತುವಿನಲ್ಲಿ ಅಣು ಹೇಗೆ ಸ್ಪಂದಿಸುತ್ತದೆ ಎಂಬುದು ವಿಜ್ಞಾನಿಗಳ ಮುಂದೆ ಇದ್ದ ಸವಾಲಾಗಿತ್ತು. ವಿಜ್ಞಾನದ ರಹಸ್ಯವನ್ನು ಬೇಧಿಸುತ್ತಿದ್ದಂತೆಯೇ ಸೃಷ್ಟಿಕರ್ತನಾದ ಅಲ್ಲಾಹನ ಅಪಾರ ಶಕ್ತಿ, ಸಾಮರ್ಥ್ಯದ ಬಗ್ಗೆ ಕೌತುಕವಾಗುತ್ತಿತ್ತು ಸಲಾಮ್‌ನಿಗೆ. ಅಲ್ಲಾಹನ ಸೃಷ್ಟಿ, ಸೊಬಗು, ಪ್ರಕೃತಿ ವೈಚಿತ್ರ್ಯಗಳ ಬಗ್ಗೆ ಕುರ್‌ಆನಿನಲ್ಲಿ ಅಲ್ಲಾಹು ಅಲ್ಲಲ್ಲಿ ಕೇಳುತ್ತಿರುವ ಪ್ರಶ್ನೆ "ನೀವು ಚಿಂತಿಸುತ್ತಿಲ್ಲವೇ?" "ನೀವು ದೃಷ್ಟಾಂತಗಳನ್ನು ಯೋಚಿಸುತ್ತಿಲ್ಲವೇ?" ಇತ್ಯಾದಿಗಳು ತನ್ನ ಪ್ರಾಯೋಗಿಕ ಹಂತಗಳಲ್ಲಿ ಪದೇ ಪದೇ ಜ್ಞಾಪಕ ಅವನಿಗೆ ಬರುತ್ತಿತ್ತು.

ತನ್ನ ಚಿಂತನೆಗಳನ್ನು ಪ್ರಾಯೋಗಿಕವಾಗಿ ಸಿದ್ಧಪಡಿಸಬೇಕಾಗಿ ಬಂದ ಸಲಾಮ್ ಕ್ಯಾವೆಂಡಿಷ್ ಪ್ರಯೋಗಾಲಯದಲ್ಲಿ ಪ್ರಯೋಗ ಮಾಡತೊಡಗಿದ. ಆದರೆ ಪ್ರಯೋಗಕ್ಕೆ ಬೇಕಾದ ಇಂದಿನಂತಹ ಆಧುನಿಕ ಉಪಕರಣಗಳು ಆಗ ಲಭ್ಯವಿರಲಿಲ್ಲ. ಹಳೆಯ ಉಪಕರಣಗಳಿಂದ ನಡೆಸುವ ಪ್ರಯೋಗಗಳಿಂದ ನಿಖರ ಫಲಿತಾಂಶಗಳನ್ನು ಪಡೆಯಲು ಹರಸಾಹಸ ಪಡುತ್ತಿದ್ದ. ಆದರೆ ಧ್ಯೇಯ ಸಾಧನೆಯ ಛಲವು ಆತನ ಉತ್ಸಾಹವನ್ನು ತಣಿಸಲಿಲ್ಲ. ಇಂತಹ ಶ್ರದ್ಧೆ, ಶ್ರಮದ ಸಂಶೋಧನೆಗಳ ಫಲವಾಗಿಯೇ

* ಸರ್ ಮುಹಮ್ಮದ್ ಝುಫರುಲ್ಲಾ ಖಾನ್ (1893 - 1985) ಅಗ್ರಗಣ್ಯ ಅಹ್ಮದೀ ಮುಸ್ಲಿಮರಾಗಿದ್ದರು. ಅವರು ಹೇಗ್‌ನಲ್ಲಿರುವ ಅಂತಾರಾಷ್ಟ್ರೀಯ ನ್ಯಾಯಾಲಯದ ಅಧ್ಯಕ್ಷರಾಗಿಯೂ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ 17ನೇ ಅಧಿವೇಶನದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

- ಸಂಪಾದಕ, ಯುಗರಶ್ಮಿ

1952ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾನಿಲಯವು ಸಲಾಮ್‌ನಿಗೆ ಗಣಿತ ಮತ್ತು ಭೌತಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು.

ಬಳಿಕ ಪಾಕಿಸ್ತಾನಕ್ಕೆ ಹಿಂದಿರುಗಿದ ಸಲಾಮ್ ಲಾಹೋರ್ ಸರಕಾರಿ ಕಾಲೇಜೊಂದರ ಗಣಿತಶಾಸ್ತ್ರದ ಮುಖ್ಯಸ್ಥನಾಗಿ ಸೇರಿಕೊಂಡರು. ಆದರೆ ಭೌತಶಾಸ್ತ್ರದಲ್ಲಿ ಇನ್ನಷ್ಟು ಸಂಶೋಧನೆ ಕೈಗೊಳ್ಳಬೇಕೆಂಬ ಅಮಿತ ಜ್ಞಾನದಾಹದಿಂದಾಗಿ ಪ್ರಸ್ತುತ ವೃತ್ತಿಯಿಂದ ಸಮಾಧಾನವಾಗಲಿಲ್ಲ. ಅಲ್ಲಿನ ನಿರುತ್ಸಾಹದಾಯಕ ವಾತಾವರಣವನ್ನು ಗಮನಿಸಿ ನಿರಾಸೆಯಿಂದ ತಂದೆಗೆ ಹೇಳಿದರು:

"ಬಾಪಾ! ಹೀಗೇ ಇದ್ದರೆ ನಾನು ತುಕ್ಕು ಹಿಡಿದು ಹೋಗುತ್ತೇನೆ. ಇಲ್ಲಿ ಯಾರಿಗೂ ವಿಜ್ಞಾನ, ಸಂಶೋಧನೆಗಳಲ್ಲಿ ಆಸಕ್ತಿಯಿಲ್ಲ. ವಿದ್ಯಾರ್ಥಿಗಳು ಕೇವಲ ಪಾಸಾದರೆ ದೊಡ್ಡ ಪುರುಷಾರ್ಥ ಸಾಧಿಸಿದಂತೆ ಭಾವಿಸುತ್ತಾರೆ. ಭೌತಶಾಸ್ತ್ರದ ವಿಜ್ಞಾನದ ಅದ್ಭುತ ಪ್ರಪಂಚವನ್ನು ನೋಡಿ ಆನಂದಿಸುವ ಮನೋಭಾವವೇ ಇಲ್ಲ."

ಈತನ್ಮಧ್ಯೆ ಅಬ್ದುಸ್ಸಲಾಮ್‌ನ ಅದೃಷ್ಟ ಖುಲಾಯಿಸಿತು. ಕೇಂಬ್ರಿಜ್‌ನಲ್ಲಿ ಬೋಧಕನಾಗಿ ದುಡಿಯಲು ಅಬ್ದುಸ್ಸಲಾಮ್‌ರಿಗೆ ಆಹ್ವಾನ ಬಂತು. ಹೋಗುವುದೋ ಬಿಡುವುದೋ ಎಂಬ ಯೋಚನೆಯಲ್ಲಿದ್ದ ಸಲಾಮ್‌ರಿಗೆ ತಂದೆ ಹುಸೇನರು ದಾರಿ ತೋರುತ್ತಾ,

"ಬೇಟಾ! ಬಂದ ನಸೀಬನ್ನು ಕೈ ಬಿಡಬೇಡ. ಖುದಾನ ಇಚ್ಛೆ; ಒಪ್ಪಿಕೋ. ಅಲ್ಲಾಹನ ಇಚ್ಛೆಯಿಂದ ಎಲ್ಲವೂ ಚೆನ್ನಾಗಿ ನಡೆಯುತ್ತದೆ".
"ಈ ವಯಸ್ಸಿನಲ್ಲಿ ನಿಮ್ಮೊಬ್ಬರನ್ನು ಬಿಟ್ಟು ಹೇಗೆ ಹೋಗಲಿ?"

"ಸಲಾಮ್! ಅದೆಲ್ಲ ಯೋಚಿಸಬೇಡ. ಅಲ್ಲಾಹು ನಿನಗಾಗಿಯೇ ಒಂದು ಯೋಜನೆಯನ್ನು ಸಿದ್ಧಪಡಿಸಿಟ್ಟಿರುವಾಗ ನೀನದರಂತೆ ನಡೆಯುವುದು ಮುಖ್ಯ. ಬಂದ ಅವಕಾಶವನ್ನು ಕೈ ಚೆಲ್ಲಬೇಡ"

ಅಂದು ಕಲಿಕೆಗಾಗಿ ಕೇಂಬ್ರಿಡ್‌ಗೆ ಹೊರಟು ನಿಂತ ಅಬ್ದುಸ್ಸಲಾಮ್ ಇಂದು ಅದೇ ಯೂನಿವರ್ಸಿಟಿಯಲ್ಲಿ ಬೋಧಕ ಹುದ್ದೆಯನ್ನಲಂಕರಿಸಲು ಹೊರಟು ನಿಂತರು.

## ಆಸ್ತಿಕ ವಿಜ್ಞಾನಿ

ಅಬ್ದುಸ್ಸಲಾಮ್ ಬೋಧಕ ಹುದ್ದೆಗಾಗಿ ಮತ್ತೆ ಕೇಂಬ್ರಿಜ್‌ಗೆ ಬಂದರು. ಈ ಅವಧಿಯಲ್ಲಿ ಅವರಿಗೆ ಮದುವೆಯಾಗಿ ಓರ್ವ ಪತ್ನಿ, ಪುತ್ರಿ ಇದ್ದರು. ಕುಟುಂಬ ಸಮೇತರಾಗಿ ಕೇಂಬ್ರಿಜ್‌ಗೆ ಬಂದ ಸಲಾಮ್‌ರವರು ಬೋಧಕನಾಗಿ ಖ್ಯಾತಿ ಪಡೆಯತೊಡಗಿದರು. ಬುದ್ಧಿವಂತಿಕೆಯ ಜೊತೆಗೆ ಮಾನವೀಯತೆ, ನಮ್ರತೆ, ಸರಳತೆ ಇವರ ಹುಟ್ಟುಗುಣಗಳಾಗಿದ್ದವು. ಇವೆಲ್ಲಕ್ಕಿಂತ ಮಿಗಿಲಾಗಿ ದೇವ ವಿಶ್ವಾಸ, ಭಕ್ತಿ ಅಪಾರವಾಗಿತ್ತು. ಕೇಂಬ್ರಿಜ್‌ನ ಇತರ ಸಂಶೋಧಕರು, ವಿಜ್ಞಾನಿಗಳಿಗಿಂತ ಭಿನ್ನವಾಗಿ ಇವರು ಓರ್ವ ಆಸ್ತಿಕ ವಿಜ್ಞಾನಿಯೆನಿಸಿದ್ದರು. ತನ್ನ ಪ್ರತಿಯೊಂದು ಸಂಶೋಧನೆ, ಚಿಂತನೆಗಳಲ್ಲಿ ಅಲ್ಲಾಹನ ಸೃಷ್ಟಿ ರಹಸ್ಯಗಳನ್ನು ಕಂಡುಕೊಂಡು ಪುಳಕಿತರಾಗುತ್ತಿದ್ದರು. ತನ್ನ ಈ ಎಲ್ಲಾ ಸಾಧನೆ-ಯಶಸ್ಸಿಗೆ ಅಲ್ಲಾಹನಿತ್ತ ಬುದ್ಧಿಮತ್ತೆ, ಸಾಮರ್ಥ್ಯ, ಅದೃಷ್ಟಗಳೆಂಬ ಅನುಗ್ರಹಗಳೇ ಕಾರಣವೆಂಬುದರಲ್ಲಿ ಅವರಿಗೆ ಎಳ್ಳಷ್ಟೂ ಸಂಶಯವಿರಲಿಲ್ಲ.

ಕೇಂಬ್ರಿಜ್‌ನ ಸಂಪ್ರದಾಯವೆಂದರೆ ವಿದ್ಯಾರ್ಥಿಗಳು ತಮಗೆ ಬೇಕಾದ ಅಧ್ಯಾಪಕರನ್ನು ತಾವೇ ಆರಿಸಿಕೊಳ್ಳುವುದು. ಮೂರನೇ ಎರಡರಷ್ಟು ಮಂದಿ ಸಲಾಮ್‌ರವರ ಶಿಷ್ಯತ್ವವನ್ನು ಪಡೆದು ವ್ಯಾಸಂಗ ನಿರತರಾದರು. ಸಲಾಂರವರು ಬೋಧನೆಗಳಿಂತ ಹೆಚ್ಚಾಗಿ ನಿರ್ದಿಷ್ಟ ವೈಜ್ಞಾನಿಕ ಸಿದ್ಧಾಂತ ಅಥವಾ ವಿಷಯಗಳಲ್ಲಿ ಮುಕ್ತ ಚರ್ಚೆ ಮತ್ತು ವಿಚಾರ ವಿನಿಮಯಕ್ಕೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡತೊಡಗಿದರು. ಇದರಿಂದ ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯನ್ನು ಗುರುತಿಸಿ ಬೆಳೆಸಲು ಸಾಧ್ಯವಾಯಿತು. ವಿದ್ಯಾರ್ಥಿಗಳಿಗೂ ಇದು ಹೆಚ್ಚು ಇಷ್ಟವಾಯಿತು. ವಿದ್ಯಾರ್ಥಿಗಳ ಅಭಿಪ್ರಾಯಗಳಿಗೆ ಮನ್ನಣೆ ನೀಡುತ್ತಲೇ ತನ್ನ ಅಭಿಪ್ರಾಯ-ವಿಚಾರಗಳನ್ನು ಅವರ ಮುಂದೆ ಪ್ರಸ್ತುತಪಡಿಸುತ್ತಿದ್ದರು.

ಸಲಾಮ್‌ರವರ ಕರ್ತವ್ಯ ನಿಷ್ಠೆ, ಬೋಧನಾ ಸಾಮರ್ಥ್ಯ, ಪ್ರೌಢವಿಚಾರಗಳು ಅವರ ಕೀರ್ತಿಯನ್ನು ಇನ್ನಷ್ಟು ಮೇಲಕ್ಕೊಯ್ಯಿತು.

## ಶಾಂತಿಗಾಗಿ ಅಣು ಪ್ರಶಸ್ತಿ

ವಿಜ್ಞಾನಿ ಅಬ್ದುಸ್ಸಲಾಮರು ವಿಶಾಲ ಮನೋಭಾವದ ವ್ಯಕ್ತಿಯಾಗಿದ್ದರು. ಉದಾರ ಮನಸ್ಸಿನವರಾಗಿದ್ದರು. ಸ್ವಾರ್ಥ ಎಂಬ ಪದವೇ ಅವರ ವ್ಯಕ್ತಿತ್ವಕ್ಕೆ ಅಪರಿಚಿತವಾಗಿತ್ತು. ಯಾವುದೇ ಕಲ್ಪಿತ ವಿಚಾರದಲ್ಲಾಗಲೀ, ನಿರ್ದಿಷ್ಟ ಸಂಶೋಧನೆಗಳನ್ನಾಗಲೀ ತಾನೇ ಮಾಡಿ ಹೆಸರುವಾಸಿಯಾಗಬೇಕೆಂಬ ಕನಸುಗಾರ ಅವರಾಗಿರಲಿಲ್ಲ. ಕಿರಿಯ ಸಂಶೋಧಕರ ಮುಂದೆ, ಶಿಷ್ಯರ ಮುಂದೆ ನಿರ್ದಿಷ್ಟ ವಿಷಯಗಳ ಸಂಶೋಧನಾ ಮಾರ್ಗವನ್ನು ತೆರೆದಿಡುತ್ತಿದ್ದರು. ಅವರಿಗಾಗಿ ಮಾರ್ಗದರ್ಶನ, ಸಹಾಯ, ಪ್ರೋತ್ಸಾಹವನ್ನು ಉದಾರ ಮನಸ್ಸಿನಿಂದ ಮಾಡತೊಡಗಿದರು. ಆಗಿನ ಪರಿಸ್ಥಿತಿ ಹೇಗಿತ್ತೆಂದರೆ ವಿಜ್ಞಾನ-ಸಂಶೋಧನಾ ಕ್ಷೇತ್ರಗಳಲ್ಲೂ ಸ್ವಾರ್ಥ, ಏಕಸ್ವಾಮ್ಯತೆ ವ್ಯಾಪಿಸಿಕೊಂಡಿದ್ದರಿಂದ ಹಿಂದುಳಿದ ರಾಷ್ಟ್ರಗಳ ವಿಜ್ಞಾನಿಗಳು ಸಂಶೋಧನೆ, ವಿಚಾರ ವಿನಿಮಯದ ಅವಕಾಶದಿಂದ ವಂಚಿತರಾಗುತ್ತಿದ್ದರು. ಅಂತಹವರನ್ನು ಗುರುತಿಸಿ ಪ್ರೋತ್ಸಾಹಿಸುವ ಒಂದು ಸಮಗ್ರ ಪದ್ಧತಿಯಿರಲಿಲ್ಲ. ವಿದೇಶಕ್ಕೆ ಹೋಗಿ

ಪ್ರಸಿದ್ಧ ವಿಜ್ಞಾನಿಗಳನ್ನು ಕಂಡು ಸಂಶೋಧನಾ ಕ್ಷೇತ್ರದಲ್ಲಿ ತೊಡಗುವ ಇಚ್ಛೆ ಹೊಂದಿದವರಿಗೆ ಅಪಾರ ಹಣದ ಅವಶ್ಯಕತೆಯಿರುವುದರಿಂದ ಸಾಧ್ಯವಾಗುತ್ತಿರಲಿಲ್ಲ. ಅನುಕೂಲವಂತರು ಮಾತ್ರ ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳಿ ಪರಿಣಿತರಾಗಿ ಅಲ್ಲಿಯೇ ನೆಲಸಿಬಿಡುತ್ತಿದ್ದರು. ಇದರಿಂದ ಆಯಾ ರಾಷ್ಟ್ರಕ್ಕೆ ದೊಡ್ಡ ನಷ್ಟವಿತ್ತು.

ಇದಕ್ಕೊಂದು ಪರಿಹಾರ ಕಂಡುಕೊಳ್ಳಬೇಕು. ಬಡ ಪ್ರತಿಭಾವಂತರು ಸಂಶೋಧನಾವಕಾಶದಿಂದ ವಂಚಿತರಾಗಬಾರದು. ಜಗತ್ತಿನ ಪ್ರಮುಖ ವಿಜ್ಞಾನಿಗಳೊಂದಿಗೆ ಮುಕ್ತ ವಿಚಾರ ವಿನಿಮಯ ನಡೆಸುವ ಅವಕಾಶ ವಿದ್ಯಾರ್ಥಿಗಳಿಗೆ ಲಭ್ಯವಾಗಬೇಕು. ಇದಕ್ಕಾಗಿ ಒಂದು ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಸಂಶೋಧನಾವಕಾಶವನ್ನು ಒದಗಿಸಬೇಕು.

1964ರಲ್ಲಿ ಅವರ ಈ ಕನಸು ಸಾಕ್ಷಾತ್ಕಾರಗೊಂಡಿತು. ಸಕಾಲದಲ್ಲಿ ಸಹಾಯದ ಮಹಾಪೂರವೇ ಹರಿದು ಬಂದಿತ್ತು. ಅಂತರಾಷ್ಟ್ರೀಯ ತಾತ್ವಿಕ ಭೌತಶಾಸ್ತ್ರ ಕೇಂದ್ರ [The International Centre for Theoritical Physics (ICTP)] 1964 ಅಕ್ಟೋಬರ್‌ನಲ್ಲಿ ಇಟಲಿಯ ಟ್ರೀಸ್ಟೇ ಎಂಬಲ್ಲಿ ನೀಲ ಅಡ್ರಿಯಾಟಿಕ್ ಸಮುದ್ರ ದಂಡೆಯಲ್ಲಿ ಪೈನ್ ವೃಕ್ಷಗಳಿಂದ ಆವೃತವಾದ ನಯನ ಮನೋಹರ ಪರಿಸರದಲ್ಲಿ ಸ್ಥಾಪನೆಯಾಯಿತು. ಅಬ್ದುಸ್ಸಲಾಮ್‌ರವರೇ ಇದರ ನಿರ್ದೇಶಕರಾದರು. ಈ ಸ್ಥಾಪನೆಯ ಮೂಲಕ ಸಲಾಮ್‌ರವರ ಜೀವನ ದಿಕ್ಕೇ ಬದಲಾಯಿತು. ಬಿಡವಿಲ್ಲದ ಪರಿಶ್ರಮ, ಹಿಂದುಳಿದ ರಾಷ್ಟ್ರಗಳ ಬಗ್ಗೆ ವಿಚಾರ ವಿನಿಮಯ, ನೆರವು, ಹೊಸ ಹೊಸ ವಿಷಯಗಳ ಆವಿಷ್ಕಾರಗಳ ಕೇಂದ್ರವಾಗಿ ಮಾರ್ಪಟ್ಟ ಈ ಸಂಸ್ಥೆಯಿಂದ ಅನೇಕ ರಾಷ್ಟ್ರಗಳಿಗೆ ವರದಾನವಾಯಿತು. ಅನೇಕ ಸಂಶೋಧನೆಗಳು ಹೊರ ಬಂದವು. ಬಡ ಪ್ರತಿಭಾವಂತರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಸುಲಭ ವೇದಿಕೆ ಇದಾಯಿತು.

ಸಲಾಮ್‌ರವರ ಈ ಸಾಧನೆ ಜಾಗತಿಕ ಗಮನ ಸೆಳೆಯಿತು. 1968ರಲ್ಲಿ ಇವರ ಸಂಶೋಧನೆ, ಪ್ರಬಂಧಗಳನ್ನು ಆಧರಿಸಿ "ಶಾಂತಿಗಾಗಿ ಅಣು" ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಮಗನ ಯಶಸ್ಸಿಗೆ ಹಿಗ್ಗಿದ ತಂದೆ ಹುಸೇನ್ ಪುತ್ರನಿಗೆ ಅಭಿನಂದನಾ ಪತ್ರವೊಂದು ಬರೆದು, "ಬೇಟಾ! ಶಾಂತಿಯ ಸೇವಕ (ಅಬ್ದುಸ್ಸಲಾಮ್) ಎನ್ನುವ ಅರ್ಥದ ಪದವನ್ನೇ ನಿನಗೆ ಹೆಸರಿಡಲು ನನ್ನನ್ನು ಯಾವ ಶಕ್ತಿ ಪ್ರೇರೇಪಿಸಿತು, ಹೇಳು" * ಎನ್ನುತ್ತಾ ಪುತ್ರನ ಹೆಸರಿಗೂ ದೊರೆತ ಪ್ರಶಸ್ತಿಗೂ ಎಷ್ಟೊಂದು ಹೊಂದಿಕೆ ಎಂದು ಅಭಿಮಾನಪಟ್ಟರು!

## ನೋಬೆಲ್ ಪುರಸ್ಕಾರ

ಸಂಶೋಧನೆಯ ಉತ್ತುಂಗ ಶಿಖರದಲ್ಲಿದ್ದ ಅಬ್ದುಸ್ಸಲಾಮ್ ಕೊನೆಗೂ ವಿಜ್ಞಾನ ಜಗತ್ತಿಗೇ ಅದುವರೆಗೆ ಅಪರಿಚಿತವಾದಂತಹ, ಐನ್‌ಸ್ಟೀನ್‌ನಂತಹ ವಿಜ್ಞಾನಿ ದಿಗ್ಗಜರೇ ಪ್ರಯತ್ನಿಸಿ ಸೋತಂತಹ ಅಣುವಿನಲ್ಲಿರುವ ವಿದ್ಯುತ್ಕಾಂತೀಯ ಬಲ ಮತ್ತು ದುರ್ಬಲ ಶಕ್ತಿಗಳ ನಡುವಿನ ಸಂಬಂಧ ಕುರಿತು ಪ್ರಯೋಗವನ್ನು ಮಾಡಿ ವಿಜ್ಞಾನ ಜಗತ್ತಿಗಿದ್ದ ಸಂಶಯಕ್ಕೆ ತೆರೆ ಎಳೆಯುವಲ್ಲಿ ಯಶಸ್ವಿಯಾದರು. ಅವರ ಸಂಶೋಧನೆಯ ಪೂರ್ಣಸಾರ ಅರಿಯಬೇಕಾದರೆ ಕೆಲವು ವಿಜ್ಞಾನದ ಮೂಲಭೂತ ತಿಳುವಳಿಕೆ ಅವಶ್ಯಕವಾಗಿದೆ.

ಈ ಪ್ರಪಂಚದ ಪ್ರತಿಯೊಂದು ವಸ್ತುವೂ ಪರಮಾಣುಗಳೆಂಬ ಕಣಗಳಿಂದ ಮಾಡಲ್ಪಟ್ಟಿವೆಯಷ್ಟೆ. ಪ್ರಾರಂಭದಲ್ಲಿ 'ಅಣುವನ್ನು ವಿಭಜಿಸಲಾಗದು' ಎಂಬ ನಂಬಿಕೆ ವಿಜ್ಞಾನಿಗಳಲ್ಲಿತ್ತು. ನಂತರ ಹಂತ ಹಂತವಾದ ಸಂಶೋಧನೆಗಳ ಮೂಲಕ ಪ್ರಯೋಗಗಳಲ್ಲಿ ನಾಲ್ಕು ಸೂಕ್ಷ್ಮಾಣುಗಳು ಅಥವಾ ಘಟಕಗಳ ಸಮ್ಮಿಶ್ರಣವಿರುವುದು, ಪರಮಾಣುವಿನ ಕೇಂದ್ರದಲ್ಲಿ ಪ್ರೋಟ್ರಾನ್ ಮತ್ತು ನ್ಯೂಟ್ರಾನ್ ಎಂಬ ಬೀಜಾಣುಗಳಿರುವುದು, ಇವುಗಳನ್ನು ಎಲೆಕ್ಟ್ರಾನ್ ಎಂಬ ಸಣ್ಣ ಹಗುರವಾದ ಕಣ ಸುತ್ತುವರಿದಿರುವುದೂ ತಿಳಿದು ಬಂತು.

ನಾಲ್ಕು ವಿಧ ಶಕ್ತಿಗಳಾದ ಗುರುತ್ವಾಕರ್ಷಣ ಶಕ್ತಿ, ವಿದ್ಯುತ್ಕಾಂತೀಯ ಶಕ್ತಿ, ಅಣುಶಕ್ತಿ ಮತ್ತು ನ್ಯೂಟ್ರಾನ್ ಮತ್ತು ಇಲೆಕ್ಟ್ರಾನ್ ನಡುವೆಯಿರುವ ದುರ್ಬಲ ಅಣುಶಕ್ತಿಗಳು ಪ್ರಸ್ತುತ ಹಗುರವಾದ ಕಣವನ್ನು ನಿರ್ದಿಷ್ಟ ರೀತಿಯಲ್ಲಿ ವ್ಯವಹರಿಸುವಂತೆ ಮಾಡುತ್ತದೆ. ಗುರುತ್ವಾಕರ್ಷಣಾ ಶಕ್ತಿಯು ಎಲ್ಲಾ ಕಣಗಳನ್ನು ಆಕರ್ಷಿಸುತ್ತದೆ. ಈ ಶಕ್ತಿಯ ಕಾರಣದಿಂದಲೇ ಮೇಲಕ್ಕೆಸೆದ ಚೆಂಡು ಕೆಳಗೆ ಬೀಳುತ್ತದೆ. ಈ ಬಲವೇ ಗ್ರಹ, ನಕ್ಷತ್ರ, ಆಕಾಶಗಂಗೆ ಮುಂತಾದ ಬಾಹ್ಯಾಕಾಶದ ಗ್ರಹಗಳನ್ನು ನಿಯಂತ್ರಿಸುತ್ತದೆ. ವಿದ್ಯುತ್ಕಾಂತೀಯ ಶಕ್ತಿಯು ಬೆಳಕು ನೀಡುವ ಬಲ್ಬನ್ನು ಉರಿಯುವಂತೆ

---

* ತನಗೆ ಹುಟ್ಟಿದ ಮಗುವಿಗೆ ಒಂದು ಹೆಸರನ್ನಿಡಬೇಕೆಂದು ತಂದೆ ಚೌಧುರಿ ಮುಹಮ್ಮದ್ ಹುಸೇನ್ ಸಾಹೇಬರು ಅಹ್ಮದಿಯಾ ಮುಸ್ಲಿಂ ಜಮಾಅತಿನ ಎರಡನೇ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್‌ರ ಬಳಿಗೆ ಬಂದಿದ್ದರು. ಹುಸೇನ್ ಸಾಹೇಬರು ಕಂಡಿದ್ದ ಒಂದು ಸ್ವಪ್ನದ ಆಧಾರದಲ್ಲಿ ಮಗುವಿಗೆ "ಅಬ್ದುಸ್ಸಲಾಮ್" ಎಂದೇ ನಾಮಕರಣ ಮಾಡಬೇಕೆಂದು ಹಝ್ರತ್ ಖಲೀಫರು ನಿರ್ದೇಶಿಸಿದ್ದರು.

- ಸಂಪಾದಕ, ಯುಗರಶ್ಮಿ

ಮಾಡುತ್ತದೆ. ಹಾಗೆಯೇ ಅಯಸ್ಕಾಂತವು ಕಬ್ಬಿಣದ ಪಿನ್‌ಗಳನ್ನು ಆಕರ್ಷಿಸುತ್ತದೆ. ಇದೇ ಶಕ್ತಿಯೇ ಅಣುಗಳು ಒಟ್ಟಿಗಿರಲು ಕಾರಣ. ಇದೇ ಶಕ್ತಿಯ ಕಾರಣದಿಂದಾಗಿ ವಸ್ತುಗಳು ಬಣ್ಣ, ಮೃದುತ್ವ ಮತ್ತು ಕಠಿಣ (Hardness) ಗುಣವನ್ನು ಪಡೆಯಲು ಕಾರಣವಾಗಿದೆ.

ಶಕ್ತಿಯುತವಾದ ಅಣುಶಕ್ತಿಯು ಪ್ರೋಟಾನ್ ಹಾಗೂ ನ್ಯೂಟ್ರಾನ್‌ಗಳನ್ನು ಪರಮಾಣು ಕೇಂದ್ರದಲ್ಲಿ ಬಂಧಿಸಿದೆ. ಈ ಶಕ್ತಿಯಿಂದಾಗಿ ಸೂರ್ಯ ಪ್ರಕಾಶಿಸುತ್ತದೆ. ಇದೇ ಅಣು ರಿಯಾಕ್ಟರುಗಳಿಗೆ ಶಕ್ತಿಯನ್ನು ಒದಗಿಸುತ್ತದೆ.

ಪರಮಾಣುವಿನ ಪ್ರೋಟ್ರಾನ್, ನ್ಯೂಟ್ರಾನ್, ಎಲೆಕ್ಟ್ರಾನ್ ಮತ್ತು ನ್ಯೂಟ್ರಿಯಾನ್‌ಗಳ ಜೋಡಿಗಳ ಮಧ್ಯೆ ದುರ್ಬಲವಾದ ಅಣುಶಕ್ತಿಯೊಂದು ಇದೆ. ಈ ಶಕ್ತಿಯೇ ಕೆಲವು ರೀತಿಯ ರೇಡಿಯೋ ವಿಕಿರಣಕ್ಕೆ ಕಾರಣ. ಅದರಲ್ಲಿರುವ ರಶ್ಮಿಗಳು ಒಂದು ನಿರ್ದಿಷ್ಟ ವೇಗದಲ್ಲಿ ಚಲಿಸುತ್ತಿರುತ್ತವೆ. ಕೆಲವು ಸಂದರ್ಭದಲ್ಲಿ ರೇಡಿಯೋ ಆಕ್ಟಿವ್ ಡೀಕೇ ಆದಾಗ ನ್ಯೂಟ್ರಾನ್‌ಗಳು, ಪ್ರೋಟ್ರಾನ್, ಇಲೆಕ್ಟ್ರಾನ್, ನ್ಯೂಟ್ರಿಯಾನ್‌ಗಳಾಗಿ ಪರಿವರ್ತನೆಯು ದುರ್ಬಲ ಅಣುಶಕ್ತಿಯಿಂದ ನಿಯಂತ್ರಿತವಾಗಿರುತ್ತದೆ.

ಈ ಶತಮಾನ ಕಂಡ ಅತ್ಯಂತ ಶ್ರೇಷ್ಠ ವಿಜ್ಞಾನಿ ಐನ್‌ಸ್ಟೀನ್ ಈ ಶಕ್ತಿಯನ್ನು ಒಗ್ಗೂಡಿಸಬಹುದೆಂದೂ ಅವು ಒಂದೇ ಶಕ್ತಿಯ ಮೂಲದಿಂದ ಬಂದುವೆಂದೂ ಸಾಹಸದಿಂದ ಸಿದ್ಧಪಡಿಸಲು ಮುಂದಾದರು. ಆದರೆ ಅದರಲ್ಲಿ ಅವರು ಯಶಸ್ವಿಯಾಗಿರಲಿಲ್ಲ. ಈ ಕಠಿಣ ಪರಿಶ್ರಮದ ಸಮಸ್ಯೆಯನ್ನು ಬಿಡಿಸಲು ಇತರ ವಿಜ್ಞಾನಿಗಳು ಪ್ರಯತ್ನಪಡಲಿಲ್ಲ. ಅಬ್ದುಸ್ಸಲಾಂ ಬೇರೊಂದು ಮಾರ್ಗದಿಂದ ಈ ಸಮಸ್ಯೆಯನ್ನು ಬಿಡಿಸಲು ಪ್ರಯತ್ನಿಸಿ ಯಶಸ್ವಿಯಾದರು. ಎಲೆಕ್ಟ್ರೋ ಮ್ಯಾಗ್ನಾಟಿಕ್ ಬಲವು ದುರ್ಬಲ ಅಣುಶಕ್ತಿಯೊಂದಿಗೆ ಸಂಬಂಧ ಹೊಂದಿದೆಯೆಂದು ಗಣಿತ ಶಾಸ್ತ್ರದ ಪ್ರಕಾರ ಸಾಧಿಸಿದರು. ಪ್ರಸ್ತುತ ಮಹತ್ವಪೂರ್ಣ ಸಂಶೋಧನೆಗಾಗಿಯೇ 1979ರಲ್ಲಿ ಭೌತಶಾಸ್ತ್ರದಲ್ಲಿ ಇವರಿಗೆ ಮತ್ತೋರ್ವ ಅಮೆರಿಕ ವಿಜ್ಞಾನಿ ಶೆಲ್ಡೋಡ್ ಲೀ ಗ್ಲಾ ಶೇವ್ ಜೊತೆ ಜಂಟಿಯಾಗಿ ನೋಬೆಲ್ ಪ್ರಶಸ್ತಿಯನ್ನು ನೀಡಲಾಯಿತು.*[1] ನಂತರ ವ್ಯಾಪಕ ಪ್ರಯೋಗಗಳ ಮೂಲಕ ಇದು ನಿಜವೆಂದು ಸಾಬೀತಾಯಿತು.

## ಔದಾರ್ಯಕ್ಕೊಂದು ನಿದರ್ಶನ

ಪರಮಾಣುವಿನ ವಿವಿಧ ಶಕ್ತಿಗಳನ್ನು ಒಗ್ಗೂಡಿಸುವುದು ಹೇಗೆಂಬುದನ್ನು ತಾತ್ವಿಕವಾಗಿ ಪ್ರಯತ್ನಿಸಿ ಸೋತ ಐನ್‌ಸ್ಟೀನ್ ಸಹಿತದ ವಿಜ್ಞಾನ ಜಗತ್ತಿಗೆ ಸಾಧಿಸಿ ತೋರಿಸಿದ ಕಾರಣಕ್ಕೆ ಅರ್ಹವಾಗಿಯೇ ಅಬ್ದುಸ್ಸಲಾಮರಿಗೆ ನೋಬೆಲ್ ಪ್ರಶಸ್ತಿ ಬಂದಿತ್ತು.

ಜಗತ್ತಿನಲ್ಲೇ ಅತ್ಯುನ್ನತವಾದ ಪ್ರಶಸ್ತಿಯೊಂದು ದೊರೆತಾಗ ಯಾರು ತಾನೇ ಪುಳಕಗೊಳ್ಳುವುದಿಲ್ಲ? ಅಬ್ದುಸ್ಸಲಾಮ್‌ರವರೂ ಸಹಜವಾಗಿಯೇ ರೋಮಾಂಚನಗೊಂಡರು. ಆ ಅತ್ಯಪೂರ್ವ ಕ್ಷಣಗಳಲ್ಲೂ ಅದೇ ವಿನಯ, ಅದೇ ನಮ್ರತೆ. "ಇದು ನನ್ನ ಅರ್ಹತೆಗೆ, ನನ್ನ ಪರಿಶ್ರಮ ಸಾಧನೆಗೆ ಬಂದ ಪ್ರಶಸ್ತಿ ಎಂದು ನನಗನಿಸುವುದಿಲ್ಲ. ಇದು ಆ ಪರಮಶಕ್ತನಾದ ಅಲ್ಲಾಹುವಿನ ಉಡುಗೊರೆ" ಎಂದು ಉದ್ಗರಿಸಿದ ಆ ಮೇಧಾವಿ ಪ್ರಶಸ್ತಿಯ ಸುದ್ದಿ ಸಿಕ್ಕ ಕೂಡಲೇ ಮಸ್ಜಿದ್‌ಗೆ ತೆರಳಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.*[2] ಅಲ್ಲಾಹನ ಹಿರಿಮೆಯನ್ನು ಭಕ್ತಿಪೂರ್ವಕ ಕೊಂಡಾಡಿದರು.

ನೋಬೆಲ್ ಪಾರಿತೋಷಕ ಸ್ವೀಕಾರದ ಅನರ್ಘ್ಯ ಕ್ಷಣಗಳು. ವರ್ಣ ರಂಜಿತ ಸಮಾರಂಭ. ಸ್ವೀಡನ್ನಿನ ಚಕ್ರವರ್ತಿ ಹಾಗೂ ಮಹಾರಾಣಿ ಅಬ್ದುಸ್ಸಲಾಮ್‌ರನ್ನು ಪಾರಿತೋಷಕ ಸ್ವೀಕರಿಸಲು ಆಹ್ವಾನಿಸಿದ್ದರು. ಎತ್ತರದ ಕಪ್ಪನೆಯ ಈ ಪ್ರತಿಭಾಶಾಲಿ ಆ ಕ್ಷಣದಲ್ಲೂ ತಾನು ಓರ್ವ ಅಪ್ಪಟ, ನಿಷ್ಠಾವಂತ ಮುಸ್ಲಿಮ್ ಎಂದು ತೋರಿಸಿಕೊಟ್ಟಿದ್ದರು. ಕರಿಯ 'ಅಚ್‌ಕನ್' ಧರಿಸಿದ ಅವರು ತಲೆಗೆ ಮುಸ್ಲಿಮರ ಸಾಮಾನ್ಯ ಶಿರವಸ್ತ್ರವಾದ ಟೊಪ್ಪಿಯನ್ನು ಧರಿಸಿದ್ದರು. ಮುಖವು ಗಡ್ಡ ರೋಮಗಳಿಂದ ತುಂಬಿತ್ತು.

ಪ್ರಶಸ್ತಿಯ ಸಡಗರದಲ್ಲಿಯೇ ಸಲಾಮರು ಮೈಮರೆಯಲಿಲ್ಲ. ತನ್ನ ಸಾಧನೆ, ಸ್ಫೂರ್ತಿ, ಮಾರ್ಗದರ್ಶನವಿತ್ತವರನ್ನೂ ಆ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಲು ಮರೆಯಲಿಲ್ಲ. ನಂತರ ತನಗೆ ಬಂದ ಪಾರಿತೋಷಕದ ಮೊತ್ತದಲ್ಲಿ ಒಂದಂಶವನ್ನೂ ಉಳಿಸಿಕೊಳ್ಳದೆ ಸಂಪೂರ್ಣವಾಗಿ ದಾನ ಮಾಡಿದರು. ಈ ಹಿಂದೆ ಬಂದ ಪ್ರಶಸ್ತಿಯಲ್ಲಿ ಸಾವಿರಾರು ಪೌಂಡ್‌ಗಳ ಮೊತ್ತದ ಹಣವನ್ನೂ ದಾನವಾಗಿಯೇ ನೀಡಿದ್ದರು. ಈ ಮೂಲಕ

*[1] ಪ್ರೊ। ಅಬ್ದುಸ್ಸಲಾಮ್‌ರ ಜೊತೆ ಅಮೇರಿಕದ ಇನ್ನೋರ್ವ ವಿಜ್ಞಾನಿ ಸ್ಟೀವನ್ ವೀನ್‌ಬರ್ಗ್‌ರಿಗೆ ಸಹ ಜಂಟಿಯಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

- ಸಂಪಾದಕ, ಯುಗರಶ್ಮಿ

*[2] ಅವರು ಈ ವಿಶೇಷ ಪ್ರಾರ್ಥನೆ ಸಲ್ಲಿಸಿದ್ದು ಲಂಡನಿನ ಪುಟ್ನಿಯಲ್ಲಿರುವ ಅಹ್ಮದಿಯಾ ಮಸೀದಿಯಾದ "ಫಝ್ಲ್ ಮಸ್‌ಜಿದ್"ನಲ್ಲಾಗಿತ್ತು.

- ಸಂಪಾದಕ, ಯುಗರಶ್ಮಿ

ತಾನೋರ್ವ ವಿಜ್ಞಾನಿ ಮಾತ್ರವಲ್ಲ; ಧರ್ಮನಿಷ್ಠ, ಪರಮೋದಾರಿ ಎನ್ನುವ ಸಂದೇಶವನ್ನು ಲೋಕಕ್ಕೆ ಮುಟ್ಟಿಸಿದರು.

## ಕೌತುಕಗಳ ನಿಧಿ

ಸಂಶೋಧನೆ, ನೋಬೆಲ್ ಪಾರಿತೋಷಕಗಳ ಮೂಲಕ ಖ್ಯಾತಿಯ ಉತ್ತುಂಗಕ್ಕೇರಿದ ಅಬ್ದುಸ್ಸಲಾಮ್ ತನ್ನ ಸಂಶೋಧನಾ ಕಾರ್ಯವನ್ನು ನಿಲ್ಲಿಸಲಿಲ್ಲ. "ಕೀರ್ತಿ ಮನುಷ್ಯನಿಗೆ ಕೆಲವೊಮ್ಮೆ ದುರಂತವನ್ನು ತಂದೊಡ್ಡಬಲ್ಲದು. ಈ ಕೀರ್ತಿಯಿಂದ 'ಎಲ್ಲ ಬಲ್ಲ ಸರ್ವಜ್ಞ'ನೆಂಬ ಅಹಂಕಾರವೂ ಮೂಡಬಲ್ಲುದು. ಈ ಅಹಂಕಾರದಿಂದ ಸಂದೇಹಗಳು ಬಂದರೆ 'ಇವನಿಗೇನೂ ಗೊತ್ತಿಲ್ಲ' ವೆಂಬ ಅಪಖ್ಯಾತಿ ಬರುವುದೋ ಎಂಬ ಭೀತಿಯಿಂದ ಹೊರಗೆಡವಲಾಗದೆ ಸಂದೇಹಗಳನ್ನು ಬಚ್ಚಿಡುವ ಪ್ರಯತ್ನ ನಡೆಯಬಲ್ಲದು" ಎಂಬುದರ ಬಗ್ಗೆ ಅರಿವಿದ್ದ ಆ ಮಹಾಜ್ಞಾನಿ ಅಬ್ದುಸ್ಸಲಾಮ್ ತನ್ನ ಸಂದೇಹಗಳನ್ನು ಇತರ ವಿಜ್ಞಾನಿಗಳೊಂದಿಗೆ ಮುಕ್ತವಾಗಿ ಚರ್ಚಿಸಿ ಬಗೆಹರಿಸಿಕೊಳ್ಳುತ್ತಿದ್ದರು.

ತನ್ನ ಈ ವಿಚಾರವನ್ನು ಸ್ಪಷ್ಟವಾಗಿ ಅವರು ಹೀಗೆ ಹೇಳಿದ್ದಾರೆ: "ಒಂದು ವಿಧವಾದ ನಮ್ರತೆ ವಿಜ್ಞಾನಿಗಳನ್ನು ಸತ್ಯದ ಕಡೆಗೆ ಸಾಗಿಸುತ್ತದೆ. ಹಾಗೆಯೇ ಒಂದು ವಿಧವಾದ ಕೌತುಕ ಅವರನ್ನು ಅತಿಶ್ರೇಷ್ಠ ಸ್ಥಾನದತ್ತ ಒಯ್ಯುವುದು."

ಇಟೆಲಿಯ ಅಂತರಾಷ್ಟ್ರೀಯ ತಾತ್ವಿಕ ಭೌತಶಾಸ್ತ್ರ ಕೇಂದ್ರ (ಐಸಿಟಿಪಿ)ಯ ತನ್ನ ಕಚೇರಿಯಲ್ಲಿ ವಿದ್ಯಾರ್ಥಿಗಳು ಸಲಾಮ್‌ರವರೊಂದಿಗೆ ಜಗತ್ತಿನ ಕೌತುಕ ಮತ್ತು ವೈಜ್ಞಾನಿಕ ರಹಸ್ಯಗಳ ಬಗ್ಗೆ ಚರ್ಚಿಸುತ್ತಿದ್ದಾಗ ತನ್ನ ಕಚೇರಿಯ ಗೋಡೆಯಲ್ಲಿ ತೂಗು ಹಾಕಲಾಗಿದ್ದ ಕುರ್‌ಆನ್‌ನ ಸಾಲುಗಳನ್ನು ತೋರಿಸುತ್ತಾ, ಈ ಸೃಷ್ಟಿ ಕೌತುಕಗಳನ್ನೆಲ್ಲಾ ಅಲ್ಲಾಹನು ವೃಥಾ ಸೃಷ್ಟಿಸಿಲ್ಲ. ಚಿಂತಿಸುವವರಿಗೆ ಇದರಲ್ಲಿ ಬಹಳ ದೃಷ್ಟಾಂತಗಳಿವೆ. ಅವನ ಅಪಾರ ಸೃಷ್ಟಿ ರಹಸ್ಯಗಳ ಪೈಕಿ ಒಂದಂಶವನ್ನು ಮಾತ್ರ ವಿಜ್ಞಾನ ಜಗತ್ತಿಗೆ ಭೇದಿಸಲಿಕ್ಕೆ ಸಾಧ್ಯವಾಗಿದೆ. ಸಂಶೋಧನೆಗಳ ಮೂಲಕ ಜ್ಞಾನದ ಬೆನ್ನು ಹತ್ತುವುದು ವಿಜ್ಞಾನಿಗಳ ಪ್ರಾಮಾಣಿಕ ಕರ್ತವ್ಯವಾಗಿದೆಯೆಂದು ವಿವರಿಸಿಕೊಟ್ಟರು.

"ರಹಸ್ಯಾತ್ಮಕವಾದುದರಿಂದಲೇ, ನಮಗೆ ರೋಮಾಂಚಕಾರಿ ಅನುಭವವಾಗುತ್ತದೆ ಎಂದು ಐನ್‌ಸ್ಟೀನ್‌ರವರೂ ನಂಬಿದ್ದರಲ್ಲವೇ?" ಎಂದು ಒಬ್ಬ ವಿದ್ಯಾರ್ಥಿ ಪ್ರಶ್ನಿಸಿದಾಗ,

"ಹೌದು, ನಂಬಿದ್ದರು. ಈ ಅನುಭವವೇ ನಿಜವಾದ ದಿಕ್ಕಿಗೆ ನಮ್ಮನ್ನು ಒಯ್ಯುತ್ತದೆ. ಮಿತ್ರರೇ! ಕ್ಷಮಿಸಬೇಕು. ಈಗ ನಮಾಝ್‌ನ ಸಮಯ" ಎನ್ನುತ್ತಾ ನಮಾಝ್‌ನ ಹೊತ್ತಾಗುತ್ತಿದ್ದಂತೆ ನಮಾಝ್‌ಗೆ ತೆರಳಿದರು.

ನಮಾಝ್‌ನ ನಂತರ ಚರ್ಚೆ ಮುಂದುವರೆಯಿತು. ಓರ್ವ ವಿದ್ಯಾರ್ಥಿ, "ಸಾರ್! ಧರ್ಮ ಹಾಗೂ ವಿಜ್ಞಾನ ಪರಸ್ಪರ ಒಂದಕ್ಕೊಂದು ವಿರೋಧಾಭಾಸದಿಂದ ಕೂಡಿದೆಯಲ್ಲವೇ?" ಎಂದು ಪ್ರಶ್ನಿಸಿದ.

ಆಗ ಸಲಾಮ್‌ರವರ ಉತ್ತರ ಹೀಗಿತ್ತು:

"ಇಲ್ಲ, ನಿಜವಾದ ಧರ್ಮ ವಿಜ್ಞಾನವನ್ನು ಎಂದೂ ವಿರೋಧಿಸಲಾರದು. ಸತ್ಯವಾದ ಧರ್ಮವು ಎಂದೆಂದೂ ಯಾವುದೇ ವೈಜ್ಞಾನಿಕ ಆವಿಷ್ಕಾರಗಳ ಮುಂದೆ ಶರಣಾಗದು. ವಿಜ್ಞಾನ ಸಂಶೋಧನೆಗಳಿಂದ ಅಂತಹ ಧರ್ಮದ ಪ್ರಸ್ತುತತೆ ಹೆಚ್ಚುತ್ತಾ ಹೋಗುವುದು. ನಾನೋರ್ವ ನಿಷ್ಠಾವಂತ ಮುಸ್ಲಿಮನಾಗಿದ್ದೇನೆ. ನಾನು ನನ್ನ ಜ್ಞಾನಕ್ಕೆ ಕುರ್‌ಆನಿನ ಸ್ಫೂರ್ತಿಯನ್ನು ಪಡೆದವನಾಗಿರುವೆ. ಈ ಪ್ರಪಂಚದ ರಹಸ್ಯವನ್ನು ವೈಜ್ಞಾನಿಕ ಜ್ಞಾನದ ಮೂಲಕ ತಿಳಿಯಲು, ಸತ್ಯವನ್ನು ತಿಳಿಯಲು, ಸತ್ಯವನ್ನು ಗುರುತಿಸಲು ಆ ದಿವ್ಯ ಗ್ರಂಥ ನಮ್ಮನ್ನು ಬೋಧಿಸುತ್ತದೆ. ಪರಮಾತ್ಮ ಈ ಪ್ರಪಂಚವನ್ನು ಸೃಷ್ಟಿಸಿದ್ದಾನೆ ಎನ್ನುವುದನ್ನು ಅಲ್ಲಗಳೆಯುವ ಅಂಶ ವಿಜ್ಞಾನದಲ್ಲಿ ಇಲ್ಲ."

ಅಬ್ದುಸ್ಸಲಾಮ್‌ರವರು ತನ್ನ ಸಂಶೋಧನೆಗಳನ್ನು ಪರಿಚಯಿಸುವ ಕೃತಿ The Unified electro-weak theory (ಸಂಯೋಜಿತ ದುರ್ಬಲ ವಿದ್ಯುತ್ ಸಿದ್ಧಾಂತ)ವನ್ನು ರಚಿಸಿದ್ದಾರೆ.

ಮುಂಬೈಯಲ್ಲಿರುವ ಟಾಟಾ ಸಂಶೋಧನಾಲಯಕ್ಕೆ ಸಂದರ್ಶನವಿತ್ತ ಸಂದರ್ಭದಲ್ಲೂ ಶಕ್ತಿಯುತ ಪರಮಾಣುವಿನ ಶಕ್ತಿಯು ದುರ್ಬಲ ಪರಮಾಣುವಿನ ಶಕ್ತಿ ಹಾಗೂ ಎಲೆಕ್ಟ್ರೋ ಮ್ಯಾಗ್ನಟಿಕ್ ಶಕ್ತಿಯೊಂದಿಗೆ ಸಂಯೋಜನೆಗೊಂಡಿದೆ ಎಂಬುದನ್ನು ಗಣಿತ ಶಾಸ್ತ್ರದ ಮೂಲಕ ಸಮರ್ಥವಾಗಿ ಸಂಶೋಧಿಸಿರುವುದನ್ನು ವಿವರಿಸಿದರು.

ಇಟಲಿಯ ಅಂತರಾಷ್ಟ್ರೀಯ ತಾತ್ವಿಕ ಭೌತಶಾಸ್ತ್ರ ಕೇಂದ್ರದಲ್ಲಿ ಇಳಿ ವಯಸ್ಸಿನ ಕ್ರಿಯಾಶೀಲ ಸಂಶೋಧಕರ, ಮಾನವ ಹಿತದ ಕನಸುಗಾರರೊಬ್ಬರು ಕಾರ್ಯ ನಿರತರಾಗಿದ್ದಾರೆ. ಅವರೇ ಅಬ್ದುಸ್ಸಲಾಮ್ ಎಂಬ ಖ್ಯಾತ ವಿಜ್ಞಾನಿ.

❖

# ಪ್ರೊಫೆಸರ್ ಅಬ್ದುಸ್ಸಲಾಂ - ಓರ್ವ ಉತ್ತಮ ಮುಸ್ಲಿಂ

**[ಕರಾಚಿಯ ಓರ್ವ ಪ್ರಸಿದ್ಧ ನ್ಯಾಯವಾದಿ ಸಯ್ಯಿದ್ ಮುಮ್ತಾಝ್ ಹುಸೈನ್ ಶಾಹಿ (ಸುಪ್ರೀಂ ಕೋರ್ಟ್, ಪಾಕಿಸ್ಥಾನ್) "ಡಾ। ಅಬ್ದುಸ್ಸಲಾಂ - ಜೀವಿತ ಮತ್ತು ಕರ್ಮ" ಎಂಬ ಶೀರ್ಷಿಕೆಯಲ್ಲಿ ಬರೆದ ಲೇಖನದಲ್ಲಿ, ಡಾ। ಅಬ್ದುಸ್ಸಲಾಂ ಸಾಹೇಬರು ಪಾಕಿಸ್ಥಾನದ ಅಧ್ಯಕ್ಷ ಜನರಲ್ ಝಿಯಾಉಲ್ ಹಖ್‌ರೊಡನೆ ಮಾಡಿದ ಭೇಟಿಯ ಒಂದು ಭಾಗವನ್ನು ಇಲ್ಲಿ ಅನುವಾದಿಸಿ ಕೊಡಲಾಗಿದೆ]**

ಡಾ। ಅಬ್ದುಸ್ಸಲಾಂ ಸಾಹೇಬರು, ಜನರಲ್ ಝಿಯಾಉಲ್ ಹಖ್‌ರೊಡನೆ ತಾನು ಮಾಡಿದ ಭೇಟಿಯನ್ನು ಹೀಗೆ ವಿವರಿಸುತ್ತಾರೆ:

ಪಾಕಿಸ್ಥಾನಕ್ಕೆ ಹೋಗಿ ಜನರಲ್ ಝಿಯಾರನ್ನು ಸಂದರ್ಶಿಸಬೇಕೆಂದು ಅಗತ್ಯಪಡಿಸಿಕೊಂಡು ಟ್ರೇಸ್ಟಿಗೆ ಅವರ ದೂರವಾಣಿ ಕರೆ ನನಗೆ ಹಲವು ಸಲ ಬಂದಿದ್ದರೂ ನಾನು ತಪ್ಪಿಸಿಕೊಳ್ಳುತ್ತಲೇ ಇದ್ದೆ. ಕೊನೆಗೆ ನನಗೆ ಪಾಕಿಸ್ಥಾನಕ್ಕೆ ಹೋಗಬೇಕಾಗಿ ಬಂತು. ಜನರಲ್ ಝಿಯಾರಿಗೆ ಇದು ತಿಳಿದಾಗ ನನ್ನೊಂದಿಗೆ ಒಂದು ಸಂದರ್ಶನಕ್ಕೆ ಹಠಹಿಡಿದರು. ಕೊನೆಗೆ ನಾನು ಪ್ರೆಸಿಡೆಂಟ್ ಹೌಸಿಗೆ ಹೋದೆನು. ಜನರಲ್ ಸಾಹೇಬರು ಹೊರಗೆ ಬಂದು ನನ್ನ ಕಾರಿನ ಬಾಗಿಲು ತೆಗೆದು ಆಲಿಂಗನ ಮಾಡಿದ ಬಳಿಕ ತನ್ನ ಕೋಣೆಗೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಬೇರೆ ವಿಜ್ಞಾನಿಗಳೂ ಇದ್ದರು.

ಸಂಭಾಷಣೆಯ ಮಧ್ಯೆ ನಾನು ಓರ್ಡಿನೆನ್ಸ್ (ಅಹ್ಮದಿಯಾ ವಿರುದ್ಧ ಅಧ್ಯಾದೇಶ) ಬಗ್ಗೆ ಮಾತನಾಡಿದಾಗ ಜನರಲ್ ಸಾಹೇಬ್ ನನ್ನ ಕೈಹಿಡಿದುಕೊಂಡು ಹೇಳಿದರು: "ಬನ್ನಿ, ಆಚೆಯ ಕೋಣೆಯಲ್ಲಿ ಕುಳಿತು ಮಾತನಾಡೋಣ". ನಮ್ಮೊಂದಿಗೆ ವಿಜ್ಞಾನ ಸಚಿವರು ಸಹ ಆ ಕೋಣೆಗೆ ಬಂದರು.

ಜನರಲ್ ಸಾಹೇಬ್ ಹೇಳಿದರು : "ಇಲ್ಲಿಗೆ ಆಲಿಮ್‌ಗಳ ಒಂದು ತಂಡಬಂದಿತ್ತು. ಅಹ್ಮದಿಯರು ಪವಿತ್ರ ಖುರ್‌ಆನಿನಲ್ಲಿ ತಿರುಗುಮುರುಗು ಮಾಡುತ್ತಾರೆಂದೂ ಆದ್ದರಿಂದ ಅವರು ಇಸ್ಲಾಮೀ ವೃತ್ತದಿಂದ ಹೊರಗೆ ಎಂದೂ ಅವರು ಹೇಳಿದರು."

ನಾನು : "ಪವಿತ್ರ ಖುರ್‌ಆನಿನ ಸಂರಕ್ಷಣೆಯ ಬಗ್ಗೆ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಪವಿತ್ರ ಖುರ್‌ಆನಿನ ಸಂರಕ್ಷಣೆಯ ಕರ್ತವ್ಯವನ್ನು ಅಲ್ಲಾಹನು ಸ್ವತಃ ವಹಿಸಿಕೊಂಡಿರುವಾಗ ಅದರಲ್ಲಿ ತಿರುಗುಮುರುಗು ಮಾಡಲು ಅಹ್ಮದಿಯರಿಗೆ ಹೇಗೆ ಸಾಧ್ಯವಾಗುತ್ತದೆ?"

ಜನರಲ್ ಝಿಯಾ ಎದ್ದು ಹೋಗಿ ಅಲ್ಮೇರದಿಂದ ತಫ್‌ಸೀರ್ ಸಗೀರ್ (ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರು ಪವಿತ್ರ ಖುರ್‌ಆನಿಗೆ ನೀಡಿದ ವ್ಯಾಖ್ಯಾನಾನುವಾದ) ತೆಗೆದು ತಂದು ಹೇಳಿದರು : "ನೀವು ಮಾಡಿದ ತಿರುಗು ಮುರುಗುಗಳನ್ನು ಉಲಮಾ ಇದರಲ್ಲಿ ಗುರುತು ಮಾಡಿದ್ದಾರೆ." ಗುರುತು ಮಾಡಿದ ಒಂದು ಪುಟವನ್ನು ಅವರು ನನಗೆ ತೋರಿಸಿಕೊಟ್ಟರು. ಅದು 'ಖಾತಮುನ್ನಬಿಯ್ಯೀನ್' ಎಂಬ ವಚನವಾಗಿತ್ತು. ನಾನು ಕೇಳಿದೆ : "ಇದರಲ್ಲಿ ವಚನವನ್ನು ಪೂರ್ಣವಾಗಿ ಬರೆಯಲಾಗಿದೆಯಷ್ಟೇ. ತಿರುಗುಮುರುಗು ಎಲ್ಲಿದೆ?"

ಜನರಲ್ ಝಿಯಾ: "ನೀವು ವಚನದ ಅರ್ಥದಲ್ಲಿ ತಿರುಗು ಮುರುಗು ಮಾಡಿದ್ದೀರಿ. 'ಪ್ರವಾದಿಗಳನ್ನು ಕೊನೆಗೊಳಿಸುತ್ತಾರೆ' ಎಂಬುದಕ್ಕೆ ನೀವು ಕೊಟ್ಟ ಅರ್ಥ 'ಪ್ರವಾದಿಗಳ ಮುದ್ರೆ' ಎಂದಾಗಿದೆ. ಇದು ಅಸಹನೀಯವಾಗಿದೆ."

ನಾನು ಜನರಲ್ ಸಾಹೇಬರೊಡನೆ ಹೇಳಿದೆ : "ಇದು ಪಂಜಾಬಿ ಭಾಷೆಯಲ್ಲ; ಬದಲು, ಅರಬಿ ಭಾಷೆಯ ಪದವಾಗಿದೆ. ಅರಬಿ ಭಾಷೆಯಲ್ಲಿರುವ ಅರ್ಥ 'ಮುದ್ರೆ' ಎಂದಾಗಿದೆ." ಆದರೆ ನಾನು ಆ ಬಗ್ಗೆ ತರ್ಕ ಮಾಡಲು ತೊಡಗಲಿಲ್ಲ. ನಾನು ಕೇಳಿದೆ: "ತಮ್ಮ ಬಳಿ ಬೇರೆ ಯಾರಾದರೂ ಬರೆದ ಖುರ್‌ಆನ್ ಭಾಷಾಂತರ ಇದೆಯೇ?"

ಜನರಲ್ ಝಿಯಾ ಅಲ್ಲಾಮಾ ಅಸದ್‌ರ ಭಾಷಾಂತರವನ್ನು ಕೊಟ್ಟರು. ಇದನ್ನು ಪ್ರಕಟಿಸಿದ್ದು ಪವಿತ್ರ ಮಕ್ಕದಿಂದಾಗಿದೆ.

ನಾನು ಆ ಭಾಷಾಂತರ ಗ್ರಂಥದಿಂದ 'ಖಾತಮುನ್ನಬಿಯ್ಯೀನ್' ಎಂಬ ವಚನವನ್ನು ತೆಗೆದೆನು. ಅದರಲ್ಲಿ, ಅದಕ್ಕೆ ಕೊಟ್ಟ ಅನುವಾದ 'ದಿ ಸೀಲ್ ಓಫ್ ಪ್ರೋಫೆಟ್ಸ್' (The seal of prophets) ಎಂದಾಗಿತ್ತು.

ಇದನ್ನು ಕಂಡ ಜನರಲ್ ಝಿಯಾ ಸುಮ್ಮನಾದರು. ನಾನು ಹೇಳಿದೆ: "ಅಲ್ಲಾಮ ಅಸದ್ ಅಹ್ಮದಿಯಲ್ಲ. ಈ ಖುರ್‌ಆನ್ ಭಾಷಾಂತರವನ್ನು ಪ್ರಕಟಿಸಿದ್ದು ಸೌದಿ ಸರಕಾರವಾಗಿದೆ. ನೀವು ಇವರನ್ನೂ ತಿರುವು ಮುರುವು ಮಾಡಿದ ಅಪರಾಧಿಯೆಂದು ಘೋಷಿಸುವಿರಾ?"

ಜನರಲ್ ಝಿಯಾ : "ಸೋದರಾ, ನಾನು ಹೆಚ್ಚು ತಿಳುವಳಿಕೆಯಿಲ್ಲದ ಒಬ್ಬ ಜನರಲಾಗಿದ್ದೇನೆ. ಉಲಮಾ ಹೇಳಿದ್ದನ್ನು ಅಂಗೀಕರಿಸುತ್ತೇನೆ; ಅಷ್ಟೇ".

ನಾನು : "ಜನಾಬ್, ಇದು ಬರೇ ಜನರಲ್‌ಗೆ ಸಂಬಂಧಿಸಿದ ವಿಚಾರವಲ್ಲ. ತಾವು ಈ ರಾಷ್ಟ್ರದ ಅಧ್ಯಕ್ಷರಾಗಿದ್ದೀರಿ. ಅಧ್ಯಕ್ಷರೆಂಬ ಸ್ಥಿತಿಯಲ್ಲಿ ಪಾಕಿಸ್ಥಾನದ ಎಲ್ಲ ಪ್ರಜೆಗಳ ಹಕ್ಕು ಸಂರಕ್ಷಣೆ ತಮ್ಮ ಹೊಣೆಗಾರಿಕೆಯಾಗಿದೆ. ಇಲ್ಲಿ ಇಸ್ಲಾಮಾಬಾದ್‌ನಲ್ಲಿ ಅಹ್ಮದಿಯಾ ಜಮಾಅತಿನ ಮುರಬ್ಬಿ ಇದ್ದಾರೆ; ಜಮಾಅತಿನ ಸದಸ್ಯರಿದ್ದಾರೆ. ಅಹ್ಮದಿಯಾ ವಿದ್ವಾಂಸರನ್ನು ಕರೆದು ತೃಪ್ತನಾದ ಬಳಿಕ ತೀರ್ಮಾನ ಕೈಗೊಳ್ಳಬೇಕಾದುದು ತಮ್ಮ ಕರ್ತವ್ಯವಾಗಿದೆ."

ಇದನ್ನು ಕೇಳಿದ ಜನರಲ್ ಝಿಯಾ ಉಚ್ಚ ಸ್ವರದಲ್ಲಿ ಶಹಾದತ್ ಕಲಿಮ ಹೇಳಿದರು. ಅದನ್ನು ಉಚ್ಚರಿಸಲು ನನ್ನೊಡನೆ ಸಹ ಹೇಳಿದರು. ನಾನು ಸಹ ಶಹಾದತ್ ಕಲಿಮ ಉಚ್ಚರಿಸಿದಾಗ ಝಿಯಾ ಹೇಳಿದರು: "ಸಲಾಮರೇ, ನಾನು ತಮ್ಮನ್ನು ನನಗಿಂತ ಉತ್ತಮನಾದ ಓರ್ವ ಮುಸ್ಲಿಮನೆಂದು ತಿಳಿದುಕೊಂಡಿದ್ದೇನೆ. ಆದರೆ ಏನು ಮಾಡುವುದು, ನಾನು ಉಲಮಾರ ಒತ್ತಾಯಕ್ಕೊಳಗಾಗಿದ್ದೇನೆ."

**("ಅಪ್ನಾ ಘರ್", ಪಾಕ್ಷಿಕ, ಕರಾಚಿ 1-2-1998, ಪುಟ :14; "ಬದ್ರ್" ವಾರಪತ್ರಿಕೆ, ಖಾದಿಯಾನ್ 4-3-1999)**

*ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ - 15*

# ಬದ್ರ್ ಯುದ್ಧ

ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್
ಕನ್ನಡಕ್ಕೆ : M.P.I

ಹಿಜ್‌ರತ್‌ನ ಬಳಿಕ 13ನೇ ತಿಂಗಳಲ್ಲಿ ಅಬೂಸುಫಿಯಾನ್ ನೇತೃತ್ವದ ಒಂದು ವ್ಯಾಪಾರಿ ತಂಡ ಸಿರಿಯಾದಿಂದ ಹೊರಟು ಮದೀನದ ದಾರಿಯಾಗಿ ಬರುತ್ತಿತ್ತು. ಆ ವರ್ತಕ ತಂಡಕ್ಕೆ ರಕ್ಷಣೆ ನೀಡುವ ನೆಪದಲ್ಲಿ ಮಕ್ಕದವರು ಒಂದು ಬಹುದೊಡ್ಡ ಸೇನೆಯನ್ನು ಮದೀನದ ಕಡೆಗೆ ಕೊಂಡೊಯ್ಯಲು ತೀರ್ಮಾನಿಸಿದರು. ಪೈಗಂಬರರಿಗೆ ಇದರ ಸೂಚನೆ ಲಭಿಸಿತು. ಈ ಬಗ್ಗೆ ಅಲ್ಲಾಹನಿಂದ ದಿವ್ಯವಾಣಿಯೂ ಉಂಟಾಯಿತು. ಈಗ ವಿರೋಧಿಗಳ ಆಕ್ರಮಣಗಳನ್ನು ಆಯುಧ ಬಳಸಿಕೊಂಡು ತಡೆಗಟ್ಟುವಂತೆ ಹಝ್ರತ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ)ರವರಿಗೆ ಅಲ್ಲಾಹನಿಂದ ದಿವ್ಯವಾಣಿ ಮೂಲಕ ಸಂದೇಶ ಲಭಿಸಿತು. ಹಾಗೆ ಅವರು ತನ್ನ ಕೆಲವು ಶಿಷ್ಯರೊಂದಿಗೆ ಮದೀನದಿಂದ ಹೊರಟರು. ಮದೀನದಿಂದ ಹೊರಡುವ ವೇಳೆ ತಾವು ಎದುರಿಸಬೇಕಾದುದು ವ್ಯಾಪಾರಿ ತಂಡವನ್ನೇ ಅಥವಾ ನಿಜವಾದ ಸೇನೆಯನ್ನೇ ಎಂಬ ಬಗ್ಗೆ ಅವರಿಗೆ ಸರಿಯಾದ ನಿಶ್ಚಯವಿರಲಿಲ್ಲ. ಆದುದರಿಂದ ಕೇವಲ ಮುನ್ನೂರರಷ್ಟು ಸಂಗಡಿಗರು ಮಾತ್ರ ಪೈಗಂಬರರೊಂದಿಗಿದ್ದರು.

ಆ ಕಾಲದ ವರ್ತಕ ತಂಡವೆಂದರೆ ಕೇವಲ ವ್ಯಾಪಾರ ಸಾಮಗ್ರಿಗಳನ್ನು ಒಂಟೆಗಳ ಮೇಲೆ ಹೇರಿ ಸಾಗಿಸುವುದೆಂದು ತಿಳಿಯಬಾರದು. ಇಂತಹ ತಂಡಗಳ ಜತೆ ಬಲಿಷ್ಠ ಸಿಪಾಯಿಗಳನ್ನೊಳಗೊಂಡ ಬೆಂಗಾವಲು ಪಡೆ ಸಹ ಇರುತ್ತಿತ್ತು. ಮಕ್ಕದವರಿಗೂ ಮದೀನದ ಮುಸಲ್ಮಾನರಿಗೂ ಮಧ್ಯೆ ವೈಷಮ್ಯ ಹೆಚ್ಚುತ್ತಾ ಬಂದಿದ್ದ ಕಾರಣ ವರ್ತಕ ಸಂಘಗಳೊಡನೆ ಸಾಗುವ ಈ ಬೆಂಗಾವಲು ಪಡೆಗಳನ್ನು ಮಕ್ಕದವರು ಶಸ್ತ್ರ ಸಜ್ಜಿತಗೊಳಿಸಿ ಬಲಪಡಿಸುತ್ತಿದ್ದರು. ಇದಕ್ಕೂ ಮೊದಲು ಆ ದಾರಿಯಾಗಿ ಎರಡು ವರ್ತಕ ತಂಡಗಳು ಹಾದು ಹೋದ ಬಗ್ಗೆ ಚರಿತ್ರೆಯಿಂದ ವಿವರ ಲಭಿಸುತ್ತದೆ. ಒಂದು ತಂಡದೊಂದಿಗೆ ಇನ್ನೂರು ಸೈನಿಕರೂ ಮತ್ತೊಂದರ ಜತೆ ಮುನ್ನೂರು ಸೈನಿಕರೂ ಇದ್ದರು. ಹೀಗಿರುವಾಗ, ಮಕ್ಕದಿಂದ ಹೊರಟ ನಿರಾಯುಧರಾದ ಯಾತ್ರಾ ತಂಡವನ್ನು ಆಕ್ರಮಣ ಮಾಡುವ ಉದ್ದೇಶದಿಂದ ಪೈಗಂಬರರು 300 ಮಂದಿ ಸೈನಿಕರೊಂದಿಗೆ ಮದೀನದಿಂದ ಹೊರಟಿದ್ದರೆಂಬ ಕೆಲವು ಪಾಶ್ಚಾತ್ಯ ಬರಹಗಾರರ ಹೇಳಿಕೆ ಕೇವಲ ಸುಳ್ಳು ಮತ್ತು ವಿದ್ವೇಷದಿಂದ ಕೂಡಿದ್ದಾಗಿದೆ.

ಅದೊಂದು ಬಲು ದೊಡ್ಡ ತಂಡವಾಗಿತ್ತು. ಹಿಂದಿನ ಯಾತ್ರಾ ತಂಡಗಳ ಸಂಗಡವಿದ್ದ ಭದ್ರತಾ ಸೇನೆಯ ಕುರಿತು ಪರಿಗಣಿಸಿದರೆ, ಈ ತಂಡದ ಜತೆ ನಾಲ್ಕೈದು ಶತ ಸೈನಿಕರಾದರೂ ಇರಬಹುದೆಂದು ಅನುಮಾನಿಸಬಹುದಾಗಿತ್ತು. ಈ ರೀತಿ ಸೈನಿಕ ಬೆಂಗಾವಲಿನೊಂದಿಗೆ ಸಾಗುವ ಇಷ್ಟು ದೊಡ್ಡ ಯಾತ್ರಾ ಸಂಘವನ್ನು ಎದುರಿಸಲು ಮುಸಲ್ಮಾನರ ಕೇವಲ ಮುನ್ನೂರು ಮಂದಿಯ ತಂಡವೊಂದು ಹೊರಟಾಗ ಅದನ್ನು ಆಕ್ರಮಣಕ್ಕಾಗಿ ಅಥವಾ ಕೊಳ್ಳೆ ಹೊಡೆಯಲಿಕ್ಕಾಗಿ ಎಂದು ಹೇಳುವುದು ಕೇವಲ ವಿದ್ವೇಷದ ಫಲವೂ ಮೂರ್ಖತನವೂ ಆಗಿದೆ. ಮುಸಲ್ಮಾನರಲ್ಲಿ ಸರಿಯಾದ ಯುದ್ಧ ಸಾಮಗ್ರಿಗಳು ಸಹ ಇರಲಿಲ್ಲ. ನಿಜವಾದ ಒಂದು ವರ್ತಕ ತಂಡವನ್ನು ಎದುರಿಸಲು ಮದೀನದಿಂದ ಮುನ್ನೂರು ಮಂದಿಯ ಒಂದು ಸಂಘವು ಹೊರಟಿದ್ದರೆ ಅದನ್ನು ಆತ್ಮರಕ್ಷಣೆಗಾಗಿ ಕೈಗೊಂಡ ಯುದ್ಧ ಸನ್ನಾಹವೆಂದು ಬೇಕಾದರೆ ಹೇಳಬಹುದು. ಆದರೆ, ವಾಸ್ತವದಲ್ಲಿ ಮದೀನದಿಂದ ಮುಸಲ್ಮಾನರು ಹೊರಟದ್ದು ಮಕ್ಕದವರ ಅನ್ಯಾಯದ ವರ್ತನೆಗಳನ್ನು ತಡೆಯಲಿಕ್ಕಾಗಿತ್ತು. ಮಕ್ಕದವರು ಆ ದಾರಿಯಾಗಿ ಹಾದು ಹೋಗುವಾಗ ಮದೀನದ ಸುತ್ತುಮುತ್ತಲಿನ ಗ್ರಾಮ ನಿವಾಸಿಗಳನ್ನು ಪೈಗಂಬರರ ವಿರುದ್ಧ ದಂಗೆ ಏಳುವಂತೆ ಪಿತೂರಿ ನಡೆಸುತ್ತಿದ್ದರು. ಅದನ್ನು ತಡೆಯುವ ಉದ್ದೇಶದಿಂದ ಮುಸಲ್ಮಾನರ ತಂಡ ಹೊರಟಿತ್ತು. ಪವಿತ್ರ ಖುರ್‌ಆನಿನ ವಿವರಣೆಯಿಂದ ತಿಳಿದು ಬರುವುದೇನೆಂದರೆ, ಮದೀನದ ಮುಸಲ್ಮಾನರಿಗೆ ದೊಡ್ಡದಾದೊಂದು ಶಸ್ತ್ರ ಸಜ್ಜಿತ ಸೇನೆಯೊಂದನ್ನು ಎದುರಿಸಬೇಕಾಗಿತ್ತೆಂದೂ ಆದರೆ, ಅವರ ವಿಶ್ವಾಸ ದಾರ್ಢ್ಯತೆಯನ್ನೂ ಸ್ಥಿರಚಿತ್ತತೆಯನ್ನೂ ಪ್ರಕಟಪಡಿಸುವ ಉದ್ದೇಶದಿಂದ ಈ ವಿವರ ಅವರಿಗೆ ಮೊದಲೇ ತಿಳಿಸಲಾಗಿರಲಿಲ್ಲವೆಂದೂ ಆಗಿದೆ.

ಮದೀನದಿಂದ ಹೊರಟು ಸ್ವಲ್ಪ ದೂರ ಹೋದ ಬಳಿಕ ಪೈಗಂಬರ್ (ಸ) ತನ್ನ ಸಂಗಡಿಗರಿಗೆ ಮಕ್ಕದ ಒಂದು ದೊಡ್ಡ ಸೇನೆಯನ್ನು ತಾವು ಎದುರಿಸಬೇಕೆಂಬುದೇ ದೇವರ ಇಚ್ಛೆಯಾಗಿದೆ ಎಂದು ತಿಳಿಸಿದರು. ಮಕ್ಕದಿಂದ ಲಭಿಸಿದ ಮಾಹಿತಿಯ ಪ್ರಕಾರ ಆ ವಿರೋಧಿ ಸೇನೆಯು ಒಂದು ಸಾವಿರಕ್ಕಿಂತಲೂ ಅಧಿಕ ಯೋಧರನ್ನು ಒಳಗೊಂಡಿತ್ತು. ಅಲ್ಲದೆ ಅವರೆಲ್ಲರೂ ಯುದ್ಧ ನಿಪುಣರೂ ಶಸ್ತ್ರ ಸಜ್ಜಿತರೂ ಆಗಿದ್ದರು. ಆದರೆ, ಪೈಗಂಬರರ ಸಂಗಡ ಹೊರಟವರ ಸಂಖ್ಯೆ ಕೇವಲ 313. ಅದರಲ್ಲೂ ಹೆಚ್ಚಿನವರಿಗೆ ಯುದ್ಧ ಮಾಡಿ ಅನುಭವವಿಲ್ಲ. ಯುದ್ಧ ಸಾಮಗ್ರಿಗಳ ಕೊರತೆಯೂ ಇತ್ತು. ಕೆಲವರು ಒಂಟೆಗಳ ಮೇಲೆ ಸವಾರಿ ಮಾಡುತ್ತಿದ್ದರು; ಇನ್ನು ಕೆಲವರು ಕಾಲ್ನಡೆಯಾಗಿ ಸಾಗುತ್ತಿದ್ದರು. ಕುದುರೆ ಕೇವಲ ಒಂದೆರಡು ಮಾತ್ರ. ಯುದ್ಧಮಾಡಿ ಅಷ್ಟೊಂದು ಅನುಭವವಿಲ್ಲದ ಹಾಗೂ ಸಾಕಷ್ಟು ಆಯುಧಗಳು ಸಹ ಇಲ್ಲದ ಈ ಕಿರು ಸಂಘವು, ಸಂಖ್ಯಾಬಲದಲ್ಲಿ ಅವರಿಗಿಂತಲೂ ಮೂರು ಪಟ್ಟು ಹೆಚ್ಚಿಗೆ ಬರುವ, ಯುದ್ಧ ನೈಪುಣ್ಯ ಹೊಂದಿರುವ ಆಯುಧ ಧಾರಿಗಳಾದ ಒಂದು ಬಲಿಷ್ಠ ಸೇನೆಯೊಡನೆ ಯುದ್ಧ ಮಾಡುವುದೆಂದರೆ, ಖಂಡಿತವಾಗಿಯೂ ಅದೊಂದು ಅತ್ಯಂತ ಅಪತ್ಕಾರಿ ಸಂಗತಿಯಾಗಿತ್ತು. ಆದುದರಿಂದ ಪೈಗಂಬರರು ತನ್ನ ಸಂಗಡಿಗರಲ್ಲಿ ಯಾರನ್ನು ಸಹ ಅವರ ಸ್ವಂತ ಇಚ್ಛೆಗೆ ವಿರುದ್ಧವಾಗಿ ಯುದ್ಧಮಾಡಲು

ಬಲವಂತಪಡಿಸಬಾರದೆಂದು ಬಯಸಿದರು. ಹಾಗೆ, ಪೈಗಂಬರರು ತನ್ನ ಅನುಚರರೊಡನೆ ಸಮಾಲೋಚನೆ ನಡೆಸಿದರು. ಅವರು ಹೀಗೆಂದರು : "ಈಗ ವರ್ತಕ ಸಂಘವನ್ನು ಎದುರಿಸುವ ಪ್ರಶ್ನೆಯಿಲ್ಲ. ನಾವು ಮಕ್ಕದಿಂದ ಬರುತ್ತಿರುವ ಬಲಿಷ್ಠವಾದ ಒಂದು ಸೇನೆಯೊಂದಿಗೆ ಯುದ್ಧ ಮಾಡಬೇಕಾಗಿದೆ. ಆದುದರಿಂದ ನೀವು ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ." ಇದನ್ನು ಕೇಳಿದಾಗ ಮುಹಾಜಿರ್‌ಗಳು ಈ ರೀತಿ ಉತ್ತರಿಸಿದರು: "ಅಲ್ಲಾಹನ ದೂತರೇ, ಶತ್ರುಗಳು ನಮ್ಮ ನೆಲೆಗಳ ಮೇಲೆ ಧಾಳಿ ಮಾಡಲು ಬರುತ್ತಿದ್ದಾರೆ. ಇನ್ನೂ ನಾವು ಹಿಂಜರಿಯುವುದೇ? ಖಂಡಿತವಾಗಿಯೂ ನಾವು ಅವರನ್ನು ಎದುರಿಸಲು ಸಿದ್ಧರಿದ್ದೇವೆ". ಮುಹಾಜಿರರಲ್ಲಿ ಪ್ರತಿಯೊಬ್ಬರೂ ಈ ರೀತಿ ಉತ್ತರಿಸುತ್ತಿದ್ದಾಗ್ಯೂ ಪೈಗಂಬರರು ಮತ್ತೆ ಮತ್ತೆ "ನೀವು ನನಗೆ ಸಲಹೆ ನೀಡಿರಿ, ನೀವು ನನಗೆ ಇನ್ನೂ ಸಲಹೆ ನೀಡಿರಿ" ಎಂದು ಹೇಳುತ್ತಲೇ ಇದ್ದರು. ಮದೀನದ ಮುಸಲ್ಮಾನರು (ಅನ್ಸಾರ್) ಅಷ್ಟರವರೆಗೂ ಸುಮ್ಮನಿದ್ದರು. ಯಾಕೆಂದರೆ, ತಾವು ಎದುರಿಸಬೇಕಾಗುವ ಮಕ್ಕದ ಸೇನೆಯಲ್ಲಿರುವವರು ಮುಹಾಜಿರ್‌ಗಳ ಬಂಧು ಬಳಗದವರಲ್ಲವೇ. ಅವರೊಡನೆ ಹೋರಾಡುವ ಬಗ್ಗೆ ಪ್ರಸ್ತಾಪಿಸಿದಲ್ಲಿ ತಮ್ಮ ಮುಹಾಜಿರ್ ಸಹೋದರರಿಗೆ ಮನನೋಯಬಹುದೇ ಎಂಬ ಬಗ್ಗೆ ಅವರು ಚಿಂತಿತರಾಗಿದ್ದರು. ಆದರೆ, ಪೈಗಂಬರರು ಸಲಹೆಗಾಗಿ ಮತ್ತೆ ಮತ್ತೆ ಅವಶ್ಯಪಡುತ್ತಿರುವುದನ್ನು ಕಂಡು ಅನ್ಸಾರ್‌ಗಳ ಮುಖಂಡರಲ್ಲೊಬ್ಬರು ಮುಂದೆ ಬಂದು - "ಅಲ್ಲಾಹನ ಸಂದೇಶವಾಹಕರೇ, ತಮಗೆ ಸರಿಯಾದ ಸಲಹೆ ಲಭಿಸುತ್ತಿದ್ದರೂ ತಾವು ಪುನಃ ಪುನಃ ಸಲಹೆ ಕೇಳುತ್ತಿದ್ದೀರಿ. ತಾವು ಮದೀನದವರಾದ ನಮ್ಮನ್ನುದ್ದೇಶಿಸಿ ಆ ರೀತಿ ಕೇಳುತ್ತಿರುವಿರೇ?" ಎಂದು ಕೇಳಿದರು. ಪೈಗಂಬರರು ಹೌದೆಂದು ಉತ್ತರಿಸಿದಾಗ ಆ ಅನ್ಸಾರಿ ನೇತಾರ ಈ ರೀತಿ ಹೇಳಿದರು : "ಓ ಅಲ್ಲಾಹನ ಸಂದೇಶವಾಹಕರೇ, ಬಹುಶಃ ನಾವು ಹಿಂದೆ ಮಾಡಿಕೊಂಡ ಒಂದು ಒಪ್ಪಂದದ ಕಾರಣದಿಂದಾಗಿ ತಾವು ನಮ್ಮ ಸಲಹೆ ಕೇಳುತ್ತಿರಬಹುದು. ತಾವು ಮದೀನಕ್ಕೆ ಬರುವ ಮೊದಲು ನಮ್ಮ ಮತ್ತು ನಿಮ್ಮ ಮಧ್ಯೆ ಒಂದು ಕರಾರು ಒಪ್ಪಂದ ಉಂಟಾಗಿತ್ತು. ನಿಮ್ಮ ಮೇಲೆ ಅಥವಾ ನಿಮ್ಮ ಸಂಗಡವಿರುವ ಮುಹಾಜಿರರ ಮೇಲೆ ಮದೀನದಲ್ಲಿ ಯಾರಾದರೂ ಆಕ್ರಮಣ ನಡೆಸಿದರೆ ಆಗ ನಾವು ನಿಮ್ಮ ರಕ್ಷಣೆ ಮಾಡುವೆವು ಎಂಬುದು ಆ ಕರಾರಿನ ಶರ್ತವಾಗಿತ್ತು. ಈಗ ಇಲ್ಲಿ ನಾವು ಮದೀನದಿಂದ ಹೊರಗೆ ಬಂದಿರುವ ಕಾರಣ ಬಹುಶಃ ಆ ಒಪ್ಪಂದದ ಶರ್ತಗಳು ಅನ್ವಯವಾಗದಿರಬಹುದೇ ಹಾಗೂ ನಾವು ನಿಮ್ಮ ರಕ್ಷಣೆಗೆ ಬರಲಾರೆವೇ ಎಂಬುದು ನಿಮ್ಮ ಭಾವನೆಯಾಗಿರಬಹುದು. ಅಲ್ಲಾಹನ ದೂತರೇ, ನಾವು ಆ ಒಪ್ಪಂದ ಮಾಡಿಕೊಂಡಾಗ ನಮಗೆ ತಮ್ಮ ಮಹತ್ವದ ಬಗ್ಗೆ ಪೂರ್ಣವಾದ ಜ್ಞಾನವಿರಲಿಲ್ಲ. ಆದರೆ ಈಗ ನಮಗೆ ತಮ್ಮ ಮಹೋನ್ನತವಾದ ಸ್ಥಾನಮಾನಗಳ ಬಗ್ಗೆ ಸರಿಯಾದ ತಿಳುವಳಿಕೆ ಬಂದಿರುತ್ತದೆ. ಎಲೈ ಅಲ್ಲಾಹನ ಸಂದೇಶವಾಹಕರೇ, ಈಗ ಆ ಕರಾರು ಶರ್ತಗಳ ಬಗ್ಗೆ ಯಾವುದೇ ಸಂದೇಹ ಉದ್ಭವಿಸುವುದಿಲ್ಲ. ಹಝ್ರತ್ ಮೂಸ (ಅಲೈಹಿಸ್ಸಲಾಂ)ರ ಸಂಗಡಿಗರು ಹೇಳಿದಂತೆ 'ನೀನೂ ನಿನ್ನ ಒಡೆಯನೂ ಹೋಗಿ ಯುದ್ಧ ಮಾಡಿರಿ - ನಾವಿಲ್ಲಿ ಕೂತಿರುತ್ತೇವೆ' ಎಂದು ನಿಮ್ಮೊಡನೆ ನಾವು ಖಂಡಿತವಾಗಿಯೂ ಹೇಳಲಾರೆವು. ನಾವು ನಿಮ್ಮ ಬಲ ಬದಿಯಲ್ಲೂ ಎಡ ಬದಿಯಲ್ಲೂ ನಿಂತು ಹೋರಾಡುವೆವು. ನಿಮ್ಮ ಮುಂದಿನಿಂದಲೂ ಹಿಂದಿನಿಂದಲೂ ಹೋರಾಡುವೆವು. ಪ್ರವಾದಿವರ್ಯರೇ, ನಮ್ಮ ಹೆಣಗಳನ್ನು ದಾಟಿ ಬಂದು ಹೊರತು ಶತ್ರುಗಳಿಗೆ ಖಂಡಿತವಾಗಿಯೂ ನಿಮ್ಮನ್ನು ಸಮೀಪಿಸಲು ಸಾಧ್ಯವಾಗಲಾರದು. ಅಲ್ಲಾಹನ ದೂತರೇ, ಯುದ್ಧವು ಕೇವಲ ಒಂದು ಸಾಮಾನ್ಯ ಸಂಗತಿ. ಇಲ್ಲಿಂದ ಸ್ವಲ್ಪ ದೂರದಲ್ಲಿ ವಿಶಾಲವಾದ ಸಮುದ್ರವಿದೆ. ಆ ಸಮುದ್ರಕ್ಕೆ ಹಾರಬೇಕೆಂದು ತಮ್ಮ ಆಜ್ಞೆಯಾದರೆ ಖಂಡಿತವಾಗಿಯೂ ನಾವು ಅದಕ್ಕೂ ಸಿದ್ಧರಿಸಿದ್ದೇವೆ." (ಬುಖಾರಿ, ಇಬ್ನು ಹಿಶಾಂ).

ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಅವರ ಸಂಗಡಿಗರು ತೋರಿಸಿದ ಭಕ್ತ್ಯಾದರಗಳೂ ತ್ಯಾಗಶೀಲತೆಯೂ ಇದಾಗಿತ್ತು. ಪ್ರಪಂಚದ ಇತಿಹಾಸದಲ್ಲಿ ಇಂತಹ ಬೇರೆ ಉದಾಹರಣೆ ಲಭಿಸಲಾರದು. ಮೂಸಾ ಪ್ರವಾದಿಯವರ ಸಂಗಡಿಗರ ಬಗ್ಗೆ ಮೇಲೆ ವಿವರಿಸಲಾಗಿದೆ. ಯೇಸು ಮಸೀಹಾರ ಶಿಷ್ಯರಾದರೋ, ಅತ್ಯಂತ ಆಪತ್ಕರ ಸನ್ನಿವೇಶದಲ್ಲಿ ಅವರನ್ನು ತ್ಯಜಿಸಿ ಬಿಟ್ಟ ವೃತ್ತಾಂತ ಬೈಬಲಿನ ಸುವಾರ್ತೆ (ಇಂಜೀಲ್) ನಮಗೆ ತಿಳಿಸಿಕೊಡುತ್ತದೆ. ಅವರಲ್ಲೊಬ್ಬನು ಬರೇ ಕೆಲವು ಬೆಳ್ಳಿ ನಾಣ್ಯಗಳಿಗಾಗಿ ತನ್ನ ಗುರುವನ್ನು (ಯೇಸುಕ್ರಿಸ್ತರನ್ನು) ಶತ್ರುಗಳಿಗೆ ಒಪ್ಪಿಸಿಬಿಟ್ಟನು. ಮತ್ತೊಬ್ಬ ಶಿಷ್ಯ ಅವರನ್ನು ಶತ್ರುಗಳ ಮುಂದೆ ಬಹಿರಂಗವಾಗಿ ನಿಂದಿಸಿ ಮಾತನಾಡಿದನು. ಉಳಿದ ಹತ್ತು ಮಂದಿ ಶಿಷ್ಯರು ಅವರನ್ನು ಬಿಟ್ಟು ಓಡಿ ಹೋದರು. ಆದರೆ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಅವರ ಶಿಷ್ಯರು, ಮದೀನದಲ್ಲಿ ಲಭಿಸಿದ ಕೇವಲ ಒಂದೂವರೆ ವರ್ಷದ ಶಿಕ್ಷಣ ಮತ್ತು ಸಹವಾಸದಲ್ಲಿ ಎಷ್ಟೊಂದು ಸುದೃಢ ವಿಶ್ವಾಸಿಗಳೂ ಅಚಂಚಲರೂ ಆಗಿ ಮಾರ್ಪಟ್ಟಿದ್ದರು! ಪೈಗಂಬರರು ಅವರೊಡನೆ ಸಮುದ್ರಕ್ಕೆ ನೆಗೆಯುವಂತೆ ಆಜ್ಞಾಪಿಸಿದರೂ ಸಹ ಅವರು ಅದಕ್ಕೂ ಸಿದ್ಧರಿದ್ದರು !

ಪೈಗಂಬರರು (ಸ) ತನ್ನ ಸಂಗಡಿಗರೊಡನೆ ನಡೆಸಿದ ಈ ಸಮಾಲೋಚನೆಯ ಉದ್ದೇಶ ಅವರಲ್ಲಿ ಯಾರಾದರೂ ಬಲಹೀನ ವಿಶ್ವಾಸಿಗಳಿದ್ದರೆ ಅಂಥವರಿಗೆ ಹಿಂದಿರುಗಿ ಹೋಗಲು ಅನುಮತಿ ನೀಡುವುದಾಗಿತ್ತು. ಆದರೆ ಮುಹಾಜಿರ್‌ಗಳೂ ಅನ್ಸಾರ್‌ಗಳೂ ಒಬ್ಬರನ್ನೊಬ್ಬರು ಮೀರಿಸುವ ರೀತಿಯಲ್ಲಿ ತಮ್ಮ ನಿಷ್ಠೆಯನ್ನೂ ವಿಶ್ವಾಸ ದಾರ್ಢ್ಯವನ್ನೂ ಪ್ರಕಟಪಡಿಸಿದರು. ಶತ್ರುಗಳಿಗಿಂತಲೂ ಸಂಖ್ಯಾಬಲದಲ್ಲಿ ಮೂರನೇ ಒಂದರಷ್ಟಿದ್ದೂ ಯುದ್ಧ ಸಾಮಗ್ರಿಗಳಲ್ಲಿ ಶತ್ರು ಸೇನೆಯ ಎಷ್ಟೋ ಪಟ್ಟು ಕಡಿಮೆಯಿದ್ದೂ ಸಹ ಅವರು ಸ್ಥೈರ್ಯದಿಂದ ಹೋರಾಡುವುದಾಗಿಯೂ ಬೆನ್ನು ತೋರಿಸಿ ಹಿಂದಿರುಗಲಾರೆವೆಂದೂ ಭರವಸೆ ನೀಡಿದರು. ಅಲ್ಲಾಹನ ಧರ್ಮದ ಅಭಿಮಾನ ಸಂರಕ್ಷಣೆಗಾಗಿ ತಮ್ಮ ಪ್ರಾಣಗಳನ್ನೇ ಬಲಿಯರ್ಪಿಸಲು ಅವರು ಸಂತೋಷದಿಂದ ತಯಾರಾಗಿದ್ದರು.

ತನ್ನ ಸಂಗಡಿಗರ ಭಕ್ತಿ ನಿರ್ಭರವಾದ ದೃಢವಿಶ್ವಾಸವನ್ನು ಖಾತ್ರಿ ಪಡಿಸಿದ ಬಳಿಕ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಮುಂದೆ ಸಾಗಿದರು. ಹಾಗೆ ಈ ಕಿರು ಮುಸ್ಲಿಂ ಸೇನೆ 'ಬದ್ರ್' ಎಂಬ ನದಿಯ ಸಮೀಪಕ್ಕೆ ತಲಪಿದಾಗ ತನ್ನ ಓರ್ವ ಸಂಗಡಿಗನ ಸಲಹೆಯಂತೆ ಪೈಗಂಬರರು ಎಲ್ಲರನ್ನೂ ಅಲ್ಲೇ ಬಿಡಾರ ಹೂಡುವಂತೆ ಆಜ್ಞಾಪಿಸಿದರು.

(ಮುಂದುವರಿಯುವುದು)

# ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ - 7

ಉರ್ದು ಮೂಲ : ಮಿರ್ಝಾ ಬಶೀರ್ ಅಹ್ಮದ್ ಎಂ. ಎ.
ಅನುವಾದ : ಎಂ. ಉಬೈದುಲ್ಲಾ

## ಲೌಕಾನ ಬಲ್‌ದೀ ನಬಿಯ್ಯುನ್ ಲಕಾನ ಉಮರ್

ನಮ್ಮ ವಿರೋಧಿಗಳು ಸೂಚಿಸುವ ಮೂರನೆಯ ಹದೀಸು ಇದಾಗಿದೆ:

لو كان بعدى نبى لكان عمر

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿರುವರು : "ನನ್ನ ಅನಂತರ ಪ್ರವಾದಿ ಬರುವುದು ಸಾಧ್ಯವಿರುತ್ತಿದ್ದರೆ ನಿಶ್ಚಯವಾಗಿಯೂ ಉಮರ್ ಪ್ರವಾದಿ ಆಗುತ್ತಿದ್ದರು."

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಪ್ರವಾದಿ ಆಗದ ಕಾರಣ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ನಂಬುವ್ವತಿನ ಶೃಂಖಲೆ ಸಂಪೂರ್ಣವಾಗಿ ಕೊನೆಗೊಂಡಿದೆ ಎಂದು ನಮ್ಮ ವಿರೋಧಿಗಳು ವಾದಿಸುತ್ತಾರೆ. ಆದರೆ ಈ ಬಗ್ಗೆ ಯೋಚಿಸುವುದಾದರೆ ಈ ಜನರು ಈ ಬಗ್ಗೆ ಗಾಢವಾಗಿ ಚಿಂತಿಸದುದರ ಕಾರಣದಿಂದ ಹೀಗೆ ಹೇಳುತ್ತಾರೆಂದು ತಿಳಿಯಬಹುದಾಗಿದೆ.

ನಾವು ಈ ಮೊದಲು 'ಲಾ ನಬಿಯ್ಯ ಬಲ್‌ದೀ' ಎಂಬ ಹದೀಸನ್ನು ವಿವರಿಸುವಾಗ ಬಲ್‌ದ್ ಎಂಬ ಪದಕ್ಕೆ ಇರುವ ಒಂದು ಅರ್ಥ, ಒಂದು ವಸ್ತುವನ್ನು ಬಿಟ್ಟು ಅದರ ಸ್ಥಾನದಲ್ಲಿ ಇನ್ನೊಂದನ್ನು ತೆಗೆದು ಕೊಳ್ಳುವುದು ಎಂದು ಸಹ ಇದೆ ಎಂದು ಹೇಳಿದ್ದೇವೆ. ಪವಿತ್ರ ಖುರ್‌ಆನ್‌ನಲ್ಲಿ ಈ ಅರ್ಥವನ್ನು ಕೊಡುವ ಒಂದು ವಚನ ಹೀಗಿದೆ:

فَبِأَيِّ حَدِيثٍ بَعْدَ اللَّهِ وَآيَاتِهِ يُؤْمِنُونَ.

"ಅಲ್ಲಾಹನನ್ನು ಮತ್ತು ಅವನ ವಚನಗಳನ್ನು ಬಿಟ್ಟು ಜನರು ಯಾವ ಮಾತನ್ನು ನಂಬುವರು?" (45:7)

ಬಲ್‌ದ್ ಎಂಬ ಶಬ್ದ ಈ ಅರ್ಥದಲ್ಲಿ ಸಾಮಾನ್ಯವಾಗಿ ಪ್ರಯೋಗಿಸಲ್ಪಡುತ್ತಿದ್ದು ಹೆಚ್ಚಿನ ವಿವರಣೆ ಅಗತ್ಯವಿರುವುದಿಲ್ಲ. ಪವಿತ್ರ ಖುರ್‌ಆನ್‌ನಿಂದ ಸಾಕ್ಷ್ಯಾಧಾರ ದೊರೆತಿರುವಾಗ ಬೇರೆ ಯಾವುದೇ ಸಾಕ್ಷ್ಯಾಧಾರಗಳ ಆವಶ್ಯಕತೆ ಕೂಡ ಇರುವುದಿಲ್ಲ. ಬಲ್‌ದ್ ಎಂಬ ಪದಕ್ಕೆ ಈ ಅರ್ಥ ನೀಡುವಾಗ ಮೇಲಿನ ಹದೀಸಿನ ಅರ್ಥ ಹೀಗಾಗುತ್ತದೆ : "ನಾನು ಪ್ರವಾದಿಯಾಗದಿರುತ್ತಿದ್ದರೆ ನನ್ನ ಸ್ಥಾನದಲ್ಲಿ ಉಮರ್ ಪ್ರವಾದಿಯಾಗುತ್ತಿದ್ದರು." ಇದೇ ಅರ್ಥ ಸರಿಯಾದುದಾಗಿದೆ. ಇದಕ್ಕೆ ಸಾಕ್ಷ್ಯಾಧಾರ ಸಹ ಇದೆ. ಒಂದು ಹದೀಸಿನಿಂದ ಸಂಭವಿಸಬಹುದಾದ ತಪ್ಪು ಗ್ರಹಿಕೆಯನ್ನು ಬೇರೊಂದು ಹದೀಸಿನ ಮೂಲಕ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ನಿವಾರಿಸುತ್ತಿದ್ದರು.

ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಬೇರೆ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು:

لَو لَمْ أُبْعَثْ فِيكُم لَبُعِثَ عُمَر - (ابن عدى بحواله كنوز الحقائق جلد ۲ صفحه ۱۵۱)

"ನಾನು ಪ್ರವಾದಿಯಾಗಿ ನೇಮಿಸಲ್ಪಡದಿರುತ್ತಿದ್ದರೆ ಉಮರ್ ಪ್ರವಾದಿಯಾಗಿ ನೇಮಿಸಲ್ಪಡುತ್ತಿದ್ದರು."

(ಕುನೂಝುಲ್ ಹಖಾಯಿಖ್ : ಸಂಪುಟ 2-ಪುಟ 151)

ಎರಡು ಹದೀಸುಗಳನ್ನು ಸೇರಿಸಿ ನೋಡಿರಿ. ನಿಮಗೆ ವಿಷಯ ಸ್ಪಷ್ಟವಾಗಿ ತಿಳಿಯುತ್ತದೆ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ "ಲೌಕಾನ ಬಲ್‌ದೀ ನಬಿಯ್ಯುನ್ ಲಕಾನ ಉಮರ್" ಎಂದು ಹೇಳಿದುದರ ಅರ್ಥ : "ನನ್ನನ್ನು ಬಿಟ್ಟು ಬೇರೆ ಯಾರಾದರೂ ಪ್ರವಾದಿಯಾಗುತ್ತಿದ್ದರೆ ಉಮರ್ ಪ್ರವಾದಿಯಾಗುತ್ತಿದ್ದರು" ಎಂದಾಗಿದೆ.

## ಹಝ್‌ರತ್ ಉಮರ್ ರಝಿಯಲ್ಲಾಹು ಅನ್‌ಹುರವರಲ್ಲಿ ತಶ್‌ರೀಈ ನುಬುವ್ವತಿನ ಸತ್ವವಿತ್ತು

ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಹಝ್‌ರತ್ ಉಮರ್ ರಝಿಯಲ್ಲಾಹು ಅನ್‌ಹುರವರ ಕುರಿತು ಹೇಳಿದ ಮಾತು ಅರ್ಥಪೂರ್ಣವಾಗಿತ್ತು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಶರೀಅತ್ ಹೊಂದಿದ ಪ್ರವಾದಿಯಾಗಿದ್ದರು. ಅವರು ಹೊಸದಾದೊಂದು ದೇವ ನಿಯಮ ಸಂಹಿತೆ ತಂದಿದ್ದರು. ಚರಿತ್ರೆ ಮತ್ತು ಹದೀಸಿನಿಂದ ತಿಳಿಯುವುದೇನೆಂದರೆ ಹಝ್‌ರತ್ ಉಮರ್ ರಝಿಯಲ್ಲಾಹು ಅನ್‌ಹುರವರಲ್ಲಿ ಕಾನೂನು ಕಾಯಿದೆಗಳ ನಿರ್ಮಾಣದ ಪರಿಣತಿ ಅಸಾಧಾರಣವಾಗಿ ಹೆಚ್ಚಿನ ಮಟ್ಟದಲ್ಲಿ ಇದ್ದಿತು. ಹಝ್‌ರತ್ ಉಮರ್ ರಝಿಯಲ್ಲಾಹು ಅನ್‌ಹುರವರ ಖಿಲಾಫತ್ ಕಾಲ ಮಾತ್ರವಲ್ಲ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಜೀವಿತದ ಕಾಲದಲ್ಲಿನ ಹಝ್‌ರತ್ ಉಮರ್ (ರ.ಅ.) ರವರ ಜೀವಿತ ಚರಿತ್ರೆ ಸಹ ಅವರು ಅತ್ಯಂತ ಶ್ರೇಷ್ಠ ಮಟ್ಟದ ಕಾನೂನು ಕಾಯಿದೆಗಳ ನಿರ್ಮಾಪಕರಾಗಿದ್ದರೆಂಬುದನ್ನು ಸಾಬೀತುಗೊಳಿಸುತ್ತದೆ. ಕಾನೂನು ಕಾಯಿದೆಗಳ ನಿರ್ಮಾಣದ ನೈಪುಣ್ಯ ಅವರಲ್ಲಿ ತುಂಬಾ ಇದ್ದಿತು. ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಅನೇಕ ಬಾರಿ ಹೀಗೆ ಸಂಭವಿಸಿತು: ಒಂದು ವಿಷಯದ ಕುರಿತು ಹಝ್‌ರತ್ ಉಮರ್ (ರ.ಅ) ಸಲಹೆ ಇತ್ತರು. ಇತರ ಸಹಾಬಿಗಳು ಬೇರೊಂದು ರೀತಿಯಲ್ಲಿ ಸಲಹೆ ಇತ್ತರು. ಅನಂತರ

ಹಝ್ರತ್ ಉಮರ್ (ರ.ಅ) ರವರ ಸಲಹೆಗೆ ಅನುಸಾರವಾಗಿಯೇ ದೇವವಾಣಿ ಅವತೀರ್ಣಗೊಂಡಿತು. (ಬುಖಾರಿ, ಮುಸ್ಲಿಮ್, ಝುರ್‌ಖಾನಿ ಮೊದಲಾದ ಗ್ರಂಥಗಳನ್ನು ನೋಡಿರಿ). ಆದುದರಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ "ನನ್ನ ಸ್ಥಾನದಲ್ಲಿ ಬೇರೆ ಯಾರಾದರೂ ನಬಿಯಾಗಬಹುದಾಗಿದ್ದರೆ ಉಮರ್ ನಬಿಯಾಗುತ್ತಿದ್ದರು" ಎಂದು ಹೇಳಿದುದರಲ್ಲಿ ಹಝ್ರತ್ ಉಮರ್ (ರ. ಅ.)ರವರ ವಿಶಿಷ್ಟ ನೈಪುಣ್ಯದ ಬಗ್ಗೆ ಸೂಚನೆ ಇದ್ದಿತು. "ಈ ಕಾಲದಲ್ಲಿ ಹೊಸ ಶರೀಅತ್ ನಿಯಮಗಳ ಆವಶ್ಯಕತೆ ಇರುವುದರಿಂದ ನಾನು ನೇಮಿಸಲ್ಪಡದಿರುತ್ತಿದ್ದರೆ ಉಮರ್ ಪ್ರವಾದಿಯಾಗಿ ನೇಮಿಸಲ್ಪಡುತ್ತಿದ್ದರು" ಎಂದು ಈ ಹದೀಸಿನಲ್ಲಿ ಸೂಚಿಸಲಾಗಿದೆ. ಹಝ್ರತ್ ಉಮರ್ (ರ.ಅ) ರವರಲ್ಲಿ ಕಾನೂನು ಕಾಯಿದೆಗಳ ನಿರ್ಮಾಣದ ಎಂತಹ ನೈಪುಣ್ಯ ಇದ್ದಿತೆಂದರೆ ಯುರೋಪಿನ ದೊಡ್ಡ ದೊಡ್ಡ ಚರಿತ್ರೆಗಾರರು ಅವರ ಕಾರ್ಯ ನಿರ್ವಹಣೆಯ ಕುರಿತು ಆಶ್ಚರ್ಯ ಸೂಚಿಸಿರುವರು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು "ನಾನು ಪ್ರವಾದಿಯಾಗಿ ನೇಮಿಸಲ್ಪಡದೆ ಇರುತ್ತಿದ್ದರೆ ಉಮರ್ ಪ್ರವಾದಿಯಾಗಿ ನೇಮಿಲ್ಪಡುತ್ತಿದ್ದರು." ಎಂದು ಹೇಳಿದ ಹದೀಸು ಈ ಬಗ್ಗೆ ಸ್ಪಷ್ಟಪಡಿಸುತ್ತದೆ. ಅಲ್ಲದೆ, ಹಝ್ರತ್ ಉಮರ್ (ರ.ಅ.) ರವರ ಜೀವಿತವು ಸಹ ಈ ಬಗ್ಗೆ ವಿಶದೀಕರಿಸುತ್ತದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಈ ಹದೀಸುಗಳ ಮೂಲಕ ಸೂಚಿಸಿದುದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರಿಗೆ ನಿಯಮಗಳ ನಿರ್ಮಾಣದ ಕುರಿತು ಇದ್ದ ನೈಪುಣ್ಯದ ಕುರಿತಾಗಿತ್ತು. ಅವರು ಈ ವಿಷಯದಲ್ಲಿ ಇತರ ಸಹಾಬಿಗಳಿಗಿಂತ ವಿಶಿಷ್ಟವಾದ ಸ್ಥಾನ ಪಡೆದಿದ್ದರು.

## ಸಹಾಬಿಗಳಲ್ಲಿ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಪದವಿ ಎಲ್ಲರಿಗಿಂತ ಶ್ರೇಷ್ಠವಾಗಿತ್ತು

ನಾವು ಮೇಲೆ ಬರೆದ ವಿವರಣೆಗೆ ಇನ್ನೊಂದು ಸಾಕ್ಷ್ಯಾಧಾರ ಇದಾಗಿದೆ: ಸಾಧಾರಣ ಸ್ವಭಾವಗುಣಗಳಿಗೆ ಸಂಬಂಧಿಸಿ ಹೇಳುವುದಾದರೆ ಸಹಾಬಿಗಳಲ್ಲಿ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಸ್ಥಾನ ಅತ್ಯಂತ ದೊಡ್ಡದೆಂದು ಒಮ್ಮತದಿಂದ ಅಂಗೀಕರಿಸಲಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಹ ಹೀಗೆಯೇ ಹೇಳಿರುವರು. ಅವರು ಸಹಾಬಿಗಳಲ್ಲಿ ಅತ್ಯಂತ ಶ್ರೇಷ್ಠರಾಗಿದ್ದರೆಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿದ ಹದೀಸನ್ನು ಇದರ ಮೊದಲು ಉಲ್ಲೇಖಿಸಲಾಗಿದೆ. "ನನ್ನ ಸಮುದಾಯದಲ್ಲಿ ನಬಿಯಾಗುವವರ ಹೊರತು ಉಳಿದ ಎಲ್ಲರಿಗಿಂತಲೂ ಹಝ್ರತ್ ಅಬೂಬಕರ್ ಶ್ರೇಷ್ಠರು" ಎಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿದ್ದರು. ಹೀಗಿದ್ದರೂ ಅವರನ್ನು ಬಿಟ್ಟು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಕುರಿತು "ನಾನು ನಬಿಯಾಗದಿರುತ್ತಿದ್ದರೆ ಉಮರ್ ನಬಿಯಾಗುತ್ತಿದ್ದರು" ಎಂದು ಹೇಳಿರುವುದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರಿಗೆ ನಿಯಮ ನಿರ್ಮಾಣದ ಕುರಿತು ಇದ್ದ ಅಸಾಧಾರಣ ನೈಪುಣ್ಯದ ಕಾರಣದಿಂದಾಗಿದೆ. ಅವರು ಭಾಗಶಃ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರಿಗಿಂತ ಉತ್ತಮ ಸ್ಥಾನದಲ್ಲಿದ್ದರು. ಇದು ಅವರಿಗೆ ನಿಯಮ ನಿರ್ಮಾಣದಲ್ಲಿದ್ದ ನೈಪುಣ್ಯದ ವಲಯದಲ್ಲಾಗಿತ್ತು. ಅವರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಾಲ್ಲಾಹು ಅಲೈಹಿ ವ ಸಲ್ಲಮರ ಕಾಲದಲ್ಲಿ ಆ ಬಗ್ಗೆ ತನ್ನ ನೈಪುಣ್ಯವನ್ನು ತೋರಿಸಿದ್ದರು. ಅವರ ಖಿಲಾಫತ್ ಕಾಲದಲ್ಲಿ ಈ ನೈಪುಣ್ಯ ಇನ್ನಷ್ಟು ಸ್ಪಷ್ಟವಾಗಿ ಬಹಿರಂಗಗೊಂಡಿದ್ದಿತು.

ಈ ಹದೀಸನ್ನು ಹೇಗೆ ವಿಶ್ಲೇಷಿಸಿದರೂ ತಿಳಿಯುವುದೇನೆಂದರೆ ಇಲ್ಲಿ ಬಅ್‌ದ್ ಎಂಬ ಪದ ಕಾಲಕ್ಕೆ ಸಂಬಂಧಿಸಿ ಅನಂತರ ಎಂಬ ಅರ್ಥದಲ್ಲಿ ಬಳಸಲಾಗಿಲ್ಲ. ಇಲ್ಲಿ ಬಳಸಲಾದುದು "ಬಿಟ್ಟು" ಎಂಬ ಅರ್ಥದಲ್ಲಾಗಿದೆ. "ನನ್ನನ್ನು ಬಿಟ್ಟು ನುಬುವ್ವತ್ ಬೇರೆ ಯಾರಿಗಾದರೂ ದೊರಕಬಹುದಾಗಿದ್ದರೆ ಅದು ಉಮರ್‌ಗೆ ದೊರಕುತ್ತಿತ್ತು" ಎಂದು ಈ ಹದೀಸಿನಲ್ಲಿ ಪ್ರತಿಪಾದಿಸಲಾಗಿದೆ. ಇದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರಲ್ಲಿ ಅಡಕವಾಗಿದ್ದ ನಿಯಮ ನಿರ್ಮಾಣ ನೈಪುಣ್ಯವನ್ನು ಗಮನಕ್ಕೆ ತೆಗೆದುಕೊಂಡು ಹೇಳಿದ ಹದೀಸಾಗಿದೆ.

ಈ ಹದೀಸಿನ ಕುರಿತು ಮೇಲೆ ಬರೆದುದನ್ನು ಸಂಕ್ಷಿಪ್ತವಾಗಿ ಹೀಗೆ ಕ್ರೋಢೀಕರಿಸಬಹುದು. ಈ ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಪ್ರವಾದಿ ಬರುವ ಕುರಿತು ಪ್ರಸ್ತಾಪಿಸಿಲ್ಲ. ಈ ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸ್ಥಾನದಲ್ಲಿ ಬರುವ ಪ್ರವಾದಿಯ ಕುರಿತು ಪ್ರಸ್ತಾಪಿಸಲಾಗಿದೆ.

ಈ ಬಗ್ಗೆ ಈ ಕೆಳಗಿನ ನಾಲ್ಕು ಆಧಾರಗಳಿವೆ. ಈ ಆಧಾರಗಳನ್ನು ಯಾರೂ ನಿರಾಕರಿಸಲಾರರು.

1. ಬಅ್‌ದ್ ಎಂಬ ಶಬ್ದ ಅರಬಿ ಭಾಷೆಯಲ್ಲಿ "ಒಂದು ವಸ್ತುವನ್ನು ಬಿಟ್ಟು ಇನ್ನೊಂದನ್ನು ತೆಗೆದು ಕೊಳ್ಳುವ" ಅರ್ಥದಲ್ಲಿ ಅನೇಕ ಸಾರಿ ಪ್ರಯೋಗಿಸಲಾಗುತ್ತದೆ. ಈ ಅರ್ಥದ ಪ್ರಕಾರ ಈ ಹದೀಸಿನ ಅರ್ಥ: "ನನ್ನ ಸ್ಥಾನದಲ್ಲಿ ಬೇರೊಬ್ಬ ಪ್ರವಾದಿ ಆಗಬಹುದಾಗಿದ್ದರೆ ಉಮರ್ ಪ್ರವಾದಿ ಆಗುತ್ತಿದ್ದರು" ಎಂದಾಗಿದೆ.

2. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಬೇರೆ ಒಂದು ಹದೀಸಿನಲ್ಲಿ ಈ ಹದೀಸನ್ನು ಸ್ಪಷ್ಟಗೊಳಿಸಿದ್ದಾರೆ. ಆ ಹದೀಸಿನಲ್ಲಿ ಹೀಗೆ ಹೇಳಲಾಗಿದೆ: "ನಾನು ಪ್ರವಾದಿಯಾಗಿ ನೇಮಿಸಲ್ಪಡದೆ ಇರುತ್ತಿದ್ದರೆ ಉಮರ್ ಪ್ರವಾದಿಯಾಗಿ ನೇಮಿಸಲ್ಪಡುತ್ತಿದ್ದರು".

3. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರಲ್ಲಿ ನಿಯಮ ನಿರ್ಮಾಣದ ನೈಪುಣ್ಯ ಬಹಳ ಇದ್ದಿತು ಎಂಬುದರ ಕುರಿತು ಅವರ ಜೀವಿತ ಚರಿತ್ರೆ ಸಾಕ್ಷ್ಯನುಡಿಯುತ್ತದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಶರೀಅತ್ ತಂದ ಪ್ರವಾದಿ ಆಗಿದ್ದರು. ಆದುದರಿಂದ ಈ ಹದೀಸಿನ ಮೂಲಕ ಅವರು

ಉದ್ದೇಶಿಸಿದುದು ಹೀಗೆ : "ಇದು ಶರೀಅತ್ ಅವತೀರ್ಣವಾಗುವ ಕಾಲವಾಗಿದೆ. ಆದುದರಿಂದ ನಾನು ಪ್ರವಾದಿಯಾಗಿ ಆಗಮಿಸದೆ ಇರುತ್ತಿದ್ದರೆ ಉಮರ್ ಪ್ರವಾದಿಯಾಗಿ ನನ್ನ ಸ್ಥಾನದಲ್ಲಿ ಆಗಮಿಸುತ್ತಿದ್ದರು."

4. ಮುಸ್ಲಿಮ್ ಸಮುದಾಯದ ಒಮ್ಮತದ ಅಭಿಪ್ರಾಯದ ಪ್ರಕಾರ ಮತ್ತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಹೇಳಿಕೆ ಪ್ರಕಾರ ಸಹ ಸಹಾಬಿಗಳ ಪರಿಶುದ್ಧ ಸಮೂಹದಲ್ಲಿ ಎಲ್ಲರಿಗಿಂತಲೂ ಶ್ರೇಷ್ಠರು ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹು ಆಗಿದ್ದರು. ಆದುದರಿಂದ ನುಬುವ್ವತ್ ಬಗ್ಗೆ ಮಾತ್ರ ಪ್ರಶ್ನೆ ಇದ್ದಿದ್ದರೆ ನಿಶ್ಚಯವಾಗಿಯೂ ಅದಕ್ಕೆ ಹಕ್ಕುದಾರರಾಗಿ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹು ಇದ್ದರು; ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಅದಕ್ಕೆ ಹಕ್ಕುದಾರರಾಗಿರಲಿಲ್ಲ. ಆದುದರಿಂದ ಈ ಹದೀಸಿನಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರನ್ನು ಸೂಚಿಸಿದುದು ಅವರ ಒಂದು ವಿಶಿಷ್ಟ ಗುಣದ ಕಾರಣದಿಂದಾಗಿದೆ. ಆ ಗುಣದಲ್ಲಿ ಮಾತ್ರ ಅವರಿಗೆ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರಿಗಿಂತ ಶ್ರೇಷ್ಠತೆ ಇತ್ತು. ಇದು ಭಾಗಶಃ ಅವರಿಗಿದ್ದ ಶ್ರೇಷ್ಠತೆಯಾಗಿದೆ.

## ಇನ್ನನ್ನುಬುವ್ವತ ಖದಿನ್‌ಖತಅತ್ ಎಂಬ ಹದೀಸಿನ ವಿವರಣೆ

ನಾನು ಬರೆದುದು ತುಂಬಾ ದೀರ್ಘವಾದ ಕಾರಣ ಉಳಿದ ಹದೀಸುಗಳ ಕುರಿತು ಸಂಕ್ಷಿಪ್ತವಾಗಿ ಮಾತ್ರ ಸೂಚಿಸಲು ಪ್ರಯತ್ನಿಸುತ್ತೇನೆ. ನಾನು ಇದುವರೆಗೆ ವಿವರಿಸಿದ ವಿಚಾರಗಳು ಅಲ್ಲಾಹನು ಇಚ್ಛಿಸುವುದಾದರೆ ಪ್ರತಿಯೊಬ್ಬ ಬುದ್ಧಿಶಾಲಿ ಮತ್ತು ನಿಷ್ಕಳಂಕ ಹೃದಯವಂತನಿಗೆ ಈ ವಿಷಯವನ್ನು ಮನವರಿಕೆ ಮಾಡಲು ಸಾಕಾಗಬಹುದೆಂದು ನಾನು ಆಶಿಸುತ್ತೇನೆ. ಸೈದ್ಧಾಂತಿಕವಾದ ಈ ವಿಚಾರಗಳ ಸಹಾಯದಿಂದ ನಮ್ಮ ವಿರೋಧಿಗಳು ಸೂಚಿಸುವ ಉಳಿದ ಎಲ್ಲಾ ಹದೀಸುಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ನಾನು ಮೇಲೆ ವಿವರಿಸಿದ ವಿಚಾರಗಳಲ್ಲಿ ಸೂಚಿಸಲಾದ ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಂದ ತಿಳಿದು ಬರುವ ಪರಿಹಾರ ಸೂತ್ರವು ಅಲ್ಲಾಹನ ಅನುಗ್ರಹದಿಂದ ಈ ಎಲ್ಲಾ ಪ್ರಶ್ನೆಗಳನ್ನು ಒಳಗೊಂಡ ಮುಚ್ಚಲ್ಪಟ್ಟ ಪ್ರತಿಯೊಂದು ಬೀಗವನ್ನು ತೆರೆಯುವ ಮಾಸ್ಟರ್ ಕೀ (Master Key) ಆಗಿದೆ. ನಾನು ಇನ್ನು ಮುಂದೆ ಸಂಕ್ಷಿಪ್ತವಾಗಿಯೇ ವಿವರಣೆಗಳನ್ನು ನೀಡುವೆನು ಮತ್ತು ನನ್ನ ಬರಹವನ್ನು ಬೇಗನೆ ಪೂರ್ಣಗೊಳಿಸಲು ಪ್ರಯತ್ನಿಸುವೆನು.

ನಮ್ಮ ವಿರೋಧಿಗಳು ಸೂಚಿಸುವ ಇನ್ನೊಂದು ಹದೀಸು ಹೀಗಿದೆ :

إنّ الرّسالة والنّبوّة قد انقطعت فلا رسول بعدى ولا نبى۔

ರಿಸಾಲತ್ (ಸಂದೇಶವಾಹಕತ್ವ) ಮತ್ತು ನುಬುವ್ವತ್ (ಪ್ರವಾದಿತ್ವ) ಇವುಗಳ ಶೃಂಖಲೆ ಕೊನೆಗೊಂಡಿದೆ. ನನ್ನ ನಂತರ ಯಾವುದೇ ರಸೂಲ್ (ಸಂದೇಶವಾಹಕ) ಮತ್ತು ನಬೀ (ಪ್ರವಾದಿ) ಇಲ್ಲ."

ಈ ಹದೀಸನ್ನು ಮುಂದಿರಿಸಿ ಹೀಗೆ ವಾದಿಸಲಾಗುತ್ತದೆ: "ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಸ್ವತಃ ಪ್ರಕಟಿಸಿರುವರು - ನನ್ನ ನಂತರ ಯಾವುದೇ ಪ್ರವಾದಿ ಇಲ್ಲ ಎಂದು."

ಈ ಹದೀಸಿನಲ್ಲಿ ಯಾವುದೇ ಹೊಸ ವಿಷಯವನ್ನು ಪ್ರಸ್ತಾಪಿಸಲಾಗಿಲ್ಲ ಎಂದು ಪ್ರತಿಯೊಬ್ಬ ಬುದ್ಧಿಶಾಲಿ ಸುಲಭವಾಗಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಈ ಮೊದಲು ವಿವರಿಸಲಾದ ಹದೀಸುಗಳಲ್ಲಿ ಹೇಳಿದ ಸಂಗತಿಯನ್ನೇ ಈ ಹದೀಸಿನಲ್ಲಿಯೂ ಪ್ರತಿಪಾದಿಸಲಾಗಿದೆ. "ಲಾನಬಿಯ್ಯ ಬಅ್‌ದೀ", "ಇನ್ನೀ ಆಖಿರುಲ್ ಅಂಬಿಯಾ" ಎಂಬ ಹದೀಸಿನ ಬಗ್ಗೆ ನಾವು ನೀಡಿದ ವಿವರಣೆ ಈ ಹದೀಸಿಗೂ ಅನ್ವಯಿಸುತ್ತದೆ ಮತ್ತು ಆ ವಿವರಣೆ ಸಾಕಷ್ಟು ಇದ್ದು ಹೆಚ್ಚಿನ ವಿವರಣೆ ನೀಡುವ ಆವಶ್ಯಕತೆ ಇರಲಾರದು.

ಈ ಹದೀಸಿನಲ್ಲಿ "ಅರ್ರಿಸಾಲತ್" ಮತ್ತು "ಅನ್ನುಬುವ್ವತ್" ಎಂಬ ಪದಗಳು 'ಅಲ್' ಎಂಬ ಪ್ರತ್ಯಯದೊಂದಿಗೆ ಪ್ರಯೋಗಿಸಲ್ಪಟ್ಟಿದೆ. ರಈಸುಲ್ ಮುಹದ್ದಿಸೀನ್ ಅಲ್ಲಾಮ ಇಬ್ನು ಹಜರ್‌ರವರು "ಲಮ್ ಯಬ್‌ಖಮಿನನ್ನುಬುವ್ವತಿ ಇಲ್ಲಲ್ ಮುಬಶ್ಶಿರಾತ್" ಎಂಬ ಹದೀಸಿಗೆ ವ್ಯಾಖ್ಯಾನ ಬರೆಯುತ್ತಾ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಹಾಗೆ ಇರುವ ತಶ್‌ರೀಈ ನುಬುವ್ವತ್ ಕೊನೆಗೊಂಡಿದೆ; ಸಾಮಾನ್ಯ ನುಬುವ್ವತ್ ಅಲ್ಲ ಎಂದು ಬರೆದಿರುವರು (ಫತ್‌ಹುಲ್ ಬಾರಿ: ಸಂಪುಟ 12 ಪುಟ 305). ತಶ್‌ರೀಈ ನುಬುವ್ವತ್ ಮಾತ್ರ ಈ ಹದೀಸಿನಲ್ಲಿ ಸಹ ಸೂಚಿಸಲ್ಪಟ್ಟಿದೆ. ಈ ಹದೀಸಿನೊಂದಿಗೆ "ಫಲಾ ರಸೂಲ ಬಅ್‌ದೀ ವ ಲಾ ನಬಿಯ್ಯ" ಎಂಬ ಶಬ್ದಗಳನ್ನು ಸೇರಿಸಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್-ನಾನು ಹೇಳಿದುದು ಲಾ ನಬಿಯ್ಯ ಬಅ್‌ದೀ ಎಂಬ ಹದೀಸಿನಲ್ಲಿ ಹೇಳಿದ ಪ್ರಕಾರವೇ ಆಗಿದೆ ಎಂದು ಹೇಳಲು ಉದ್ದೇಶಿಸಿರುವರು.

ಈ ಹದೀಸಿನಲ್ಲಿ ಈ ಮೊದಲು ವಿವರಿಸಲಾದ ಹದೀಸುಗಳಲ್ಲಿ ಹೇಳಿದುದಕ್ಕಿಂತ ಹೆಚ್ಚಿನ ಯಾವುದೇ ವಿಷಯ ಪ್ರಸ್ತಾಪಿಸಲ್ಪಟ್ಟಿಲ್ಲ. ಈ ಹದೀಸಿನಲ್ಲಿಯೂ "ಲಾ ನಬಿಯ್ಯಬಅ್‌ದೀ" ಮತ್ತು "ಇನ್ನೀ ಆಖಿರುಲ್ ಅಂಬಿಯಾ" ಎಂಬ ಹದೀಸುಗಳಲ್ಲಿ ವಿವರಿಸಲಾದ ವಿಷಯವೇ ಪ್ರಸ್ತಾಪಿಸಲ್ಪಟ್ಟಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ತಶ್‌ರೀಈ ನುಬುವ್ವತ್ ಮತ್ತು ಮುಸ್ತಖಿಲ್ ನುಬುವ್ವತ್‌ಗಳ ಬಾಗಿಲು ಮಾತ್ರ ಮುಚ್ಚಲ್ಪಟ್ಟಿದೆ; ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನುಬುವ್ವತಿನ ಅಂಶವೇ ಆಗಿರುವ, ಅದರ ಪ್ರತಿ ಬಿಂಬವೇ ಆಗಿರುವ ಝಿಲ್ಲೀ ನುಬುವ್ವತಿನ ಬಾಗಿಲು ಮುಚ್ಚಲ್ಪಟ್ಟಿಲ್ಲ ಎಂದು ಈ ಹದೀಸುಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ.

## ಹಝ್‌ರತ್ ಶೇಖ್ ಮುಹ್ಯುದ್ದೀನ್ ಇಬ್ನು ಅರಬಿ ಅವರ ಸೂಕ್ಷ್ಮ ಜ್ಞಾನ ಭರಿತ ವಿವರಣೆ

ಇಸ್ಲಾಮ್ ಧರ್ಮದ ಉನ್ನತ ಶ್ರೇಣಿಯ ವಿದ್ವಾಂಸರು ಮತ್ತು ಸಂತರು ಯಾವಾಗಲೂ ಇದೇ ರೀತಿಯಲ್ಲಿ ವಿವರಿಸುತ್ತಾ ಇದ್ದರು. ಶೇಖ್ ಅಕ್‌ಬರ್ ಮುಹ್ಯುದ್ದೀನ್ ಇಬ್ನು ಅರಬಿ (ನಿಧನ : 638 ಹಿಜರಿ) ಹೀಗೆ ಬರೆದಿರುವವರು :

انّ النبوة الذى انقطعت بوجود رسول الله صلى الله عليه وسلم انما هى النبوة التشريع لامقامها...... وهذا معنى قوله صلى الله عليه وسلم ان الرسالة والنبوة قد انقطعت فلا رسول بعدى ولا نبى اى لا نبى بعدى يكون على شرعى بل اذا كان يكون تحت حكم شريعتى -
(فتوحات مكية جلد ٢ باب ٧٣ مطبوعه مصر)

"ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ಕೊನೆಗೊಂಡ ನುಬುವ್ವತ್ ತಶ್‌ರೀಈ ನುಬುವ್ವತ್ ಮಾತ್ರವಾಗಿದೆ. ಅವರ ಆಗಮನದ ನಂತರ ಇಂತಹ ನುಬುವ್ವತ್ ದೊರಕಲು ಸಾಧ್ಯವೇ ಇಲ್ಲ. 'ಇನ್ನರ್ರಿಸಾಲತ ವನ್ನುಬುವ್ವತ ಖದಿನ್‌ಖತಅತ್ ಫಲಾ ರಸೂಲ ಬಅ್‌ದೀ ವಲಾ ನಬಿಯ್ಯ' ಎಂಬ ಪೈಗಂಬರರ ನುಡಿಯ ಅರ್ಥ: 'ನನ್ನ ಶರೀಅತಿಗೆ ವಿರುದ್ಧವಾದ ಶರೀಅತನ್ನು ತರುವ ನಬಿ ಬರಲಾರರು. ಆದರೆ ಯಾರಾದರೂ ಪ್ರವಾದಿ ಬರುವುದಾದರೆ ನನ್ನ ಶರೀಅತ್‌ಗೆ ಅಧೀನರಾಗಿ ಬರುವರು' ಎಂದಾಗಿದೆ. (ಫುತೂಹಾತೆ ಮಕ್ಕಿಯ್ಯ : ಸಂಪುಟ 2 ಪುಟ 73)

ನೋಡಿರಿ, ಈ ಉಲ್ಲೇಖ ಎಷ್ಟು ಸ್ಪಷ್ಟವಾಗಿದೆ. ಇದು ಇಂದಿನದೇನೂ ಅಲ್ಲ. ಏಳು ನೂರು ವರ್ಷಗಳಿಂತಲೂ ಹಿಂದೆ ಬರೆದುದಾಗಿದೆ. ಇದು ಎಂತಹ ಮಹಾನುಭಾವರು ಬರೆದುದೆಂದರೆ ಅವರು ಇಸ್ಲಾಮ್ ಧರ್ಮಾನುಯಾಯಿಗಳಲ್ಲಿ ಇಮಾಮ್ ಎಂಬ ಪದವಿ ಪಡೆದಿದ್ದರು. ಹಝ್‌ರತ್ ಮುಲ್ಲಾ ಅಲೀ ಖಾರಿಯವರ ಉಲ್ಲೇಖದ ಕುರಿತು ಮತ್ತು ಹಝ್‌ರತ್ ಇಮಾಮ್ ಶಿಅರಾನಿಯವರ ಉಲ್ಲೇಖದ ಕುರಿತು ಈ ಮೊದಲು ಸೂಚಿಸಲಾದ ಸಂಶಯದಂತಹ ಸಂಶಯ ಯಾರಿಗಾದರೂ ಉಂಟಾಗುವುದಾದರೆ ನಾನು ಈ ಬಗ್ಗೆ "ಲೌ ಆಶ ಇಬ್ರಾಹೀಮ ಲಕಾನ ಸಿದ್ದೀಖನ್ ನಬಿಯ್ಯ" ಮತ್ತು "ಲಾನಬಿಯ್ಯ ಬಅ್‌ದೀ" ಎಂಬ ಹದೀಸುಗಳ ವಿವರಣೆಯ ಸಂದರ್ಭದಲ್ಲಿ ಪ್ರಸ್ತಾಪಿಸಿದ ಸೈದ್ಧಾಂತಿಕ ಸೂತ್ರವನ್ನು ಪುನಃ ಓದಬೇಕೆಂದು ಕೋರುತ್ತೇನೆ.

ಅನಂತರ ಸಹ ಸಂಶಯವು ನಿವಾರಣೆಯಾಗುವುದಿಲ್ಲವಾದರೆ ಅಂತಹ ವ್ಯಕ್ತಿಯ ಸಂಗತಿ ಅಲ್ಲಾಹನ ಕೈಯಲ್ಲಿದೆ.

"ನೀನು ಇಚ್ಛಿಸುವವರಿಗೆ ನೀನು ಮಾರ್ಗದರ್ಶನ ನೀಡಲಾರೆ. ಆದರೆ ಅಲ್ಲಾಹನು ತಾನು ಇಚ್ಛಿಸುವವರಿಗೆ ಮಾರ್ಗದರ್ಶನವನ್ನು ದಯಪಾಲಿಸುತ್ತಾನೆ."

## ಇನ್ನೊಂದು ಹದೀಸಿನ ವಿವರಣೆ

ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೀಗೆಂದರು :

ان مثلى ومثل الانبيآء من قبلى كمثل رجلٍ بنى بيّتًا فاحسنهٗ
واجملهٗ الّا موضع لبنة من زاوية فجعل النّاس يطوفون
به ويعجبون له ويقولون هلّا وُضِعَت هذه اللبنة فقال
انا اللبنة وانا خاتم النّبيّن-

"ನನ್ನ ಮತ್ತು ನನಗಿಂತ ಮೊದಲು ಆಗಮಿಸಿದ ಪ್ರವಾದಿಗಳ ಉದಾಹರಣೆ ಒಬ್ಬ ಮನುಷ್ಯನು ನಿರ್ಮಿಸಿದ ಮನೆಯ ಹಾಗಿದೆ. ಅದನ್ನು ಎಲ್ಲಾ ವಿಧಗಳಲ್ಲಿಯೂ ಸುಂದರವಾಗಿ ನಿರ್ಮಿಸಿ ಅಲಂಕರಿಸಲಾಯಿತು. ಆದರೆ ಮೂಲೆಯಲ್ಲಿ ಒಂದು ಇಟ್ಟಿಗೆಯ ಸ್ಥಳ ಬಾಕಿಯಾಗಿ ಉಳಿಯಿತು. ಜನರು ಆ ಮನೆಯ ಸುತ್ತುಮುತ್ತಲೂ ತಿರುಗುತ್ತಿದ್ದರು ಮತ್ತು ಆಶ್ಚರ್ಯಚಕಿತರಾಗಿ ಅದರ ಕುರಿತು - ಈ ಒಂದು ಇಟ್ಟಿಗೆಯ ಸ್ಥಳ ಏಕೆ ಖಾಲಿಯಾಗಿದೆ ಎಂದು ಹೇಳುತ್ತಿದ್ದರು. ಆ ಇಟ್ಟಿಗೆ ನಾನೇ ಆಗಿದ್ದೇನೆ. ನಾನು ಖಾತಮುನ್ನಬಿಯ್ಯೀನ್ ಆಗಿದ್ದೇನೆ."

ಈ ಹದೀಸನ್ನು ಉಲ್ಲೇಖಿಸಿ ನಮ್ಮ ವಿರೋಧಿಗಳು ಹೇಳುತ್ತಾರೆ: ನುಬುವ್ವತಿನ ಭವನಕ್ಕೆ ಕೇವಲ ಒಂದು ಇಟ್ಟಿಗೆಯ ಕೊರತೆ ಇದ್ದಿತು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದಿಂದ ಆ ಕೊರತೆ ನೀಗಿತು. ಅನಂತರ ಸ್ಥಳಾವಕಾಶ ಇರುವುದಾದರೂ ಹೇಗೆ?

ಖೇದಕರವಾದ ಸಂಗತಿಯೇನೆಂದರೆ ದಾರಿತಪ್ಪಿದ ನಮ್ಮ ಸಹೋದರರು ನಮ್ಮನ್ನು ವಿರೋಧಿಸುವಾಗ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಅತ್ಯಂತ ಶ್ರೇಷ್ಠ ಪದವಿಯನ್ನು ಮರೆತು ಬಿಟ್ಟಿರುವರು. ಈ ಹದೀಸನ್ನು ತಪ್ಪಾಗಿ ವಿವರಿಸಿ ಅವರು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪದವಿಯನ್ನು ತಗ್ಗಿಸುತ್ತಿದ್ದಾರೆ.

ವಾಸ್ತವಿಕವಾಗಿ ಸಂಗತಿಯೇನೆಂದರೆ ಈ ಹದೀಸಿನಲ್ಲಿ ವಿವರಿಸಲಾದ ಉದಾಹರಣೆಯ ಉದ್ದೇಶ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನುಬುವ್ವತಿನ ಸ್ಥಾನವನ್ನು ವಿವರಿಸುವುದು ಖಂಡಿತವಾಗಿಯೂ ಅಲ್ಲ. ಈ ಹದೀಸಿನಲ್ಲಿ ಶರೀಅತ್ ಪರಿಪೂರ್ಣಗೊಂಡುದರ ಕುರಿತು ಮಾತ್ರ ಸೂಚಿಸಲಾಗಿದೆ. ಈ ಹದೀಸಿನ ಅರ್ಥವೇನೆಂದರೆ, ಲೋಕದಲ್ಲಿ ಅನೇಕ ತಶ್‌ರೀಈ (ನಿಯಮ ಸಂಹಿತೆಗಳನ್ನು ತಂದ) ಪ್ರವಾದಿಗಳು ಆಗಮಿಸಿದರು. ಪ್ರತಿಯೊಂದು ಶರೀಅತ್ ಅವತೀರ್ಣವಾಗುವಾಗ ನುಬುವ್ವತಿನ ಭವನಕ್ಕೆ ಒಂದೊಂದು ಇಟ್ಟಿಗೆ ಇರಿಸಿದಂತಾಯಿತು. ಕೊನೆಗೆ ನಮ್ಮ ಪ್ರವಾದಿ ಹಝ್‌ರತ್

ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದೊಂದಿಗೆ ಕೊನೆಯ ಇಟ್ಟಿಗೆ ಇರಿಸಲ್ಪಟ್ಟು ಶರೀಅತ್ ಎಂಬ ಕಟ್ಟಡ ಪರಿಪೂರ್ಣ ಗೊಂಡಿತು. ಇಸ್ಲಾಮೀ ಶರೀಅತ್ ಹಿಂದಿನ ಶರೀಅತ್‌ಗಳ ಶಾಶ್ವತ ಸತ್ಯಗಳನ್ನು ತನ್ನೊಳಗೆ ತೆಗೆದುಕೊಂಡಿತು. ಅಲ್ಲದೆ ಇನ್ನಷ್ಟು ಹೆಚ್ಚಿಗೆ ಆಜ್ಞೆಗಳನ್ನು ತನ್ನೊಳಗೆ ಸೇರಿಸಿಕೊಂಡು ಶರೀಅತ್‌ನ ಶಾಶ್ವತ ಮತ್ತು ಜಾಗತಿಕ ಭವನವನ್ನು ನಿರ್ಮಿಸಿತು.

ಈ ಹದೀಸಿನಲ್ಲಿ ಶರೀಅತ್ ಪರಿಪೂರ್ಣಗೊಂಡುದರ ಕುರಿತು ಮಾತ್ರ ಪ್ರಸ್ತಾಪಿಸಲಾಗಿದೆ. ಈ ಹದೀಸಿನಲ್ಲಿ ನುಬುವ್ವತಿನ ಕೊನೆಗೊಳ್ಳುವಿಕೆಯ ಕುರಿತು ವಿವರಿಸಲಾಗಿಲ್ಲ. ಈ ಹದೀಸಿನ ಕುರಿತು ಹಿಂದಿನ ಕಾಲದ ವಿದ್ವಾಂಸರು ಹೀಗೆಯೇ ಅಭಿಪ್ರಾಯ ಸೂಚಿಸಿದ್ದರು. ಅಲ್ಲಾಮ ಇಬ್ನು ಹಜರ್ (ನಿಧನ : ಹಿಜರಿ 852) ಸಹೀಹ್ ಬುಖಾರಿಗೆ ಫತ್‌ಹುಲ್‌ಬಾರಿ ಎಂಬ ವ್ಯಾಖ್ಯಾನವನ್ನು ಬರೆದಿದ್ದರು. ಅವರು ಹದೀಸುಗಳ ಜ್ಞಾನದಲ್ಲಿ ಇಮಾಮ್ ಪದವಿ ಗಳಿಸಿದ್ದರು. ಅವರು ಈ ಹದೀಸಿಗೆ ಹೀಗೆ ವ್ಯಾಖ್ಯಾನ ಬರೆದಿರುವರು:

المراد هنا النظر الى الاكمل بالنسبة الى الشريعة
المحمدية مع مامضى من الشرائع الكاملة-
(فتح الباری جلد ۶ صفحہ ۳۶۱)

"ಈ ಹದೀಸಿನ ಅರ್ಥವೇನೆಂದರೆ ಹಿಂದಿನ ಕಾಲದ ಶರೀಅತ್‌ಗಳು ಅವುಗಳ ಕಾಲಘಟ್ಟಗಳಿಗೆ ಅನುಸಾರವಾಗಿ ಪರಿಪೂರ್ಣವಾಗಿದ್ದರೂ ಮುಹಮ್ಮದೀಯ ಶರೀಅತ್, ದೈವಿಕ ಶರೀಅತನ್ನು ಶಾಶ್ವತವಾಗಿ ಪರಿಪೂರ್ಣಗೊಳಿಸಿತು."

## ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ನುಬುವ್ವತ್ ಶೃಂಖಲೆಯ ಕೇಂದ್ರ ಬಿಂದುವಾಗಿದ್ದರು.

ಮೇಲೆ ಬರೆದ ಹದೀಸಿನಲ್ಲಿ ಶರೀಅತ್ ಪರಿಪೂರ್ಣಗೊಂಡುದರ ಕುರಿತು ಮಾತ್ರ ಪ್ರಸ್ತಾಪಿಸಲಾಗಿದೆ. ಹಾಗೆ ಭಾವಿಸದೆ ಈ ಉದಾಹರಣೆಯನ್ನು ಪ್ರವಾದಿಗಳ ಕುರಿತು ಸಾಮಾನ್ಯ ಉದಾಹರಣೆ ಎಂದು ಭಾವಿಸುವುದಾದರೆ ಅದರಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ಸಲ್ಲಮರನ್ನು (ನಊದು ಬಿಲ್ಲಾಹ್ ಮಿನ್‌ಧಾಲಿಕ - ಹಾಗೆ ಮಾಡುವುದರಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ) ಹೀನಾಯ ಗೊಳಿಸಿದಂತೆ ಆಗುವುದು. ನುಬುವ್ವತಿನ ವಿಶಾಲ ಕಟ್ಟಡದಲ್ಲಿ ಅವರ ಸ್ಥಾನ ಕೇವಲ ಒಂದು ಇಟ್ಟಿಗೆಯದಾಗುವುದು. ಆದರೆ ವಾಸ್ತವಿಕ ಸಂಗತಿ ಹೀಗೆ ಅಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೀಗೆ ಹೇಳಿರುವರು.

كنت نبيًّا وآدم منجدلٌ بين الماء والطين-

"ಹಝ್ರತ್ ಆದಮ್‌ರವರು ಹುಟ್ಟುವ ಮೊದಲೇ ನಾನು ನಬಿಯಾಗಿದ್ದೆನು."

ಈ ಹದೀಸಿನಲ್ಲಿ ಸೂಚಿಸಲಾಗಿರುವುದೇನೆಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪರಿಪೂರ್ಣ ನುಬುವ್ವತ್ ಪ್ರಕಟವಾಗಲು ಸಿದ್ಧತೆಗಳನ್ನು ಮಾಡಲು ಇತರ ಪ್ರವಾದಿಗಳನ್ನು ಕಳುಹಿಸಲಾಗಿತ್ತು.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ನುಬುವ್ವತಿನ ಶೃಂಖಲೆಯ ಕೇಂದ್ರ ಬಿಂದುವಾಗಿದ್ದರು. ಅವರ ಮುಖಾಂತರ ದೈವಿಕ ಶರೀಅತ್ ಪರಿಪೂರ್ಣಗೊಳ್ಳಲಿಕ್ಕಿ ಇದ್ದಿತು. ಇಂತಹ ಉನ್ನತ ಸ್ಥಾನ ಪಡೆದ ಪರಿಪೂರ್ಣ ಮಹಾನುಭಾವರನ್ನು, ಎಂದರೆ ಯಾರು ಮನುಷ್ಯಕುಲದ ನಾಯಕರಾಗಿರುವರೋ, ಯಾರ ಕುರಿತು ಅಲ್ಲಾಹನೇ "ಲೌಲಾಕ ಲಮಾ ಖಲಖ್ತುಲ್ ಅಫ್‌ಲಾಖ" (ನಿನ್ನನ್ನು ಸೃಷ್ಟಿಸುವ ಉದ್ದೇಶವಿಲ್ಲದಿರುತ್ತಿದ್ದರೆ ನಾನು ಈ ಸೃಷ್ಟಿಗಳನ್ನು ಸೃಷ್ಟಿಸುತ್ತಿರಲಿಲ್ಲ) ಎಂದು ಹೇಳಿರುವನೋ ಅಂತಹ ಮಹಾನುಭಾವರ ಕುರಿತು ನುಬುವ್ವತಿನ ಕಟ್ಟಡದಲ್ಲಿ ಕೇವಲ ಒಂದು ಇಟ್ಟಿಗೆಯ ಸ್ಥಾನದಲ್ಲಿರುವರು ಎಂದು ಹೇಳುವುದು ಈ ಹದೀಸಿನ ಕುರಿತು ಮಾಡಲಾಗುವ ಸುಳ್ಳು ಮತ್ತು ತಿರಸ್ಕಾರ ಯೋಗ್ಯವಾದ ವ್ಯಾಖ್ಯಾನವಾಗಿದೆ. ಯಾವುದೇ ಅಭಿಮಾನಿ ಮುಸ್ಲಿಮನು ಈ ವ್ಯಾಖ್ಯಾನವನ್ನು ಎಂದೂ ಅಂಗೀಕರಿಸಲಾರನು. ವಾಸ್ತವಿಕ ಸಂಗತಿಯೇನೆಂದರೆ ಈ ಹದೀಸಿನಲ್ಲಿ ಶರೀಅತ್ ಪರಿಪೂರ್ಣಗೊಂಡ ಬಗ್ಗೆ ಮಾತ್ರ ಪ್ರಸ್ತಾಪಿಸಲಾಗಿದೆ.

ಈ ಹದೀಸಿನಲ್ಲಿ ಶರೀಅತನ್ನು ತಂದ ಪ್ರತಿಯೊಬ್ಬ ಪ್ರವಾದಿಯನ್ನು ಒಂದು ಘಟಕವನ್ನಾಗಿ ಪ್ರಸ್ತಾಪಿಸಲಾಗಿದೆ. ಪರಿಪೂರ್ಣ ಶರೀಅತ್ ಭವನದ ನಿರ್ಮಾಣಕ್ಕೆ ಈ ಘಟಕಗಳನ್ನು ಬಳಸಲಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಎಂಬ ಘಟಕದ ಮೂಲಕ ಈ ದೈವಿಕ ಶರೀಅತ್ ಭವನ ಪರಿಪೂರ್ಣಗೊಂಡಿತು.

ಮೂಲೆಯಲ್ಲಿರಬೇಕಾದ ಇಟ್ಟಿಗೆಯನ್ನು ಇರಿಸಿ ಈ ಕಟ್ಟಡವನ್ನು ಏಕೆ ಪೂರ್ಣಗೊಳಿಸಲಾಗಿಲ್ಲ? ಎಂದು ಜನರು ಕೇಳುವರೆಂದು ಈ ಹದೀಸಿನಲ್ಲಿದೆ. ಇದರ ಅರ್ಥವೇನೆಂದರೆ, ಮನುಷ್ಯನ ಪ್ರಕೃತಿ ಈ ಕೊರತೆಯನ್ನು ಮನವರಿಕೆ ಮಾಡಿಕೊಂಡಿದ್ದಿತು ಮತ್ತು ಲೋಕಕ್ಕೆ ಒಂದು ಜಾಗತಿಕ ಮತ್ತು ಶಾಶ್ವತ ಶರೀಅತ್ ಅವತೀರ್ಣಗೊಳಿಸಲ್ಪಟ್ಟು ಶರೀಅತಿನ ಕಟ್ಟಡವನ್ನು ಪೂರ್ಣಗೊಳಿಸಬೇಕಾದ ಕಾಲ ಈಗ ಸನ್ನಿಹಿತವಾಗಿದೆ ಎಂಬ ಆವಶ್ಯಕತೆಯನ್ನು ಅದು ಸೂಚಿಸುತ್ತಿತ್ತು. ಈ ಹದೀಸಿನಲ್ಲಿ ಕೇವಲ ನುಬುವ್ವತ್ ಕುರಿತು ಪ್ರಸ್ತಾಪಿತವಾಗಿದ್ದರೆ ಇದರಲ್ಲಿ ಮನುಷ್ಯ ಪ್ರಕೃತಿಯ ಆಕಾಂಕ್ಷೆ ಮತ್ತು ಆವಶ್ಯಕತೆಯ ಕುರಿತು ಹೇಳುವ ಸಂದರ್ಭ ಇರುತ್ತಿರಲಿಲ್ಲ. ಸೂಕ್ಷ್ಮಾರ್ಥಭರಿತ ಈ ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರನ್ನು ಶರೀಅತ್ ತರುವ ಪ್ರವಾದಿಗಳ ಪೈಕಿ ಒಂದು ಘಟಕವನ್ನಾಗಿ ಸೂಚಿಸಲಾಗಿದೆ. ಘಟಕಗಳ ಎಣಿಸುವಿಕೆಯಲ್ಲಿ ಪ್ರತಿಯೊಂದು ಘಟಕದ ಎಣಿಕೆ ಸಮಾನವಾಗಿರುತ್ತದೆ ಮತ್ತು ದೊಡ್ಡ ಮತ್ತು ಚಿಕ್ಕ ಘಟಕಗಳ ಮಧ್ಯೆ ಎಣಿಕೆಯ ಸಂದರ್ಭದಲ್ಲಿ ಯಾವುದೇ ತಾರತಮ್ಯ

ಮಾಡಲಾಗುವುದಿಲ್ಲ. ಈ ಉದಾಹರಣೆಯಿಂದ ಈ ಸಂಗತಿ ಸ್ಪಷ್ಟವಾಗುತ್ತದೆ: ಶರೀಅತ್ ಹೊಂದಿದ (ತಶ್‌ರೀಈ) ಪ್ರವಾದಿಗಳನ್ನು ಮತ್ತು ಸ್ವತಂತ್ರ (ಮುಸ್ತಖಿಲ್) ಪ್ರವಾದಿಗಳನ್ನು ಮಾತ್ರ ಈ ಗಣನೆಗೆ ಒಳಪಡಿಸಬೇಕಾಗುವುದು. ಯಾವುದೇ ನೆರಳಿನ ರೂಪದ (ಝಿಲ್ಲೀ) ಮತ್ತು ಉಮ್ಮತೀ (ಶಿಷ್ಯ) ಪ್ರವಾದಿಯ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಏಕೆಂದರೆ ಒಬ್ಬ ಉಮ್ಮತೀ ನಬಿಯ ಸ್ಥಾನ ಒಂದು ವೃಕ್ಷದ ಒಂದು ಶಾಖೆಯದ್ದಾಗಿದೆ. ಒಂದು ಬೇರೆಯೇ ಸ್ವತಂತ್ರವಾಗಿರುವ ವೃಕ್ಷದ ಸ್ಥಾನ ಉಮ್ಮತೀ ನುಬುವ್ವತ್‌ಗೆ ಇಲ್ಲ.

ಈ ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು "ಅನ ಖಾತಮುನ್ನಬಿಯ್ಯೀನ್" ಎಂದು ಹೇಳಿದುದು ಗಮನಾರ್ಹವಾಗಿದೆ. ಈ ಹದೀಸಿನ ಮೂಲಕ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೀಗೆ ಸೂಚಿಸಿರುವರು: ಪವಿತ್ರ ಖುರ್‌ಆನಿನ ಖಾತಮುನ್ನಬಿಯ್ಯೀನ್ ಎಂಬ ವಚನಕ್ಕೆ ವಿರುದ್ಧವಾಗಿ ಈ ಹದೀಸಿಗೆ ಅರ್ಥ ಹೇಳಬೇಡಿರಿ. ನನಗಿಂತ ಮುಂಚಿನ ಪ್ರವಾದಿಗಳಿಗೆ ಹೋಲಿಸಿದರೆ ನಾನು ತಶ್‌ರೀಈ ನುಬುವ್ವತಿನ ಭವನದ ಕೊನೆಯ ಇಟ್ಟಿಗೆಯಾಗಿದ್ದೇನೆ. ಆದರೆ ನಾನು ಖಾತಮುನ್ನಬಿಯ್ಯೀನ್ ಆಗಿರುವ ಕಾರಣ ಹೊಸ ವ್ಯವಸ್ಥೆಯ ಪ್ರಥಮ ಇಟ್ಟಿಗೆ (ಬುನಾದಿಕಲ್ಲು) ಸಹ ಆಗಿದ್ದೇನೆ. ಇನ್ನು ಮುಂದೆ ಪುನರುತ್ಥಾನ ತನಕ ನನ್ನದೇ ಮುದ್ರೆ ಮತ್ತು ನನ್ನದೇ ನಾಣ್ಯ ಚಲಾವಣೆಯಲ್ಲಿರುವುದು.

ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಹದೀಸಿನಲ್ಲಿ ತನ್ನ ನುಬುವ್ವತಿನ ಸ್ಥಾನದ ಕುರಿತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಪ್ರಸ್ತಾಪಿಸಿಲ್ಲ. ಈ ಹದೀಸು ಅವರ ಶರೀಅತ್ ಪರಿಪೂರ್ಣಗೊಂಡ ಬಗ್ಗೆ ಮಾತ್ರ ಪ್ರಸ್ತಾಪಿಸುತ್ತದೆ.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ಕಾಲದಲ್ಲಿ ಮಾನವ ಪ್ರಕೃತಿಯು ಲೋಕದ ಆವಶ್ಯಕತೆಗೆ ಅನುಸಾರವಾಗಿರುವ ಒಂದು ಜಾಗತಿಕ ಮತ್ತು ಶಾಶ್ವತ ಶರೀಅತನ್ನು ಆಶಿಸುತ್ತಿತ್ತು. ಈ ಸಹಜ ಕೋರಿಕೆಯನ್ನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ತಂದ ಶರೀಅತ್ ಶಾಶ್ವತ ರೂಪದಲ್ಲಿ ಈಡೇರಿಸಿತು.

ಈ ವಿವರಣೆಯು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಉನ್ನತ ಸ್ಥಾನಕ್ಕೆ ಮತ್ತು ಪವಿತ್ರ ಖುರ್‌ಆನಿನ ಶರೀಅತಿನ ಶ್ರೇಷ್ಠತೆಗೆ ತಕ್ಕುದಾಗಿದೆ. ಈ ವಿವರಣೆಯನ್ನು ಒಪ್ಪುವುದಿಲ್ಲವಾದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸ್ಥಾನ ಒಂದು ವಿಶಾಲ ಕಟ್ಟಡದ ಒಂದು ಇಟ್ಟಿಗೆಗೆ ಸಮವೆಂದು ಒಪ್ಪಿದಂತೆ ಆಗುತ್ತದೆ. (ನಊದುಬಿಲ್ಲಾಹ್ - ಅಲ್ಲಾಹನು ನಮ್ಮನ್ನು ಹೀಗೆ ಹೇಳುವುದರಿಂದ ರಕ್ಷಿಸಲಿ).

## ಸಲಾಸೂನ ದಜ್ಜಾಲೂನ ಎಂಬ ಹದೀಸಿನ ವಿವರಣೆ

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೀಗೆ ಹೇಳಿರುವರು :

سیکون فی امّتی ثلاثون کذّابون (وفی روایة ثلاثون دجّالون)
كلهم يزعم انّه نبيٌّ و انا خاتم النّبيّين لا نبيّ بعدي-

"ನನ್ನ ಸಮುದಾಯದಲ್ಲಿ ಬೇಗನೆ ಮೂವತ್ತು ಕಝ್ಝಾಬ್‌ಗಳು (ಇನ್ನೊಂದು ವರದಿ ಪ್ರಕಾರ ಮೂವತ್ತು ದಜ್ಜಾಲ್‌ಗಳು) ಜನಿಸುವರು. ಪ್ರತಿಯೊಬ್ಬನು ತಾನು ನಬಿಯೆಂದು ವಾದಿಸುವನು. ನಾನು ಖಾತಮುನ್ನಬಿಯ್ಯೀನ್ ಆಗಿರುವೆನು. ಲಾನಬಿಯ್ಯ ಬಅ್‌ದೀ (ನನ್ನ ವಿರುದ್ಧ ನಬಿ ಇಲ್ಲ)".

ಈ ಹದೀಸನ್ನು ಮುಂದೆ ಇರಿಸಿ ನಮ್ಮ ವಿರೋಧಿಗಳು, "ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಆಗಮಿಸುವ ಪ್ರತಿಯೊಬ್ಬ ನಬಿತ್ವವಾದಿ ಕಝ್ಝಾಬ್ ಮತ್ತು ದಜ್ಜಾಲ್ ಆಗಿರುವನು" ಎಂದು ಬೊಬ್ಬೆ ಹೊಡೆಯುತ್ತಾರೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ಈ ಹದೀಸಿಗೆ ಅನ್ವಯಿಸುವಂತೆ ಆರೋಪಿಸಿ ಅವರನ್ನು ದೂಷಿಸುತ್ತಾರೆ. ಈ ಆರೋಪ ಯಥಾರ್ಥವಾಗಿ ಮೌಢ್ಯದ ಒಂದು ಕುದಿತ ಮಾತ್ರವಾಗಿದೆ. ಇದು ಆತುರ ಮತ್ತು ದೂರದೃಷ್ಟಿಯ ಕೊರತೆಯ ಕಾರಣದಿಂದ ಉಂಟಾದುದಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರ ವಾದಕ್ಕೆ ಈ ಹದೀಸು ಯಾವ ರೀತಿಯಲ್ಲಿಯೂ ಅನ್ವಯಿಸುವುದಿಲ್ಲ.

ಈ ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಇಸ್ಲಾಮೀ ಶರೀಅತನ್ನು ರದ್ದುಗೊಳಿಸುವಂತಹ ಮತ್ತು ಅವರ ನುಬುವ್ವತಿನ ಕಾಲಘಟ್ಟವನ್ನು ಕೊನೆಗೊಳಿಸಿ ಹೊಸದಾಗಿ ನುಬುವ್ವತಿನ ಕಾಲಘಟ್ಟವನ್ನು ಆರಂಭಿಸುವಂತಹ ನುಬುವ್ವತ್ ವಾದಿಯನ್ನು ಸುಳ್ಳುಗಾರ ಎಂದು ಕರೆದಿರುವರು. ಅಹ್ಮದಿಯಾ ಜಮಾಅತಿನ ಸ್ಥಾಪಕರಿಗೆ ಈ ಹದೀಸು ಅನ್ವಯಿಸುವುದಿಲ್ಲ.

ಈ ಹದೀಸಿಗೆ ಸಂಬಂಧಿಸಿ ಗಮನಾರ್ಹವಾದ ಇನ್ನೊಂದು ಅಂಶವೇನೆಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿದುದು "ನನ್ನ ಉಮ್ಮತ್‌ನಲ್ಲಿ (ಸಮುದಾಯದಲ್ಲಿ) ನುಬುವ್ವತ್ ವಾದಿಗಳಾದ ಸುಳ್ಳುಗಾರರು ಮೂವತ್ತು ಮಂದಿ ಜನಿಸುವರು" ಎಂದು ಮಾತ್ರವಾಗಿದೆ. ನನ್ನ ನಂತರ ಯಾರೆಲ್ಲಾ ನುಬುವ್ವತಿನ ವಾದ ಮಾಡುವರೋ ಅವರೆಲ್ಲರೂ ಸುಳ್ಳುಗಾರರು ಎಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಖಂಡಿತ ಹೇಳಿಲ್ಲ. ಈ ಎರಡು ಮಾತುಗಳಲ್ಲಿ ಬಹಳ ವ್ಯತ್ಯಾಸವಿದೆ. ಬುದ್ಧಿಶಾಲಿಯಾದ ಮನುಷ್ಯನು ಈ ಎರಡು ಮಾತುಗಳ ಅರ್ಥ ಒಂದೆಂದು ಹೇಳಲಾರನು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿದುದು, "ನನ್ನ ಸಮುದಾಯದಲ್ಲಿ ಪ್ರವಾದಿಯೆಂದು ವಾದಿಸುವ ಮೂವತ್ತು ಮಂದಿ ಸುಳ್ಳುಗಾರರು ಜನಿಸುವರು" ಎಂದು ಮಾತ್ರ. "ನನ್ನ ಸಮುದಾಯದಲ್ಲಿ ನನ್ನ ನಂತರ ನುಬುವ್ವತಿನ ವಾದ ಮಾಡುವ

ಎಲ್ಲರೂ ಸುಳ್ಳು ಗಾರರು" ಎಂದು ಅವರು ಹೇಳಿಲ್ಲ. ಒಂದು ಸ್ಪಷ್ಟ ಮಾತಿಗೆ ಅದಕ್ಕೆ ತದ್ವಿರುದ್ಧವಾದ ಅರ್ಥ ಹೇಳುವುದು ನಿಜವಾಗಿಯೂ ಸಂತಾಪಕರವಾಗಿದೆ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಹೇಳಿದ ಮಾತಿಗೆ ತಪ್ಪು ಅರ್ಥ ಕಲ್ಪಿಸಿ "ನನ್ನ ಅನಂತರ ನುಬುವ್ವತ್ ವಾದ ಮಾಡುವವರು ಸುಳ್ಳುಗಾರರು" ಎಂದು ಹೇಳಿದಂತೆ ತಿರುಚುವುದು ನಿಜವಾಗಿಯೂ ಖೇದಕರವಾಗಿದೆ.

## ಎಣಿಕೆಯನ್ನು ನಿಗದಿ ಪಡಿಸಿರುವುದರ ಮಹತ್ವ

ಈ ಹದೀಸಿನಲ್ಲಿ ಸುಳ್ಳುಗಾರರ ಸಂಖ್ಯೆಯನ್ನು ಮೂವತ್ತಕ್ಕೆ ಸೀಮಿತಗೊಳಿಸಿದುದರ ಉದ್ದೇಶ ಸುಳ್ಳುಗಾರರ ಸಂಖ್ಯೆಯನ್ನು ಸೂಚಿಸುವುದು ಮಾತ್ರವಾಗಿದೆ. ಪ್ರವಾದಿ ಎಂದು ವಾದಿಸುವ ಎಲ್ಲರೂ ಸುಳ್ಳುಗಾರರೆಂದು ಈ ಹದೀಸಿನಿಂದ ಸ್ಪಷ್ಟವಾಗುವುದಿಲ್ಲ. ಈ ಹದೀಸಿನಲ್ಲಿ ಸುಳ್ಳು ಹೇಳುವ ಪ್ರವಾದಿತ್ವ ವಾದಿಗಳ ಸಂಖ್ಯೆಯನ್ನು ಸೀಮಿತಗೊಳಿಸಿ, ನಬಿ ಎಂದು ವಾದಿಸುವ ಎಲ್ಲರನ್ನೂ ತಿರಸ್ಕರಿಸಬೇಡಿರಿ. ಅವರಲ್ಲಿ ಸತ್ಯವಾದಿಗಳೂ ಇರಬಹುದು ಎಂದು ಸೂಚಿಸಲಾಗಿದೆ. ಸಹೋದರರೇ, ನೀವು ಚಿಂತಿಸಿರಿ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ಪ್ರವಾದಿ ಎಂದು ವಾದಿಸುವ ಎಲ್ಲರೂ ಸುಳ್ಳುಗಾರರಾಗಿದ್ದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಸುಳ್ಳುವಾದಿಗಳ ಸಂಖ್ಯೆಯನ್ನು ಮೂವತ್ತಕ್ಕೆ ಸೀಮಿತಗೊಳಿಸದೆ "ನನ್ನ ಅನಂತರ ಪ್ರವಾದಿಯೆಂದು ವಾದಿಸುವ ಎಲ್ಲರೂ ಸುಳ್ಳುಗಾರರು" ಎಂದು ಹೇಳುತ್ತಿದ್ದರು. ಆದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರವರು ಹಾಗೆ ಹೇಳಿಲ್ಲ. ಅವರು ಹೇಳಿದುದು "ನನ್ನ ಅನಂತರ ಮೂವತ್ತು ಜನ ಸುಳ್ಳುಗಾರರು ತಾವು ಪ್ರವಾದಿಗಳೆಂದು ವಾದಿಸುವರು" ಎಂದು ಮಾತ್ರವಾಗಿದೆ. ಈ ಮೂವತ್ತು ಜನರನ್ನು ಹೊರತು ಪಡಿಸಿ ಕೆಲವು ಸತ್ಯವಾದಿಗಳೂ ಬರಬಹುದೆಂದು ಈ ಹದೀಸು ಸೂಚನೆ ನೀಡುತ್ತದೆ. ಸುನನ್ ಅಬೂ ದಾಊದ್‌ನಲ್ಲಿರುವ ಹದೀಸು ಇದನ್ನೇ ಸೂಚಿಸುತ್ತದೆ. ಆ ಹದೀಸು ಹೀಗಿದೆ :

ليس بيني وبينه نبيٌّ وانّهٗ نازلٌ - ابوداؤد كتاب الملاحم

"ನನ್ನ ಮತ್ತು ಬರಲಿರುವ ಮಸೀಹರ ಮಧ್ಯೆ ಬೇರೆ ಯಾವ ಪ್ರವಾದಿಯೂ ಇಲ್ಲ" (ಅಬೂ ದಾಊದ್, ಕಿತಾಬುಲ್ ಮಲಾಹಿಮ್)

ಸಲಾಸೂನ ದಜ್ಜಾಲೂನ ಎಂಬ ಹದೀಸು ಮೂವತ್ತು ಸುಳ್ಳುಗಾರರಾದ ಪ್ರವಾದಿತ್ವವಾದಿಗಳ ಕುರಿತು ಸೂಚಿಸುವುದಾದರೂ ಈ ಹದೀಸು ಸತ್ಯವಂತರಾದ ಒಬ್ಬ ಪ್ರವಾದಿಯ ಆಗಮನವನ್ನು ಸಹ ಸೂಚಿಸುತ್ತದೆ. ಆ ಪ್ರವಾದಿ ಮಸೀಹರಿಗೆ ಹೋಲಿಕೆ ಹೊಂದಿದವರಾದುದರಿಂದ ಅವರನ್ನು ಮಸೀಹರೆಂದು ಕರೆಯಲಾಗಿದೆ.

ಈ ಹದೀಸಿನಿಂದ ತಿಳಿಯುವುದೇನೆಂದರೆ ಆಖಿರೀ ಝಮಾನದಲ್ಲಿ (ಲೋಕದ ಅಂತಿಮ ಕಾಲಘಟ್ಟದಲ್ಲಿ) ಹಝ್‌ರತ್ ಮಸೀಹ್ ಮೌಊದರ ಆಗಮನದ ಮೊದಲು ನಬಿ ಎಂದು ವಾದಿಸುವ ಅನೇಕ ಸುಳ್ಳುಗಾರರು ಜನಿಸುವರು. ಆದರೆ ಸುಳ್ಳುವಾದಿಗಳು ನಾಶವಾಗುವರು ಮತ್ತು ಸತ್ಯವಾದಿಯ ಆಗಮನದ ಘೋಷಣೆ ಮೊಳಗುವುದು.

## ಮೂವತ್ತು ಸುಳ್ಳುಗಾರರ ಎಣಿಕೆ ಪೂರ್ಣಗೊಂಡಿದೆ

ಮೂವತ್ತು ಸುಳ್ಳುಗಾರರ ಎಣಿಕೆ ಅಹ್ಮದಿಯಾ ಜಮಾಅತಿನ ಸ್ಥಾಪಕರ ಆಗಮನದ ಮೊದಲೇ ಪೂರ್ಣಗೊಂಡಿದೆ ಎಂದು ಚರಿತ್ರೆಯಿಂದ ಸ್ಪಷ್ಟಗೊಂಡಿದೆ. ಅಲ್ಲಾಮ ಖಸ್ತಲಾನಿ ತನ್ನ ಪ್ರಸಿದ್ಧ ಗ್ರಂಥವಾದ "ಮುವಾಹಿಬುಲ್ಲದ್ದುನ್‌ಯಾ"ದಲ್ಲಿ ಹೀಗೆ ಬರೆದಿದ್ದಾರೆ:

قال القاضي عياض هذا الحديث قد ظهر صدقهٗ فلو
عُدّ من تنبّأ من زمن النبيّ صلّى الله عليه وسلّم
الى الآن ممّن اشتهر بذالك لوجد هذا العدد و
من طالع كتب التاريخ عرف صحة هذا

(مواہب اللدنیہ جلد ۲ صفحہ ۱۹۸)

"ಖಾಝಿ ಅಯಾಝ್ ಹೀಗೆ ಹೇಳುತ್ತಾರೆ: ಈ ಹದೀಸು ಸತ್ಯವೆಂದು ಪ್ರಕಟಗೊಂಡಿದೆ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಕಾಲದಿಂದ ಇಂದಿನ ತನಕ ಪ್ರಸಿದ್ಧರಾದ ಸುಳ್ಳು ಪ್ರವಾದಿತ್ವವಾದಿಗಳನ್ನು ಎಣಿಸಿದರೆ ಈ ಸಂಖ್ಯೆ ಪೂರ್ಣಗೊಂಡಿದೆ. ಚರಿತ್ರೆಯ ಗ್ರಂಥಗಳನ್ನು ಓದುವವರಿಗೆ ಈ ಮಾತಿನ ಸತ್ಯ ತಿಳಿಯುವುದು." (ಮುವಾಹಿಬುಲ್ಲದ್ದುನ್‌ಯಾ ಭಾಗ: 2 ಪುಟ : 198)

## ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೇಳಿಕೆ

ಮೇಲೆ ವಿವರಿಸಿದ ಪ್ರಕಾರದ ಸಾಕ್ಷ್ಯಗಳನ್ನು ಸಹೀಹ್ ಮುಸ್ಲಿಮ್ ವ್ಯಾಖ್ಯಾನ ಗ್ರಂಥವಾದ ಇಕ್ಮಾಲುಲ್ ಇಕ್ಮಾಲ್ ಮತ್ತು ಅಹ್ಲೇ ಹದೀಸ್ ಪಂಥದ ನಾಯಕರಾಗಿದ್ದ ನವಾಬ್ ಸಿದ್ದೀಖ್ ಹಸನ್‌ಖಾನ್ ಸಾಹೇಬರು ಬರೆದ ಹುಜಜುಲ್ ಕಿರಾಮದಲ್ಲಿ ಕಾಣಬಹುದು.

ಈ ಸಂಗತಿಗಳನ್ನು ಪದೇ ಪದೇ ವಿವರಿಸಿದಾಗ ಸಹ ಮೌಲವಿಗಳು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಬೊಬ್ಬೆ ಹೊಡೆಯುತ್ತಾ ಇದ್ದರು. ಆಗ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಪ್ರಕಟಣೆ ನೀಡಿದರು:

"ಕೆಲವು ಮುಲ್ಲಾಗಳು ನನ್ನ ವಿರುದ್ಧ ಆಕ್ಷೇಪ ಸೂಚಿಸುತ್ತಾ, 'ನಿಮ್ಮವರಲ್ಲಿ ಮೂವತ್ತು ಜನ ಸುಳ್ಳುವಾದಿಗಳು ಜನಿಸುವರು. ಪ್ರತಿಯೊಬ್ಬನು ತಾನು ನಬಿ ಎಂದು ವಾದಿಸುವನು' ಎಂದು ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಭವಿಷ್ಯ ನುಡಿದಿರುವರು ಎನ್ನುತ್ತಾರೆ. ಇದಕ್ಕೆ ನನ್ನ ಉತ್ತರ ಹೀಗೆ : ಓ ಬುದ್ಧಿ ಹೀನರೇ, ಓ ದುರದೃಷ್ಟಶಾಲಿಗಳೇ, ನಿಮ್ಮ ಅದೃಷ್ಟದಲ್ಲಿ ಮೂವತ್ತು ದಜ್ಜಾಲ್‌ಗಳನ್ನು

ಮಾತ್ರ ಬರೆಯಲಾಗಿದೆಯೋ ? ಏನು ಸತ್ಯವಾದಿಯಾದ ಒಬ್ಬ ಸುಧಾರಕ ಬರುವುದು ನಿಮ್ಮ ಅದೃಷ್ಟದಲ್ಲಿ ಇರಲಿಲ್ಲವೇ? ಹದಿನಾಲ್ಕನೆಯ ಶತಮಾನದ ಐದರಲ್ಲೊಂದು ಭಾಗ ಕೊನೆಗೊಳ್ಳಲಿದೆ. ಖಿಲಾಫತಿನ ಚಂದ್ರ ತನ್ನ ಹದಿನಾಲ್ಕು ತಂಗುದಾಣಗಳನ್ನು ಪೂರ್ಣಗೊಳಿಸಿರುತ್ತಾನೆ. ಇದರ ಕುರಿತು ಪವಿತ್ರ ಖುರ್‌ಆನಿನ ವಚನ 'ವಲ್‌ಖಮರು ಖದ್ದರ್ನಾಹು ಮನಾಝಿಲ' ಸೂಚನೆ ನೀಡುತ್ತದೆ. ಲೋಕವು ಕೊನೆಗೊಳ್ಳಲು ಪ್ರಾರಂಭವಾಗಿದೆ. ಆದರೆ ನಿಮ್ಮ ದಜ್ಜಾಲ್‌ಗಳು ಇನ್ನೂ ಮುಗಿದಿಲ್ಲ. ಪ್ರಾಯಶಃ ನಿಮ್ಮ ಮೃತ್ಯುವಿನ ತನಕ ಅವರು ನಿಮ್ಮೊಂದಿಗೆ ಇರುವರು. ಓ ಬುದ್ಧಿಹೀನರೇ, ಶೈತಾನ್ ಎಂದು ಕರೆಯಲ್ಪಡುವ ದಜ್ಜಾಲನು ನಿಮ್ಮೊಳಗೆ ಇದ್ದಾನೆ. ಆದುದರಿಂದ ನೀವು ಕಾಲವನ್ನು ಗುರುತಿಸುವುದಿಲ್ಲ. ನೀವು ದೈವಿಕ ದೃಷ್ಟಾಂತಗಳನ್ನು ನೋಡುವುದಿಲ್ಲ. ನಿಮ್ಮ ಬಗ್ಗೆ ಸಂತಾಪ ಪಡುವುದೇಕೆ? ಹಝ್ರತ್ ಮೂಸಾ ಅಲೈಹಿಸ್ಸಲಾಮರ ನಂತರ ಹದಿನಾಲ್ಕನೆಯ ಶತಮಾನದಲ್ಲಿ ನನ್ನ ಹಾಗೆ ಬಂದವರನ್ನು ದುಷ್ಕರ್ಮಿಗಳಾದ ಯಹೂದಿಯರು ದಜ್ಜಾಲ್ ಎಂದು ಕರೆದಿದ್ದರು.

ಫಲ್ ಖಿಲೂಬ ತಶಾಬಹತ್ (ಹೃದಯಗಳು ಪರಸ್ಪರ ಸಾದೃಶ್ಯ ಹೊಂದಿದವು). ಅಲ್ಲಾಹುಮ್ಮರ್‌ಹಮ್ (ಓ ಅಲ್ಲಾಹ್ ನೀನು ದಯೆದೋರು)

(ರಿವ್ಯೂ ಬರ್ ಮುಬಾಹಸ ಬಟಾಲವಿ ವ ಚಕ್ಡಾಲವಿ ಪುಟ - 7)

ಅಲ್ಲಾಹ್! ಅಲ್ಲಾಹ್! ಇದೆಷ್ಟು ನೋವಿನಿಂದ ಬರೆದ ಮಾತುಗಳಾಗಿವೆ! ತಮ್ಮ ಸಮುದಾಯದ ಜನರು ಅನುಗ್ರಹ ವಂಚಿತರಾದ ಬಗ್ಗೆ ಉಂಟಾದ ದುಃಖ ಈ ಮಾತುಗಳಲ್ಲಿ ಹೊರಚಿಮ್ಮಿದೆ. ಆದರೆ ಪರಿಹಾಸ ಮಾಡುವವರು ಸಮಾಧಾನದಿಂದ ಯೋಚಿಸಲಿಲ್ಲವೆಂಬುದು ಖೇದಕರವಾಗಿದೆ. ನಂಬದವರು ಆ ಮೇಲೆಯೂ ನಂಬಲಿಲ್ಲ. ನಿದ್ರಿಸುವವರು ಮತ್ತೂ ಎದ್ದೇಳಲಿಲ್ಲ. ಸಮುದಾಯದ ನಾವೆಯು ಒಂದು ಸುಳಿಯಿಂದ ಹೊರಟು ಇನ್ನೊಂದು ಸುಳಿಯಲ್ಲಿ ಸಿಲುಕಿಕೊಂಡು ಹೋಯಿತು.

ಸಂಕ್ಷಿಪ್ತವಾಗಿ ಹೇಳುವುದಾದರೆ ಮೂವತ್ತು ದಜ್ಜಾಲ್‌ಗಳ ಬಗೆಗಿನ ಹದೀಸಿನಲ್ಲಿ ಮೂವತ್ತು ಸುಳ್ಳುಗಾರರ ಕುರಿತು ಮಾತ್ರ ಹೇಳಲಾಗಿದೆ. ಸತ್ಯವಾದಿಗಳು ಯಾರೂ ಜನಿಸಲಾರರೆಂದು ಹೇಳಿಲ್ಲ. ಈ ಮೂವತ್ತು ಸುಳ್ಳುವಾದಿಗಳು ಆಗಮಿಸಿ ಅವರ ಸಂಖ್ಯೆ ಪೂರ್ಣಗೊಂಡಿದೆ ಎಂದು ನಾವು ಸಾಬೀತುಗೊಳಿಸಿದ್ದೇವೆ.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು "ಲೈಸ ಬೈನೀ ಬೈನಹು ನಬಿಯ್ಯುನ್" (ನನ್ನ ಮತ್ತು ಬರಲಿರುವ ಮಸೀಹರ ಮಧ್ಯೆ ಪ್ರವಾದಿಯಿಲ್ಲ) ಎಂದು ಯಾವ ಸುಧಾರಕರ ಬಗ್ಗೆ ಪ್ರಸ್ತಾಪಿಸಿದ್ದರೋ ಆ ಮತ ಸುಧಾರಕರು ಆಗಮಿಸಿರುವರು. ನಮ್ಮ ಸಹೋದರರಿಗೆ ತಮ್ಮ ಸಮುದಾಯದಲ್ಲಿ ಇನ್ನಷ್ಟು ದಜ್ಜಾಲರ ಪ್ರತೀಕ್ಷೆಯೇ ಇದ್ದರೆ ಅವರು ಮುಂದೆ ಆ ಬಗ್ಗೆ ಪಶ್ಚಾತ್ತಾಪಪಡಬೇಕಾದೀತು.

ಖತ್‌ಮೆ ನುಬುವ್ವತ್ ಕುರಿತು ನಾನು ಸಕಾರಾತ್ಮಕ ಆರು ಹದೀಸುಗಳನ್ನು ವಿವರಿಸಿದ್ದೆನು. ಈಗ ನಕಾರಾತ್ಮಕ ಆರು ಹದೀಸುಗಳ ವಿವರಣೆ ಇಲ್ಲಿಗೆ ಮುಗಿಸಿದ್ದೇನೆ.

ಈ ಹನ್ನೆರಡು ಹದೀಸುಗಳಿಗೆ ನಾನು ನೀಡಿದ ವಿವರಣೆ ಶುದ್ಧ ಹೃದಯರಾದವರಿಗೆ ಸಾಕಷ್ಟಾಗಬಹುದು ಎಂದು ಭಾವಿಸುತ್ತೇನೆ. ಈ ಹದೀಸುಗಳ ವಿವರಣೆಯ ಮಧ್ಯೆ ಸೂಚಿಸಲಾದ ಸೈದ್ಧಾಂತಿಕ ತತ್ವಗಳು ಮೇಲೆ ವಿವರಿಸಿದ ಹಾಗಿರುವ ಇನ್ನಿತರ ಇಲ್ಲಿ ವಿವರಿಸದ ಹದೀಸುಗಳನ್ನು ಅರ್ಥಮಾಡಲು ಪ್ರತಿಯೊಬ್ಬ ವಿವೇಕಶಾಲಿಗೆ ಸಹಾಯಕವಾಗಬಹುದೆಂದು ಗ್ರಹಿಸುತ್ತೇನೆ. ಪವಿತ್ರ ಖುರ್‌ಆನಿನ ನಿರ್ಣಾಯಕ ಮಾರ್ಗದರ್ಶನ ಎಲ್ಲದಕ್ಕಿಂತ ಮೇಲೆ ಇರುವುದೂ ತೀರ್ಮಾನ ನೀಡುವುದೂ ಆಗಿದೆ. ಕಣ್ಣಿನ ದೃಷ್ಟಿ ಇಲ್ಲದವರಿಗೆ ಸೂರ್ಯನ ಬೆಳಕು ಸಹ ನಿಷ್ಪ್ರಯೋಜಕವಾಗಿದೆ. ಅದೇ ರೀತಿ ಹೃದಯದಲ್ಲಿ ಪರಿಶುದ್ಧ ಸಂಕಲ್ಪ ಮತ್ತು ಸತ್ಯವನ್ನು ತಿಳಿಯುವ ಆಕಾಂಕ್ಷೆ ಇಲ್ಲದವರಿಗೆ ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಪ್ರಯೋಜನಕರವಾಗಲಾರವು. ಆದುದರಿಂದ ಈ ಪುಸ್ತಕದ ಮುಂದಿನ ಭಾಗವನ್ನು ಪ್ರಾರಂಭಿಸುವ ಮೊದಲು ನನ್ನ ಓದುಗರೊಂದಿಗೆ ನಾನು ಪುನಃ ಹೀಗೆ ಕೋರುತ್ತೇನೆ: ಅವರು ಭಯಭಕ್ತಿಯನ್ನು ಹೊಂದಿ ಸತ್ಯಾನ್ವೇಷಿಗಳಾಗಿ ಪವಿತ್ರ ಖುರ್‌ಆನಿನ ಮತ್ತು ಹದೀಸಿನ ಸಾಕ್ಷ್ಯಾಧಾರಗಳ ಕುರಿತು ಸಮಾಧಾನಚಿತ್ತರಾಗಿ ಯೋಚಿಸಬೇಕು. ಸತ್ಯವು ಅವರ ಈಗಿನ ನಂಬಿಕೆಗೆ ಅನುಸಾರವಾಗಿದ್ದರೂ ವಿರುದ್ಧವಾಗಿದ್ದರೂ ಸತ್ಯವನ್ನೇ ಅಂಗೀಕರಿಸಬೇಕು. ಈಮಾನ್ ಬಗ್ಗೆ ಬಹಳ ಜಾಗರೂಕವಾಗಿರುವುದು ಆವಶ್ಯಕವಾಗಿದೆ. ಅದರಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಉಂಟಾದರೂ ಅದು ಅಲ್ಲಾಹನ ಕೋಪಕ್ಕೆ ಗುರಿಯಾಗುತ್ತದೆ. ಆದುದರಿಂದ ಬಂಧುಗಳೇ, ಸ್ನೇಹಿತರೇ, ನಿಮ್ಮ ಇಂದಿನ ವಿಶ್ವಾಸ ಏನು ಎಂದೋ ನಿಮ್ಮ ತಂದೆ ತಾತಂದಿರಿಂದ ಏನು ಕೇಳಿರುವಿರೆಂದೋ ನಿಮ್ಮ ಮೌಲವಿಗಳು ಏನು ಹೇಳುತ್ತಾರೆಂದೋ ಯೋಚಿಸಬೇಡಿರಿ. ಪವಿತ್ರ ಖುರ್‌ಆನ್ ಏನನ್ನು ಆಜ್ಞಾಪಿಸುತ್ತದೆ. ಹದೀಸು ಏನು ಹೇಳುತ್ತದೆ. ನಿಮ್ಮ ಹೃದಯದ ಪ್ರಕಾಶ ಏನು ಮಾರ್ಗದರ್ಶನ ನೀಡುತ್ತದೆ ಎಂದು ಮಾತ್ರ ನೋಡಿರಿ.

ನಮ್ಮ ಹೃದಯದ ಸ್ಥಿತಿ ಏನೆಂದು ಅಲ್ಲಾಹನಿಗೆ ತಿಳಿದಿದೆ. ಪ್ರಾಮಾಣಿಕತೆ, ಪ್ರೀತಿ ಮತ್ತು ಸತ್ಯದ ಪ್ರಚಾರದ ಆವೇಶ, ಇವುಗಳ ಹೊರತು ಬೇರೆ ಯಾವ ಯೋಚನೆಯೂ ನಮಗಿಲ್ಲ.

ನಮ್ಮ ಇಮಾಮರು ಹೀಗೆ ಹೇಳಿದ್ದಾರೆ:


ہمیں کچھ کیں نہیں بھائیو نصیحت ہے غریبانہ
کوئی جو پاک دل ہووے دل و جاں اس پہ قرباں ہے


"ನಮಗೆ ಯಾವ ಸ್ವಾರ್ಥವೂ ಇಲ್ಲ. ಇದು ಕೇವಲ ಸದುಪದೇಶವಾಗಿದೆ. ಯಾವುದಾದರೂ ಪರಿಶುದ್ಧ ಹೃದಯ ದೊರೆತರೆ ನಾವು ಅದನ್ನು ಹೃತ್ಪೂರ್ವಕವಾಗಿ ಪ್ರೀತಿಸುವೆವು."

(ಮುಂದುವರಿಯುವುದು)

ಅಹ್ಮದಿಯಾ ವಾರ್ತೆಗಳು

# ಅಹ್ಮದಿಯಾ ಮುಸ್ಲಿಂ ಕಮ್ಯೂನಿಟಿ ಹಾಲ್ ಉದ್ಘಾಟನೆ





ಮಂಗಳೂರಿನ ಪಾಂಡೇಶ್ವರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಅಹ್ಮದಿಯಾ ಮುಸ್ಲಿಂ ಜಮಾಅತಿನ ಕಮ್ಯೂನಿಟಿ ಹಾಲ್‌ನ್ನು 25-10-2002 ಶುಕ್ರವಾರದಂದು ಜನಾಬ್ ಡಾ। ಮನ್‌ಸೂರ್ ಅಹ್ಮದ್ ಸಾಹೇಬರು ದುಆದೊಂದಿಗೆ ಉದ್ಘಾಟಿಸಿದರು.

ಮೌಲವಿ ನಾಸಿರ್ ಅಹ್ಮದ್ ಸಾಹೇಬ್ ಖುತುಬ ಪ್ರವಚನ ನೀಡಿದರು. ಜುಮುಅ ಬಳಿಕ ಡಾ। ಮನ್‌ಸೂರ್ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ತರ್‌ಬಿಯ್ಯತ್ ಸಭೆ ಜರಗಿತು. ಮೌಲವಿ ಕೆ. ವೈ. ಶಂಸುದ್ದೀನ್ ಸಾಹೇಬ್ ಖುರ್‌ಆನ್ ಪಠಿಸಿದರು. ಮುಹಮ್ಮದ್ ಯೂಸುಫ್ ಸ್ವಾಗತಿಸಿದರು. ಎಂ. ಪಿ. ಇಬ್ರಾಹಿಂ ಸಾಹೇಬ್, ಎನ್. ಅಬ್ದುರ್ರಹೀಂ ಸಾಹೇಬ್, ಯು. ಎಂ. ಎ. ಬಶೀರ್ ಅಹ್ಮದ್ ಸಾಹೇಬ್, ಸಿದ್ದೀಖ್ ಅಶ್ರಫಲೀ ಸಾಹೇಬ್, ಎಂ. ಉಬೈದುಲ್ಲಾ ಸಾಹೇಬ್ ಮತ್ತು ಕೆ. ಎಂ. ಆಲಿ ಸಾಹೇಬ್ ಶುಭಕೋರಿ ಮಾತನಾಡಿದರು.

ಮೌಲವಿ ನಾಸಿರ್ ಅಹ್ಮದ್ ಸಾಹೇಬ್, ಮೌಲವಿ ಮೊೖದಿನ್ ಕುಟ್ಟಿ ಸಾಹೇಬ್ ಮತ್ತು ಎನ್. ಕುಞ್ಞಹ್ಮದ್ ಮಾಸ್ಟರ್ ಸಾಹೇಬ್ ಉಪದೇಶವಿತ್ತರು. ಎಂ. ಪಿ. ಇಬ್ರಾಹಿಂ ಸಾಹೇಬ್ ಕೃತಜ್ಞತೆ ಸಲ್ಲಿಸಿದರು. ಮೌಲವಿ ನಾಸಿರ್ ಅಹ್ಮದ್ ಸಾಹೇಬ್ ದುಆ ಮಾಡಿದರು.

ಕರ್ನಾಟಕ ರಾಜ್ಯ ಅಮೀರ್ ಜನಾಬ್ ಮುಹಮ್ಮದ್ ಶಫೀಉಲ್ಲಾಹ್ ಸಾಹೇಬ್ ಮತ್ತು ಕೇರಳ ರಾಜ್ಯ ಅಮೀರ್ ಜನಾಬ್ ಎ. ಪಿ. ಕುಞ್ಞಾಮು ಸಾಹೇಬ್ ಕಳುಹಿಸಿದ ಸಂದೇಶಗಳನ್ನು ಓದಿ ಹೇಳಲಾಯಿತು. ಮಂಜೇಶ್ವರ, ಮೊಗ್ರಾಲ್, ಪಯಂಗಾಡಿ, ಕಣ್ಣೂರ್, ಮಡಿಕೇರಿ ಎಂಬಿತ್ಯಾದಿ ಜಮಾಅತುಗಳ ಅಹ್ಮದಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

# ಬೋಸ್ನಿಯಾದಲ್ಲಿ ಪ್ರಥಮ ಅಹ್ಮದಿಯಾ ಮಸ್ಜಿದ್

1-3-2003ರಂದು ಬೋಸ್ನಿಯಾದಲ್ಲಿ ಪ್ರಥಮ ಅಹ್ಮದಿಯಾ ಮುಸ್ಲಿಂ ಮಸೀದಿ "ಮಸ್ಜಿದ್ ಬೈತುಸ್ಸಲಾಮ್" ಉದ್ಘಾಟನೆಗೊಂಡಿದೆ. ಮಸೀದಿಯನ್ನೊಳಗೊಂಡ ನಾಲ್ಕಂತಸ್ತಿನ ಕಟ್ಟಡದಲ್ಲಿ ಪುರುಷರಿಗೆ ಮತ್ತು ಸ್ತ್ರೀಯರಿಗೆ ಪ್ರತ್ಯೇಕ ಪ್ರತ್ಯೇಕ ನಮಾಝ್ ಹಾಲ್‌ಗಳು, ಗ್ರಂಥಾಲಯ, ಅತಿಥಿಗೃಹ ಇತ್ಯಾದಿ ಸೌಕರ್ಯಗಳಿವೆ.

ಅಹ್ಮದಿಯಾ ವಾರ್ತೆಗಳು

# ಆಫ್ರಿಕದಲ್ಲಿ ಪ್ರಥಮ ಮುಸ್ಲಿಂ ಅಹ್ಮದಿಯಾ ರೇಡಿಯೋ ಸ್ಟೇಶನ್ ಸ್ಥಾಪನೆ

ಆಫ್ರಿಕದ ಬೋರ್‌ಕೀನಾಫಾಸೋದಲ್ಲಿ ಅಹ್ಮದಿಯಾ ಸಂಘಟನೆಯ ವತಿಯಿಂದ ಸ್ಥಾಪಿಸಲ್ಪಟ್ಟ ಪ್ರಥಮ ಧಾರ್ಮಿಕ ರೇಡಿಯೋ ಸ್ಟೇಶನ್ 30-12-2002ರಂದು ಉದ್ಘಾಟಿಸಲ್ಪಟ್ಟಿತು.

ಅಂದು ಪೂರ್ವಾಹ್ನ 10 ಗಂಟೆಗೆ ಜರಗಿದ ಉದ್ಘಾಟನಾ ಕಾರ್ಯಕ್ರಮ ಪವಿತ್ರ ಖುರ್‌ಆನಿನ ಪಠನದೊಂದಿಗೆ ಆರಂಭವಾಯಿತು. ಲಂಡನಿನ ಅಬ್ದುಲ್ ಗನಿ ಜಹಾಂಗೀರ್ ಸಾಹೇಬ್, ಐವರಿಕೋಸ್ಟ್‌ನ ಅಹ್ಮದಿಯಾ ಪ್ರಚಾರಕರಾದ ಉಮರ್ ಎಂ. ಕೆ. ಬಾಲಿ ಸಾಹೇಬ್ ಮೊದಲಾದವರು ಭಾಷಣ ಮಾಡಿದರು.

ಈ ಕಾರ್ಯಕ್ರಮದಲ್ಲಿ ಗಣ್ಯ ಧರ್ಮ ಪಂಡಿತರು ಮತ್ತು ಪ್ರಮುಖ ಜನಪ್ರತಿನಿಧಿಗಳು ಭಾಗವಹಿಸಿದರು.

ಈ ರೇಡಿಯೋ ಕೇಂದ್ರದಿಂದ ಪ್ರತಿದಿನ 13 ಗಂಟೆಗಳ ಕಾಲ ಫ್ರೆಂಚ್, ಮೋರೇ, ಜೋಲಾ ಎಂಬೀ ಭಾಷೆಗಳಲ್ಲಿ ಕಾರ್ಯಕ್ರಮ ಬಿತ್ತರಿಸಲ್ಪಡುತ್ತದೆ.

# ಶೌರ್ಯ ಪ್ರಶಸ್ತಿ



ಪಯಂಗಾಡಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಮುಈನ್ ಅಹ್ಮದ್ ಸಿದ್ದೀಖ್ (ಪ್ರಾಯ 14 ವರ್ಷ)ನಿಗೆ ಕೇರಳ ರಾಜ್ಯ ಮಕ್ಕಳ ಕ್ಷೇಮಾಭಿವೃದ್ಧಿ ಸಮಿತಿಯ ವತಿಯಿಂದ 13-11-2002 ರಂದು ಶೌರ್ಯ ಪ್ರಶಸ್ತಿ ಲಭಿಸಿರುತ್ತದೆ. ರಾಜ್ಯದಾದ್ಯಂತ ಆಯ್ಕೆಗೊಂಡ 10 ಮಕ್ಕಳ ಪೈಕಿ ಮುಈನ್ ಅಹ್ಮದ್ ಸಿದ್ದೀಖ್ ಒಬ್ಬನಾಗಿದ್ದಾನೆ.

ಏಷ್ಯಾನೆಟ್ ವತಿಯಿಂದ Black Thunder Asianet Bravery Award ಹಾಗೂ 5,000 ರೂಪಾಯಿಗಳ ನಗದು ಬಹುಮಾನ ಸಹ ಮುಈನ್ ಅಹ್ಮದ್‌ನಿಗೆ ಸಿಕ್ಕಿರುತ್ತದೆ.

ನೀರಿನಿಂದ ತುಂಬಿದ್ದ ಬಾವಿಯೊಳಗೆ ತನ್ನ 10 ವರ್ಷದ ಪ್ರಾಯದ ತಮ್ಮ ಬಿದ್ದು ಮುಳುಗುತ್ತಿರುವುದನ್ನು ಕಂಡ ಮುಈನ್ ತನ್ನ ಪ್ರಾಣವನ್ನು ಲೆಕ್ಕಿಸದೆ ಬಾವಿಗೆ ಹಾರಿ ತಮ್ಮನ ಪ್ರಾಣವನ್ನು ರಕ್ಷಿಸಿದ್ದನು. ಮುಈನ್ ಅಹ್ಮದ್, ನಾಸಿರ್ ಅಹ್ಮದ್ ಸಿದ್ದೀಖ್ ಸಾಹೇಬರ ಪುತ್ರನಾಗಿದ್ದಾನೆ.



# ಪ್ರತಿಭೆ

ಕ್ಯಾಲಿಕಟ್ ಯುನಿವರ್ಸಿಟಿಯ ಪಂಚವರ್ಷ ಎಲ್. ಎಲ್. ಬಿ. ಕೋರ್ಸಿನ ಫೈನಲ್ ಪರೀಕ್ಷೆಯಲ್ಲಿ ಕೋಝಿಕ್ಕೋಡ್ ಅಹ್ಮದಿಯಾ ಮುಸ್ಲಿಂ ಜಮಾಅತಿನ ಮುನೀರ್ ಅಹ್ಮದ್ ದ್ವಿತೀಯ ರ್‍ಯಾಂಕ್ ಗಳಿಸಿದ್ದಾರೆ. ಕೋಝಿಕ್ಕೋಡ್ ಜಮಾಅತಿನ ಕ್ರಿಯಾಶೀಲ ಸದಸ್ಯರಾಗಿರುವ ಮುನೀರ್ ಅಹ್ಮದ್ ಜಮಾಅತಿನ ನಾಇಬ್ ನಾಝಿಂ ಅತ್‌ಫಾಲ್ ಆಗಿದ್ದಾರೆ. ಅವರು ಅಹ್ಮದಿಯಾ ಕೇರಳ ರಾಜ್ಯ ಸಮಿತಿಯ ಉಮೂರೆ ಆಮ್ಮ ಕಾರ್ಯದರ್ಶಿ ಜನಾಬ್ ಕೆ. ಎಂ. ಅಹ್ಮದ್ ಕೋಯಾ ಸಾಹೇಬರ ಹಿರಿಯ ಪುತ್ರರಾಗಿದ್ದಾರೆ.

ಸವಿ ನೆನಪು

# ಬಶೀರ್ ಅಹ್ಮದ್ ಓರ್ಚರ್ಡ್ ಸಾಹೇಬ್



ಅಹ್ಮದಿಯಾ ಜಮಾಅತಿನ ಪ್ರಥಮ ಯುರೋಪ್ಯನ್ ಅಹ್ಮದೀ ಮುಸ್ಲಿಂ ಮಿಶನರಿಯಾಗಿದ್ದ ಬಶೀರ್ ಅಹ್ಮದ್ ಓರ್ಚರ್ಡ್ ಸಾಹೇಬರು 8-7-2002 ರಂದು ತನ್ನ 83ನೇ ವಯಸ್ಸಿನಲ್ಲಿ ಲಂಡನಿನಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಆರ್ಥೋಡಾಕ್ಸ್ ಕ್ರಿಸ್ತೀಯ ಕುಟುಂಬದಲ್ಲಿ ಇಂಗ್ಲೆಂಡಿನ DEVION ಎಂಬಲ್ಲಿ 26-4-1920ರಂದು ಅವರು ಜನಿಸಿದರು. ದ್ವಿತೀಯ ಜಾಗತಿಕ ಯುದ್ಧದಲ್ಲಿ ವಿವಿಧ ಸ್ಥಳಗಳಲ್ಲಿ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದ ಕಾಲದಲ್ಲಿ ಅವರ ದಳದಲ್ಲಿದ್ದ ಮೌಲವಿ ಅಬ್ದುರ್ರಹ್ಮಾನ್ ಸಾಹೇಬ್ ಎಂಬ ಅಹ್ಮದೀ ಮೂಲಕ ಅವರಿಗೆ ಪ್ರಥಮವಾಗಿ ಅಹ್ಮದಿಯತಿನ ಸಂದೇಶ ಲಭಿಸಿತು. ಅಹ್ಮದಿಯಾ ಜಮಾಅತಿನ ಸ್ಥಾಪಕರ ಗ್ರಂಥವಾದ "ದಿ ಫಿಲಾಸಫಿ ಆಫ್ ಟೀಚಿಂಗ್ಸ್ ಆಫ್ ಇಸ್ಲಾಂ" ಓದಿದ ಅವರು ಇಸ್ಲಾಂ ಧರ್ಮದೆಡೆಗೆ ಆಕರ್ಷಿತರಾದರು. ಅವರು ಖಾದಿಯಾನ್‌ಗೆ ಹೋಗಿ ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರನ್ನೂ ಮುಫ್ತೀ ಮುಹಮ್ಮದ್ ಸಾದಿಖ್ ಸಾಹೇಬರನ್ನೂ ಭೇಟಿಯಾಗಿ ಜಮಾಅತಿನ ಬಗ್ಗೆ ಹೆಚ್ಚು ಅಧ್ಯಯನ ಮಾಡಿ, ತಡಮಾಡದೆ ಅಹ್ಮದಿಯತನ್ನು ಸ್ವೀಕರಿಸಿದರು.

1945 ರಲ್ಲಿ ದ್ವಿತೀಯ ಜಾಗತಿಕ ಯುದ್ಧ ಕೊನೆಗೊಂಡಾಗ, ಅಂದು ಲಂಡನ್ ಮಸೀದಿ ಇಮಾಮರಾಗಿದ್ದ ಮೌಲಾನಾ ಜಲಾಲುದ್ದೀನ್ ಶಮ್ಸ್‌ರ ಕೈಕೆಳಗೆ ಅವರು ಅಹ್ಮದಿಯಾ ಮಿಶನರಿಯಾಗಿ ಸೇವೆ ಆರಂಭಿಸಿದರು. ಅಹ್ಮದಿಯತ್ ಸ್ವೀಕರಿಸಿದ ಬಳಿಕ ಅವರು ತನ್ನ ಜೀವನವನ್ನು ಜಮಾಅತಿಗೋಸ್ಕರ ಅರ್ಪಿಸಿದರು. ಅವರು ಗಯಾನ, ಟ್ರಿನಿಡಾಡ್, ಸ್ಕಾಟ್‌ಲೇಂಡ್, ಆಕ್ಸಫರ್ಡ್ ಎಂಬಲ್ಲೆಲ್ಲಾ ಮಿಶನರಿ ಆಗಿ ಸೇವೆಸಲ್ಲಿಸಿದರು. ಜಮಾಅತಿನ ಇಂಗ್ಲಿಷ್ ಮಾಸ ಪತ್ರಿಕೆಯಾದ Review of Religions ನ ಸಂಪಾದಕರಾಗಿ ಅವರು 9 ವರ್ಷಕಾಲ ಸೇವೆಸಲ್ಲಿಸಿದ್ದರು. ಅವರು ತನ್ನ ಸೊತ್ತಿನ ಮೂರನೇ ಒಂದು ಅಂಶವನ್ನು ಜಮಾಅತಿಗೆ ವಸೀಯತ್ ಮಾಡಿದ್ದರು.

1957 ರಲ್ಲಿ ಅವರು ಭಾರತದ ವಿವಿಧ ಕಡೆಗಳಲ್ಲಿ ಅಹ್ಮದಿಯಾ ಜಮಾಅತಿನ ಘಟಕಗಳನ್ನು ಸಂದರ್ಶಿಸಿದ್ದಾರೆ. ದೇವಭಕ್ತರಾಗಿದ್ದ ಅವರು ಜೀವಿತ ಪರಿಶುದ್ಧಿ ಹಾಗೂ ಆತ್ಮಾನುಭೂತಿಯ ಕುರಿತು ಅನೇಕ ಲೇಖನಗಳನ್ನು ಬರೆದಿದ್ದಾರೆ. ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

# ಮಿರ್ಝಾ ಮುಝಫರ್ ಅಹ್ಮದ್ ಸಾಹೇಬ್



ಹಝ್‌ರತ್ ವಾಗ್ದತ್ತ ಮಸೀಹರ ಪೌತ್ರ ಹಾಗೂ ಮಿರ್ಝಾ ಬಶೀರ್ ಅಹ್ಮದ್ ಸಾಹೇಬರ ಹಿರಿಯ ಪುತ್ರನಾದ ಮಿರ್ಝಾ ಮುಝಫರ್ ಅಹ್ಮದ್ ಸಾಹೇಬರು 22-7-2002 ರಂದು ತನ್ನ 88ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಪ್ರಸಿದ್ಧ ಅರ್ಥಶಾಸ್ತ್ರಜ್ಞರಾಗಿದ್ದ ಮುಝಫರ್ ಅಹ್ಮದ್ ಸಾಹೇಬರು ಅಮೇರಿಕಾ ಅಹ್ಮದಿಯಾ ಘಟಕದ ಅಮೀರ್ ಆಗಿದ್ದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಖಾದಿಯಾನ್‌ನಲ್ಲಿ ಪಡೆದ ಅವರು ಓಕ್ಸ್‌ಫರ್ಡ್ ಯುನಿವರ್ಸಿಟಿಯಿಂದ ಅರ್ಥಶಾಸ್ತ್ರದಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಗಳಿಸಿದರು. ಅವರು 1974ರಲ್ಲಿ ಜಾಗತಿಕ ಬೇಂಕಿನ ಡೈರೆಕ್ಟರಾಗಿ ಸೇವೆಸಲ್ಲಿಸಿದರು. IMF (International Monetary Fund)ನ ಎಕ್ಸಿಕ್ಯೂಟಿವ್ ಸೆಕ್ರೆಟರಿಯಾಗಿ ದೀರ್ಘಕಾಲ ಸೇವೆಸಲ್ಲಿಸಿದ ನಂತರ 1984ರಲ್ಲಿ ಅವರು ನಿವೃತ್ತರಾದರು. ಪಾಕಿಸ್ಥಾನದ ಅಧ್ಯಕ್ಷರ ಆರ್ಥಿಕ ಸಲಹೆಗಾರರಾಗಿಯೂ ಪಾಕಿಸ್ಥಾನ ಸರಕಾರದ ಆರ್ಥಿಕ ಕಾರ್ಯದರ್ಶಿಯಾಗಿಯೂ ಅವರು ದುಡಿದಿದ್ದರು.

1989ರಿಂದ ಅವರು ಅಮೇರಿಕಾ ಅಹ್ಮದಿಯಾ ಜಮಾಅತಿನ ಅಮೀರಾಗಿ ಆಯ್ಕೆಯಾದರು.

"ಮಸ್ಜಿದ್ ಬೈತುಲ್ ರಹ್ಮಾನ್" ಎಂಬ ಅಮೆರಿಕದ ಬೃಹತ್ತಾದ ಕೇಂದ್ರ ಮಸೀದಿ ಅವರ ಅವಿಶ್ರಾಂತ ಪ್ರಯತ್ನದ ಫಲವಾಗಿದೆ. ಧನತ್ಯಾಗ ರಂಗದಲ್ಲಿ ಅಮೆರಿಕ ಜಮಾಅತನ್ನು ಅಗ್ರಸ್ಥಾನಕ್ಕೆ ತಲಪಿಸಿದ ಮುಝಫರ್ ಅಹ್ಮದ್ ಸಾಹೇಬರ ಪರಿಶ್ರಮ ಪ್ರಶಂಸಾರ್ಹವಾಗಿದೆ.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

# ಮಲಿಕ್ ಸಲಾಹುದ್ದೀನ್ ಸಾಹೇಬ್



ಸುಪ್ರಸಿದ್ಧ ಅಹ್ಮದಿಯಾ ಚರಿತ್ರೆಕಾರ ಮತ್ತು ಗಣ್ಯ ಧರ್ಮ ಪಂಡಿತರಾದ ಜನಾಬ್ ಮಲಿಕ್ ಸಲಾಹುದ್ದೀನ್ ಸಾಹೇಬ್ ಎಂ. ಎ. 2-2-2003 ರಂದು ಖಾದಿಯಾನಿನಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ವಾಗ್ದತ್ತ ಮಸೀಹರ ಸುಮಾರು 60 ಮಂದಿ ಸಹಾಬರ ಜೀವನ ಚರಿತ್ರೆಗಳು ಅಡಕವಾದ "ಅಸ್‌ಹಾಬೆ ಅಹ್ಮದ್"ಎಂಬ ಗ್ರಂಥ ಸಂಕಲನ ಮಲಿಕ್ ಸಾಹೇಬರ ಪ್ರಧಾನ ಕೃತಿಯಾಗಿದೆ.

ಅವರು ಭಾರತ ಅಹ್ಮದಿಯಾ ಮುಸ್ಲಿಂ ಜಮಾಅತಿನ ಅನೇಕ ಇಲಾಖೆಗಳಲ್ಲಿ ಮುಖ್ಯಾಧಿಕಾರಿಯಾಗಿ ಸೇವೆಸಲ್ಲಿಸಿದ್ದರು. ಭಾರತದ ವಿಭಜನೆಗೆ ಪೂರ್ವದಲ್ಲಿ ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರ ಆಪ್ತ ಕಾರ್ಯದರ್ಶಿಯಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ. ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

# ಮೌಲಾನಾ ಮುಹಮ್ಮದ್ ಅಬುಲ್‌ವಫಾ ಸಾಹೇಬ್



ಕೇರಳ ಅಹ್ಮದಿಯಾ ಮುಸ್ಲಿಂ ಜಮಾಅತಿನ ಮಾಜಿ ಚೀಫ್ ಮಿಶನರಿ ಜನಾಬ್ ಮೌಲಾನಾ ಮುಹಮ್ಮದ್ ಅಬುಲ್‌ವಫಾ ಸಾಹೇಬರು ಕೋಝಿಕ್ಕೋಡ್‌ನಲ್ಲಿ 13-10-2002ರಂದು ತನ್ನ 84ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಮೌಲಾನಾ ಸಾಹೇಬರು ಸುಮಾರು 50ವರ್ಷಗಳ ಕಾಲ ಅಹ್ಮದಿಯಾ ಪ್ರಚಾರಕರಾಗಿ ಸೇವೆಸಲ್ಲಿಸಿದ್ದಾರೆ. ಭಾರತ - ಪಾಕಿಸ್ತಾನ ವಿಭಜನೆಯ ಸಂದರ್ಭದಲ್ಲಿ ಅಹ್ಮದಿಯಾ ಪ್ರಧಾನ ಕೇಂದ್ರಸ್ಥಾನವಾದ ಖಾದಿಯಾನನ್ನು ಸಂರಕ್ಷಿಸಲು ಆರಿಸಲ್ಪಟ್ಟ 313 ಮಂದಿಯಲ್ಲಿ ಮೌಲಾನಾ ಸಾಹೇಬರೂ ಸೇರಿದ್ದರು. ಸುಮಾರು 10 ವರ್ಷಕಾಲ ಅವರು ಕೇರಳ ಅಹ್ಮದಿಯಾ ಮುಖವಾಣಿಯಾದ "ಸತ್ಯದೂತನ್" ಮಾಸಪತ್ರಿಕೆಯ ಸಂಪಾದಕರೂ ಆಗಿದ್ದರು. ಕೊಡಿಯತ್ತೂರ್‌ನಲ್ಲಿ 28-5-1989 ರಂದು ಅಹ್ಮದಿಯಾ ಮುಸ್ಲಿಂ ಜಮಾಅತ್ ಮತ್ತು ಕೊಡಿಯತ್ತೂರಿನ ಅಂಜುಮನ್ ಇಶಾಅತೆ ಇಸ್ಲಾಂ ಸಂಘದ ಮಧ್ಯೆ ನಡೆದ ಮುಬಾಹಲ ಪ್ರಾರ್ಥನೆಯ ನೇತೃತ್ವವನ್ನು ಮೌಲಾನಾ ಸಾಹೇಬರು ವಹಿಸಿದ್ದರು. ಜಗತ್ತಿನ 100 ಭಾಷೆಗಳಲ್ಲಿ ಖುರ್‌ಆನಿನ ಭಾಷಾಂತರ ಮಾಡುವ ಅಹ್ಮದಿಯಾ ಜಮಾಅತಿನ ಯೋಜನೆ ಪ್ರಕಾರ ಮಲಯಾಳಂ ಭಾಷೆಯಲ್ಲಿ ಖುರ್‌ಆನ್ ಅನುವಾದವನ್ನು ಮಾಡಿದವರು ಮೌಲಾನಾ ಸಾಹೇಬರಾಗಿದ್ದಾರೆ. ಅನೇಕ ಲೇಖನಗಳನ್ನೂ ಕೆಲವು ಪುಸ್ತಕಗಳನ್ನೂ ಬರೆದ ಮೌಲಾನಾ ಸಾಹೇಬರು ಉತ್ತಮ ವಾಗ್ಮಿಯೂ ಆಗಿದ್ದರು.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

# ಡಾ। ಬಿ. ಮನ್ಸೂರ್ ಅಹ್ಮದ್ ಸಾಹೇಬ್



ಕೇರಳ ಅಹ್ಮದಿಯಾ ಮುಸ್ಲಿಂ ಜಮಾಅತಿನ ಜನರಲ್ ಸೆಕ್ರೆಟರಿ ಹಾಗೂ ಮಟ್ಟನ್ನೂರ್ ಘಟಕದ ಅಧ್ಯಕ್ಷರಾಗಿದ್ದ ಜನಾಬ್ ಡಾ। ಬಿ. ಮನ್ಸೂರ್ ಅಹ್ಮದ್ ಸಾಹೇಬರು ಮಾರ್ಚ್ 4ರಂದು ತನ್ನ 61ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಅವರು ಕೇರಳ ಅಹ್ಮದಿಯಾ ಮುಸ್ಲಿಂ ಜಮಾಅತಿನ ಅಮೀರ್ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಫಝ್ಲೆ ಉಮರ್ ಎಜ್ಯುಕೇಶನ್ ಬೋರ್ಡ್‌ನ ವೈಸ್ ಚೇರ್‌ಮ್ಯಾನ್ ಸಹ ಆಗಿದ್ದರು. ಮಟ್ಟನ್ನೂರ್‌ನ ಎಂ. ಐ.ಎಂ. ಆಸ್ಪತ್ರೆಯ ಮಾಲಕರಾಗಿದ್ದ ಅವರು ಬಹಳ ಉದಾರಿಯಾಗಿದ್ದರು.

ಮಸೀದಿಗಳ ನಿರ್ಮಾಣ ಕಾರ್ಯದಲ್ಲಿ ಅವರು ಬಹಳ ಆಸಕ್ತಿ ವಹಿಸುತ್ತಿದ್ದರು. ಅವರು ಮಟ್ಟನ್ನೂರ್‌ನಲ್ಲಿ ನಿರ್ಮಿಸುತ್ತಿದ್ದ ಮಸೀದಿಯ ಕೆಲಸ ಕೊನೆಯ ಹಂತದಲ್ಲಿದೆ. ಕೂಡಾಳಿಯಲ್ಲಿರುವ ಫಝ್ಲೆ ಉಮರ್ ಇಂಗ್ಲಿಷ್ ಮಾಧ್ಯಮ ಶಾಲೆಯ ವಿಶಾಲವಾದ ಸ್ಥಳ ಡಾಕ್ಟರ್ ಸಾಹೇಬರ ಕೊಡುಗೆಯಾಗಿದೆ.

"ಯುಗರಶ್ಮಿ" ಯ ಹಿತೈಷಿಯಾಗಿದ್ದ ಡಾಕ್ಟರ್ ಸಾಹೇಬರು 20-1-1991ರಂದು "ಯುಗರಶ್ಮಿ" ಅಹ್ಮದಿಯಾ ಶತಾಬ್ದ ವಿಶೇಷ ಸಂಚಿಕೆಯನ್ನು ಮಂಗಳೂರಿನಲ್ಲಿ ಬಿಡುಗಡೆಗೊಳಿಸಿದ್ದರು.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

ಸವಿ ನೆನಪು

# ಮುಹಮ್ಮದ್ ಸಿಬ್‌ಗತುಲ್ಲಾಹ್ ಸಾಹೇಬ್

ಕರ್ನಾಟಕ ರಾಜ್ಯ ಮಜ್ಲಿಸ್ ಅನ್ಸಾರುಲ್ಲಾಹ್ ನಾಝಿಂ ಅಲ್‌ಲಾ ಹಾಗೂ ಕರ್ನಾಟಕ ಅಮೀರ್ ಜನಾಬ್ ಶಫೀಉಲ್ಲಾ ಸಾಹೇಬರ ಹಿರಿಯ ಸಹೋದರ ಜನಾಬ್ ಮುಹಮ್ಮದ್ ಸಿಬ್‌ಗತುಲ್ಲಾಹ್ ಸಾಹೇಬರು 6-2002 ರಂದು ಬೆಂಗಳೂರಿನಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್"). ಅವರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ಅನೇಕ ವರ್ಷಗಳ ಕಾಲ ಅವರು ಕರ್ನಾಟಕ ಮಜ್ಲಿಸ್ ಅನ್ಸಾರುಲ್ಲಾಹ್ ನಾಝಿಂ ಅಲ್‌ಲಾ ಆಗಿ ಸೇವೆಸಲ್ಲಿಸಿದ್ದಾರೆ. ಅವರು ಹಲವು ವರ್ಷಗಳಿಂದ, ವರ್ಷದಲ್ಲಿ ಸುಮಾರು ಒಂದು ತಿಂಗಳ ಕಾಲ ಲಂಡನ್ನಿನಲ್ಲಿರುವ ಅಹ್ಮದಿಯಾ ಜಮಾಅತಿನ ಖಲೀಫರ ಕಛೇರಿಯಲ್ಲಿಯೂ ಸೇವೆ ಸಲ್ಲಿಸುತ್ತಿದ್ದರು

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತನ್ನು ದಯಪಾಲಿಸಲಿ - ಆಮೀನ್.

# ಜಿ. ಎಸ್. ಅಹ್ಮದ್ ಸಾಹೇಬ್



ಮಡಿಕೇರಿ ಅಹ್ಮದಿಯಾ ಜಮಾಅತಿನ ಅಗ್ರಗಣ್ಯ ಸ್ಥಾಪಕ ಸದಸ್ಯರಲ್ಲಿ ಓರ್ವರಾದ ಜನಾಬ್ ಜಿ. ಎಸ್. ಅಹ್ಮದ್ ಸಾಹೇಬರು 10-8-2002 ರಂದು ತನ್ನ 84ನೇ ವಯಸ್ಸಿಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಮಂಜೇಶ್ವರದ ಜನಾಬ್ ಯು. ಎಂ. ಎ. ಮುಹ್ಯುದ್ದೀನ್ ಸಾಹೇಬ್ 1950 ರಲ್ಲಿ ಒಂದು ದಿನ ಮಡಿಕೇರಿಯಲ್ಲಿ ತನ್ನೊಬ್ಬ ಊರಿನ ಪರಿಚಯದ ವ್ಯಕ್ತಿಯೊಂದಿಗೆ ಇಮಾಂ ಮಹ್‌ದಿಯವರ ಆಗಮನದ ಕುರಿತು ಮತ್ತು ಈಸಾನಬಿ (ಅ)ರ ಮರಣದ ಕುರಿತು ಮಾತನಾಡುತ್ತಿದ್ದಾಗ ಅದನ್ನು ಆಲಿಸಿ ಆಕರ್ಷಿತರಾದ ಜ| ಜಿ. ಎಸ್. ಅಹ್ಮದ್ ಸಾಹೇಬರು ಮುಹ್ಯುದ್ದೀನ್ ಸಾಹೇಬರ ಪರಿಚಯ ಮಾಡಿಕೊಂಡು ಅಹ್ಮದಿಯತಿನ ಬಗ್ಗೆ ಹೆಚ್ಚಿನ ಚರ್ಚೆ ಮಾಡಿದರು. ಅಹ್ಮದಿಯತಿನ ಸತ್ಯತೆಯನ್ನು ತಿಳಿದುಕೊಂಡ ಅವರು ತನ್ನ ಆಪ್ತ ಸ್ನೇಹಿತರಿಗೂ ಅಹ್ಮದಿಯಾ ಸಂದೇಶವನ್ನು ತಲುಪಿಸಿದರು.

1951 ಎಪ್ರಿಲ್ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ಜರಗಿದ ಕೇರಳ ಅಹ್ಮದಿಯಾ ಸಮ್ಮೇಳನದ ಕುರಿತು ತಿಳಿದಾಗ ಸಮ್ಮೇಳನದಲ್ಲಿ ಭಾಗವಹಿಸಲು ಜಿ. ಎಸ್. ಅಹ್ಮದ್ ಸಾಹೇಬರೂ ತನ್ನ ಮಿತ್ರರಾದ ಪಿ. ಅಹ್ಮದಲಿ ಸಾಹೇಬ್, ಬಿ. ಎಚ್. ಇಸ್ಮಾಈಲ್ ಸಾಹೇಬ್‌ರವರೂ ತೀರ್ಮಾನಿಸಿದರು. ಮಂಜೇಶ್ವರದ ಎಂ. ಅಬ್ದುರ್ರಶೀದ್ ಸಾಹೇಬರ ನೇತೃತ್ವದಲ್ಲಿ ಅವರು ಮೂವರೂ ಮುಹ್ಯುದ್ದೀನ್ ಸಾಹೇಬರ ಜೊತೆಯಲ್ಲಿ ಕಲ್ಲಿಕೋಟೆಗೆ ಹೋದರು. ಸಮ್ಮೇಳನದಲ್ಲಿ ಭಾಗವಹಿಸಿದ ಅವರು ಮೌಲಾನಾ ಬಿ. ಅಬ್ದುಲ್ಲಾ ಸಾಹೇಬ್ ಎಚ್. ಎ. ಮೂಲಕ ಬೈಅತ್ ಪ್ರತಿಜ್ಞೆ ಮಾಡಿ ಅಹ್ಮದಿಯಾ ಜಮಾಅತಿಗೆ ಸೇರಿದರು.

ಅನಂತರ ಮಡಿಕೇರಿಯಲ್ಲಿ ಅಹ್ಮದಿಯತಿನ ಬಗ್ಗೆ ಚರ್ಚೆ ಬಿಸಿಯೇರಿತು. ಅಹ್ಮದೀ ಮತ್ತು ಅಹ್ಮದಿಯೇತರ ಮತ ಪಂಡಿತರೊಳಗೆ ಒಂದು ವಾದ - ಪ್ರತಿವಾದ ನಡೆಸಲು ತೀರ್ಮಾನವಾಯಿತು. ಕೇರಳದ ಪ್ರಸಿದ್ಧ ಮತ ಪಂಡಿತರುಗಳಾದ ಪದಿ ಅಬ್ದುಲ್ ಖಾದಿರ್ ಮುಸ್ಲಿಯಾರ್ ಮತ್ತು ಇ. ಕೆ. ಅಬೂಬಕರ್ ಮುಸ್ಲಿಯಾರ್ ಕಿತಾಬ್‌ಗಳಿಂದ ತುಂಬಿದ ವ್ಯಾನ್ ಸಹಿತ ಅಹ್ಮದಿಯಾ ವಿರುದ್ಧವಾಗಿ ವಾದಿಸಲು ಮಡಿಕೇರಿಗೆ ಬಂದು ತಲುಪಿದರು. ಅಹ್ಮದಿಯಾ ಜಮಾಅತಿನ ಪರವಾಗಿ ವಾದಿಸಲು ಮೌಲಾನಾ ಬಿ. ಅಬ್ದುಲ್ಲಾ ಸಾಹೇಬ್ ಎಚ್. ಎ. ಆಗಮಿಸಿದರು. ಮೌಲ್ವಿ ಅಬುಲ್ ವಫಾ ಸಾಹೇಬ್ ಮತ್ತು ಮೌಲ್ವಿ ಅಹ್ಮದ್ ರಶೀದ್ ಸಾಹೇಬರು ಅವರ ಜೊತೆಗಿದ್ದರು. ಮಡಿಕೇರಿಯ ಗಣ್ಯ ವ್ಯಕ್ತಿಯಾದ ಖಾನ್ ಬಹಾದುರ್ ಅಬ್ದುರ್ರಹ್ಮಾನ್ ಖಾನ್‌ರವರ ಅಧ್ಯಕ್ಷತೆಯಲ್ಲಿ ಮಡಿಕೇರಿ ಜುಮಾ ಮಸೀದಿಯಲ್ಲಿ 1951 ಮೇ 28 ಮತ್ತು 29 ರಂದು ವಾದ-ಪ್ರತಿವಾದ ನಡೆಯಿತು. ತತ್ಫಲವಾಗಿ ಜಿ. ಎಸ್. ಅಹ್ಮದ್ ಸಾಹೇಬರ ಸಹೋದರರಾದ ಜಿ. ಕೆ. ಫಕ್ರುದ್ದೀನ್ ಸಾಹೇಬ್, ಜಿ. ಕೋಯ ಹಸನ್ ಸಾಹೇಬ್, ಜಿ. ಹಸನ್ ಅಬ್ಬಾಸ್ ಸಾಹೇಬ್‌ರವರೂ ಬಿ. ಫಕ್ರುದ್ದೀನ್ ಸಾಹೇಬ್, ಬಿ. ಎಚ್. ಮುಹಮ್ಮದ್ ಸಾಹೇಬ್ ಮೊದಲಾದವರೂ ಅಹ್ಮದಿಯಾ ಜಮಾಅತಿಗೆ ಸೇರಿದರು.

1955ರಲ್ಲಿ ಧಫನ ಭೂಮಿಯ ಸಮಸ್ಯೆ ಎದುರಾಯಿತು. ಜಿ. ಹಸನ್ ಅಬ್ಬಾಸ್ ಸಾಹೇಬರು ಮರಣ ಶಯ್ಯೆಯಲ್ಲಿದ್ದಾರೆಂದು ತಿಳಿದ ಅಹ್ಮದಿಯೇತರ ಮುಸ್ಲಿಮರು, ತಾವು ಅಹ್ಮದಿಯರಿಗೆ ಕಬರಸ್ಥಾನ ನೀಡಲಾರೆವೆಂದು ಸರಕಾರಿ ಅಧಿಕಾರಿಗೆ ತಿಳಿಸಿದರು. ತಮಗೆ ಪ್ರತ್ಯೇಕವಾದ ಕಬರಸ್ಥಾನ ಒದಗಿಸಬೇಕೆಂದು ಅಹ್ಮದಿಯಾ ಪ್ರತಿನಿಧಿಯಾಗಿ ಜಿ. ಎಸ್. ಅಹ್ಮದ್ ಸಾಹೇಬರು ಜಿಲ್ಲಾಧಿಕಾರಿಗೆ ಬೇಡಿಕೆ ಸಲ್ಲಿಸಿ ಅದರಲ್ಲಿ ಸಫಲರಾದರು. ಅವರು ಹಲವು ವರ್ಷಗಳ ಕಾಲ ಮಡಿಕೇರಿ ಜಮಾಅತಿನ ಅಧ್ಯಕ್ಷರಾಗಿದ್ದರು.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

ಸವಿ ನೆನಪು

# ಎಂ. ಅಬ್ದುಲ್ಲ ತೀಫ್ ಸಾಹೇಬ್



ಮೊಗ್ರಾಲ್ ಅಹ್ಮದಿಯಾ ಜಮಾಅತಿನ ಅಧ್ಯಕ್ಷರಾಗಿದ್ದ ಜನಾಬ್ ಎಂ. ಅಬ್ದುಲ್ಲ ತೀಫ್ ಸಾಹೇಬ್ 13-8-2001ರಂದು ಮಂಗಲ್ಪಾಡಿಯಲ್ಲಿ ಸಂಭವಿಸಿದ ಒಂದು ಬಸ್ ಅಪಘಾತದಲ್ಲಿ ಮೃತಪಟ್ಟರು ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್"). ಅವರಿಗೆ 55 ವರ್ಷ ಪ್ರಾಯವಾಗಿತ್ತು. ವಿಜಯ ಬೇಂಕಿನಲ್ಲಿ ಉದ್ಯೋಗಿಯಾಗಿದ್ದ ಅವರು ಮರಣಕ್ಕೆ 2-3 ತಿಂಗಳುಗಳಿಗೆ ಮುಂಚೆ ಸ್ವಯಂ ನಿವೃತ್ತಿಯನ್ನು ಹೊಂದಿದ್ದರು. ಮೂಲತಃ ಮಂಗಳೂರಿನ ಬೆಂಗ್ರೆ ನಿವಾಸಿಯಾಗಿದ್ದ ಅಬ್ದುಲ್ಲ ತೀಫ್ ಸಾಹೇಬರು 1963ರಲ್ಲಿ ಅಹ್ಮದಿಯತ್ ಸ್ವೀಕರಿಸಿ ಹಲವು ತರ ಕಷ್ಟ ನಷ್ಟಗಳಿಗೆ ಗುರಿಯಾಗಿದ್ದರು. ಅವರು ಖುರ್‌ಆನನ್ನು ಸುಶ್ರಾವ್ಯವಾಗಿ ಪಠಿಸುತ್ತಿದ್ದರು. ಸುಮಾರು 3 ವರ್ಷಗಳ ಕಾಲ ಮೊಗ್ರಾಲ್ ಜಮಾಅತಿನ ಅಧ್ಯಕ್ಷರಾಗಿದ್ದ ಅವರು ಕೇರಳ ರಾಜ್ಯ ಅಹ್ಮದಿಯಾ ಸಮಿತಿಯ ಲೆಕ್ಕ ಪರಿಶೋಧಕರಾಗಿಯೂ ಸೇವೆಸಲ್ಲಿಸಿದ್ದಾರೆ. ಅವರು "ಯುಗರಶ್ಮಿ" ಯ ಹಿತೈಷಿಗಳಲ್ಲೊಬ್ಬರಾಗಿದ್ದರು.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

# ಎಂ. ನೂರ್ ಅಹ್ಮದ್ ಸಾಹೇಬ್

ಸೊರಬದ ಪ್ರಥಮ ಅಹ್ಮದಿ ಜನಾಬ್ ಎಂ. ಅಬ್ದುರ್ರಹ್ಮಾನ್ ಸಾಹೇಬ್ (ಎರ್ನಾಕುಲಂ) ಅವರ ಹಿರಿಯ ಪುತ್ರ ಹಾಗೂ ಸೊರಬ ಅಹ್ಮದಿಯಾ ಜಮಾಅತಿನ ಅಧ್ಯಕ್ಷರಾಗಿದ್ದ ಜನಾಬ್ ಎಂ. ನೂರ್ ಅಹ್ಮದ್ ಸಾಹೇಬರು 18-11-2002 ರಂದು ನಿಧನರಾದರು ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್"). ಅವರಿಗೆ ಸುಮಾರು 66ವರ್ಷ ಪ್ರಾಯವಾಗಿತ್ತು.

ಅವರು ಸುಮಾರು 9 ವರ್ಷಗಳ ಕಾಲ ಸೊರಬ ಜಮಾಅತಿನ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ಅಹ್ಮದಿಯಾ ಚಟುವಟಿಕೆಗಳಲ್ಲಿ ತುಂಬಾ ಆಸಕ್ತಿಯುಳ್ಳವರಾಗಿದ್ದ ಅವರು "ಯುಗರಶ್ಮಿ" ಯ ಹಿತಚಿಂತಕರೂ ಆಗಿದ್ದರು. ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ತನ್ನು ದಯಪಾಲಿಸಲಿ - ಆಮೀನ್.

# ಎಂ. ಇಸ್ಮಾಈಲ್ ಸಾಹೇಬ್

ಮಂಜೇಶ್ವರದ ಪ್ರಥಮ ತಲೆಮಾರಿನ ಅಹ್ಮದಿಯರಲ್ಲಿ ಓರ್ವರಾದ ಜನಾಬ್ ಅಹ್ಮದ್ ಕುಞ್ಞಿ ಸಾಹೇಬರ ದ್ವಿತೀಯ ಪುತ್ರರಾದ ಜನಾಬ್ ಎಂ. ಇಸ್ಮಾಈಲ್ ಸಾಹೇಬ್ ಮಂಜೇಶ್ವರದಲ್ಲಿ 29-11-2-001 ರಂದು ನಿಧನರಾದರು ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್"). ಅವರಿಗೆ ಸುಮಾರು 57 ವರ್ಷ ಪ್ರಾಯವಾಗಿತ್ತು.

ದಿವಂಗತರಿಗೆ ಅಲ್ಲಾಹನು ಮಗ್ಫಿರತ್ ಮತ್ತು ಜನ್ನತ್ತನ್ನು ದಯಪಾಲಿಸಲಿ - ಆಮೀನ್.

**ಅತ್ಯಾಶೆ ಪಡಬಾರದು.....** *(8ನೇ ಪುಟದಿಂದ)*

ಸಹತಾಪ ತೋರಿಸುವುದಿಲ್ಲ. ಅವನು ಬಯಸಿರುತ್ತಿದ್ದರೆ ಇತರರಿಗೆ ಸಹಾಯನೀಡಲು ಅವನಿಗೆ ಸಾಧ್ಯವಾಗುತ್ತಿತ್ತು. ಆದರೆ, ಅವನು ಆ ವಿಚಾರದ ಬಗ್ಗೆ ಚಿಂತಿಸುವುದೇ ಇಲ್ಲ."

ಭೌತಿಕ ಸಂಪತ್ತಿನ ಮೇಲೆ ಮುಗಿಬೀಳುವವರಿಗೆ ಎಚ್ಚರಿಕೆ ನೀಡುತ್ತಾ ಅವರು ಹೀಗೆ ಹೇಳುತ್ತಾರೆ:

"ನೋಡಿರಿ, ಅವರು ನಾಯಿಗಳಂತೆಯೂ ಇರುವೆ ಗಳಂತೆಯೂ ಹದ್ದುಗಳಂತೆಯೂ ಹೀಗೆ ಲೋಕದ ಮೇಲೆ ಮುಗಿಬೀಳುತ್ತಾರೆ. ಈ ಲೋಕದಲ್ಲಿ ಸುಖಪಟ್ಟು ಜೀವಿಸುವವರು ಅಲ್ಲಾಹನ ಸಾಮೀಪ್ಯವನ್ನು ಪಡೆಯಲಾರರು." (ಕಿಶ್ತೀ ನೂಹ್)

ಪುನಃ ಹೇಳುತ್ತಾರೆ: "ಲೋಕದ ಅತಿಮೋಹದಲ್ಲಿ ಸಿಲುಕಿರುವವನು, ಪರಲೋಕದೆಡೆಗೆ ಕಣ್ಣೆತ್ತಿ ನೋಡದಿರುವವನು ನನ್ನ ಜಮಾಅತಿನಲ್ಲಿ ಸೇರಿದವನಲ್ಲ." ಆದ್ದರಿಂದ ಪರಲೋಕದ ಚಿಂತೆಯೊಂದಿಗೆ ನೀವು ನಿಮ್ಮ ಧನವನ್ನು ಸ್ವಂತ ಕಾರ್ಯಗಳಿಗೋಸ್ಕರವೂ ಖರ್ಚುಮಾಡಿರಿ.

ಹಝ್ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ:"ಒಬ್ಬ ಮುಮುಕ್ಷು ಯಥಾರ್ಥವಾದ ಸಂತೋಷ ಸ್ಥಿತಿಯನ್ನು ಸಣ್ಣ ಗುಡಿಸಲಿನಲ್ಲಿ ಕೂಡ ಗಳಿಸಬಲ್ಲನು. ಅದು ಭೌತಿಕವಾದ ಲಾಲಸೆಯುಳ್ಳ ಧನಿಕನಿಗೆ ತನ್ನ ಭವ್ಯಗೃಹದಲ್ಲಿ ಕೂಡ ಸಿಗಲಾರದು. ಲೋಕವು ಎಷ್ಟರ ಮಟ್ಟಿಗೆ ಲಭ್ಯವಾಗುವುದೋ ಅದಕ್ಕನುಗುಣವಾಗಿ ನಾಶಗಳುಂಟಾಗುತ್ತವೆ. ನೆನಪಿಡಿರಿ, ಭೌತಿಕ ಜೀವಿತದಲ್ಲಿ ಲೀನವಾಗಿರುವವನಿಗೆ ಯಥಾರ್ಥವಾದ ನೆಮ್ಮದಿಯೂ ಆನಂದವೂ ಲಭಿಸಲಾರದು. ಅಧಿಕವಾದ ಧನವೂ ಉತ್ತಮ ಉಡುಪೂ ಉತ್ತಮ ಆಹಾರವೂ ಯಥಾರ್ಥ ಸಂತೃಪ್ತಿಗೆ ಕಾರಣವಾಗುತ್ತವೆಂದು ಎಂದಿಗೂ ಭಾವಿಸಬಾರದು. ಬದಲಾಗಿ, ಅದು ದೊರಕುವುದು ಭಯಭಕ್ತಿಯ ಮೂಲಕವಾಗಿದೆ."

**(ಖುತ್ಬ ಜುಮುಅ 30-3-2001)**

**ಸಂಕ್ಷಿಪ್ತ ಅನುವಾದ : ಮುಹಮ್ಮದ್ ಯೂಸುಫ್**

ದೇವಾಸ್ತಿತ್ವವನ್ನು ರುಜುಗೊಳಿಸುವ, ಧರ್ಮಗಳ ಆವಶ್ಯಕತೆಯನ್ನು ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಧರ್ಮಗಳ ತುಲನಾತ್ಮಕ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಧರ್ಮ ಮತ್ತು ಧರ್ಮಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ,ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ತ್ವೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

| | | |
|---|---|---|
| ಬಿಡಿ ಪ್ರತಿ : ರೂ. 5-00 | ವಾರ್ಷಿಕ ಚಂದಾ : ರೂ. 20-00 | ಅಂಚೆ ಮೂಲಕ : ರೂ. 25-00 |


ವ್ಯವಹರಿಸಿರಿ :

The Editor

**YUGARASHMI**

Kannada Quarterly

10-23-1008/1, Floor, Ansari Road,

Bunder, Mangalore - 575001


ಈ ವರ್ಷದ "ಯುಗರಶ್ಮಿ"ಯ ಉಚಿತ ಪ್ರತಿಗಳನ್ನು ವಿತರಣೆ ಮಾಡಲು ಸಹಾಯಧನ ನೀಡಿದ ಉದಾರಶೀಲರು.

| | | ಪ್ರತಿಗಳು |
|---|---|---|
| 1. | ಜನಾಬ್ ರಶೀದ್ ಅಹ್ಮದ್ ಸಿದ್ದೀಖ್ ಸಾಹೇಬ್, ಮಂಗಳೂರು | 40 |
| 2. | ತಾಹಿರ ಸಿದ್ದೀಖ್ ಸಾಹಿಬ, ಮಂಗಳೂರು | 40 |
| 3. | ಜನಾಬ್ ಕೆ. ಎಂ. ಅಬ್ಬಾಸ್ ಸಾಹೇಬ್, ಮಡಿಕೇರಿ | 20 |
| 4. | ಜನಾಬ್ ಬಿ. ಎಸ್. ಎ. ರಹೀಂ ಸಾಹೇಬ್, ಮಡಿಕೇರಿ | 10 |

Regd. with the Registrar of Newspapers for India No. R.N. 27354/75
YUGARASHMI Kannada Quarterly, August - 2003

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ
ಏಕೈಕ ಟಿ. ವಿ. ಚ್ಯಾನೆಲ್

Muslim TV Ahmadiyya International

ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ
ಇಂಟರ್‌ನೇಶನಲ್

# THE FIRST ISLAMIC SATELLITE CHANNEL

**BROADCASTING ROUND THE CLOCK**

## AUDIO FREQUENCY

| | | |
|---|---|---|
| URDU | : | 6.50 |
| ENGLISH | : | 7.02 |
| ARABIC | : | 7.20 |
| BENGALI | : | 7.38 |
| FRENCH | : | 7.56 |
| DUTCH | : | 7.74 |
| TURKISH | : | 8.10 |
| RUSSIAN | : | 7.92 |
| INDONESIAN | : | 7.92 |
| GERMAN | : | 7.74 |

| | | |
|---|---|---|
| SATELLITE | : | ASIASAT-2 |
| DECODER | : | C - BAND |
| POSITION | : | 100.5° EAST |
| POLARITY | : | VERTICAL |
| DISH SIZE | : | 6 FEET MAX |
| FREQUENCY | : | 3660 |
| SYMBOL RATE | : | 27500 |
| LNB FREQUENCY | : | 5/50 |
| FEC | : | 3/4 |

**MTA International**, P.O. Box 12926, London SW 18 4ZN
Tel : 44-181 870 8517 Fax : 44-181 874 8344
Internet Code : http://www.alislam.org/mta

Edited and Published by Muhammad Yusuf on behalf of Jamath Ahmadiyya at 10-23-1008/1, I Floor, Ansari Road, Mangalore - 575 001
Printed at **Pranav Printers** Alake, Mangalore on behalf of Jubillee Printing Press, Mangalore.
Typeset at **Madhuban Graphics**, Alake, Mangalore - 575 003